ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 31 ಬುಧವಾರ 2024

₹4

ಸಂಪುಟ: 44 | ಸಂಚಿಕೆ: 283 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com




ಸುರೇಶ ಎಂ.ಕೆ.ಹಳ್ಳಿ
ಜೆ.ಡಿ.ಎಸ್. ಮುಖಂಡರು,
ಅಪೂರ್ವ ಪ್ರಾಪರ್ಟೀಸ್, ಬೋಗಾದಿ
2ನೇ ಹಂತ
ಸವಿತಾ ಸುರೇಶ್
ಮಾಜಿ ನಗರ ಪಾಲಿಕೆ ಸದಸ್ಯರು ಹಾಗೂ
ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು
ಮೈಸೂರು ಮಹಾನಗರ ಪಾಲಿಕೆ.
VISMAYA
ADVERTISERS
ಶ್ರೀ ಜಿ.ಡಿ.ಹರೀಶ್ ಗೌಡ
ಜನ್ಮದಿನದ ಶುಭಾಶಯಗಳು
ಶಾಸಕರು, ಹುಣಸೂರು ವಿಧಾನಸಭಾ ಕ್ಷೇತ್ರ
ಶುಭಾಶಯ ಕೋರುವವರು : 44ನೇ ವಾರ್ಡಿನ ಬೋಗಾದಿ 2ನೇ ಹಂತ ಮತ್ತು ಜನತಾ ನಗರ ಮುಖಂಡರು, ಅಭಿಮಾನಿಗಳು.


ಹುಣಸೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಯುವ ಶಾಸಕರಾದ
ಸನ್ಮಾನ್ಯ ಶ್ರೀ ಜಿ.ಡಿ.ಹರೀಶ್‌ಗೌಡ ರವರಿಗೆ ಹಾಗೂ
ಎ.ಪಿ.ಎಂ.ಸಿ. ಮಾಜಿ ಸದಸ್ಯರು ಮತ್ತು ಶ್ರೀನಿಧಿ ಸ್ಟೀಲ್ಸ್ ಮತ್ತು ಶ್ರೀನಿಧಿ ಡೆವಲಪರ್ಸ್
ಮಾಲೀಕರಾದ ಕೋಟೆಹುಂಡಿ ಶ್ರೀ ಮಹದೇವ್ ರವರಿಗೆ
ದಿನಾಂಕ : 02-02-2024
ಜನ್ಮದಿನದ ಶುಭಾಶಯಗಳು
ಪ್ರಭಾ
ಗ್ರಾ.ಪಂ. ಉಪಾಧ್ಯಕ್ಷರು,
ಬಲ್ಲಹಳ್ಳಿ ಮನು
ಅಧ್ಯಕ್ಷರು, ಲಯನ್ಸ್ ಕ್ಲಬ್ ಆಫ್ ಮೈಸೂರು
PWD ಗುತ್ತಿಗೆದಾರರು
ಡಿ.ಬಿ. ಶಂಕರ್
ಗ್ರಾ.ಪಂ.ಸದಸ್ಯರು
ಶುಭಕೋರುವವರು : ದೊಡ್ಡಮಾರಗೌಡನಹಳ್ಳಿ ಗ್ರಾ.ಪಂ. ಅಧ್ಯಕ್ಷರು,
ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಹಾಗೂ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಮುಖಂಡರುಗಳು
ಕೆ. ಮಾದಪ್ಪ
ಜೆಡಿಎಸ್ ಮುಖಂಡರು
ಸಿವಿಲ್ ಕಂಟ್ರ್ಯಾಕ್ಟರ್, ಮಾದಹಳ್ಳಿ
93437 06416





ನಕ್ಕರೆ ಅದೇ ಸ್ವರ್ಗ

ಆತ : "ಅದೃಷ್ಟವಂತ ಗಂಡ ಅಂದರೆ ಹೇಗಿರ್ತಾನೆ?"
ಈತ : "ಎಣಿಸಲಾಗದಷ್ಟು ಹಣಾನ ಮನೆಗೆ ತಂದು ಹಾಕ್ತಿರ್ತಾನೆ"
ಆತ : "ಅದೃಷ್ಟವಂತ ಹೆಂಡತಿ ಅಂದರೆ?"
ಈತ : "ಅಂಥ ಗಂಡನ ಕೈ ಹಿಡಿದು ಅಷ್ಟು ಹಣಾನ ಖರ್ಚು ಮಾಡಿಸುವವಳು!"

ಮೈಸೂರು ಮಿತ್ರ

ಬುಧವಾರ, 31 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಇಡೀ ಮಾನವ ಕೋಟಿಗೆ ಪ್ರೀತಿ ಅನುರೂಪ ತೋರಿಸುವುದೇ ನಿಜವಾದ ಧರ್ಮ – ಸ್ವಾಮಿ ವಿವೇಕಾನಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂತಿರೋದಕ್ಕಿಂತ ಕೂಲಿ ಮಾಡುವುದೇ ಲೇಸು

ನಿಮ್ಮ ಪತ್ರಗಳು

ಸಂಘರ್ಷ ಬಿಜೆಪಿ ಚುನಾವಣಾ ಪ್ರಣಾಳಿಕೆಯೇ?

ಮಾನ್ಯರೆ,

ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಉತ್ತಮ ಆಡಳಿತ ನಡೆಸುತ್ತಿದೆ. ಅದರ ಗ್ಯಾರಂಟಿ ಯೋಜನೆ ಪಕ್ಷಾತೀತವಾಗಿ ಎಲ್ಲರ ಮನೆಗೂ ತಲುಪುತ್ತಿದೆ. ಇದರಿಂದ ವಿಧಾನಸಭಾ ಚುನಾವಣೆ ರೀತಿಯೇ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜಯ ಸಾಧಿಸಬಹುದು ಎನ್ನುವುದನ್ನು ಬಿಜೆಪಿ ಅರಿತಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಬಿಜೆಪಿ ಒಂದು ವಿರೋಧ ಪಕ್ಷವಾಗಿ ಕಾಂಗ್ರೆಸನ್ನು ಇಕ್ಕಟ್ಟಿಗೆ ಸಿಲುಕಿಸಲು ಸಾಧ್ಯವಾಗಿಲ್ಲ. ಸರ್ಕಾರದ ತಪ್ಪುಗಳನ್ನು ಎತ್ತಿಹಿಡಿಯಲು ವಿಫಲವಾಗಿವೆ. ಹೀಗಿರುವಾಗ ಬಿಜೆಪಿ ಯಾವ ಮಾನದಂಡ ಇಟ್ಟುಕೊಂಡು ಚುನಾವಣೆ ಎದುರಿಸಬೇಕು ಎಂಬುದು ತಿಳಿಯದೇ ಹನುಮ ಧ್ವಜ ವಿಚಾರ ಎತ್ತಿಕೊಂಡು ರಾಜ್ಯದಲ್ಲಿ ಶಾಂತಿ ಭಂಗ ಮಾಡುತ್ತಿದೆ. ಧಾರ್ಮಿಕ ಆಚರಣೆಗಳನ್ನು ಕೆಲವು ನಿರ್ದಿಷ್ಟ ಸ್ಥಳದಲ್ಲಿ ಮಂದಿರ ಗುಡಿ ಗೋಪುರಗಳಲ್ಲಿ ಆಚರಿಸಬೇಕು. ಸಿಕ್ಕ ಸಿಕ್ಕ ಕಡೆ ಆಚರಣೆ ಮಾಡಿ ಪೂಜಿತರಿಗೆ ಅಗೌರವ ತರುವುದು ಶೋಭೆಯಲ್ಲ. ಅಲ್ಲದೆ ಕುರುಬರ ಹಾಸ್ಟೆಲ್ ಮೇಲೆ ಬಿಜೆಪಿ ಕಾರ್ಯಕರ್ತರು ಕಲ್ಲು ತೂರಾಟ ಮಾಡಿರುವುದು ಬಿಜೆಪಿಯ ಕೋಮುವಾದದ ನಿಲುವನ್ನು ಅನಾವರಣ ಮಾಡಿದೆ. ಸಂಘರ್ಷದಿಂದ ಬಿಜೆಪಿಯವರು ಗೆಲ್ಲುತ್ತೇವೆ ಎಂದುಕೊಂಡಿದ್ದರೆ ಅರಸು ಕಾಲದ ಆಡಳಿತವನ್ನು ಒಮ್ಮೆ ನೆನಪು ಮಾಡಿಕೊಳ್ಳಿ. ಉಳುವವನೆ ಭೂ ಒಡೆಯ ಆದೇಶ ಜಾರಿಗೆ ತಂದ ದೇವರಾಜ ಅರಸರು ಯಾವ ಕಾರ್ಯಕ್ರಮ ಮಾಡಿದರೂ ಜನ ಹೆಚ್ಚಾಗಿ ಸೇರುತ್ತಿರಲಿಲ್ಲವಂತೆ. ಆಗ ಮಾಧ್ಯಮದವರು ಪ್ರಶ್ನೆ ಮಾಡಿದರಂತೆ ಸರ್ ಒಳ್ಳೆಯ ಕೆಲಸ ಮಾಡಿದರೂ ನಿಮ್ಮ ಕಾರ್ಯಕ್ರಮದಲ್ಲಿ ಜನರೇ ಇರುವುದಿಲ್ಲ. ಚುನಾವಣೆ ಹೇಗೆ ಗೆಲ್ಲುತ್ತೀರಿ ಎಂದಾಗ ಅರಸರು ಮತದಾರರು ತೆರೆಮರೆಯಲ್ಲಿದ್ದಾರೆ ಎಂದರಂತೆ. ಅಂದಿನ ಚುನಾವಣೆಯಲ್ಲಿ ಅರಸರ ಪಕ್ಷ ಅಧಿಕಾರಕ್ಕೆ ಬಂದಿತಂತೆ. ಹಾಗೆ ರಾಜ್ಯದ ಬಿಜೆಪಿ ನಾಯಕರು ಜಾತಿ, ಧರ್ಮದ ವಿಚಾರ ಬಿಟ್ಟು, ಕಾವೇರಿ ಸಮಸ್ಯೆ, ರೈತರ ಸಮಸ್ಯೆ, ನಿರುದ್ಯೋಗ ಸಮಸ್ಯೆ, ಸಾಮಾನ್ಯ ಜನರ ಸಮಸ್ಯೆ ನಿವಾರಿಸಿ ಜನಪರ ಆಡಳಿತ ನೀಡಿ ಮತ ಕೇಳಿ. ಅದನ್ನು ಬಿಟ್ಟ ರಾಜ್ಯದಲ್ಲಿ ಬೇಡದ ವಿಚಾರ ಇಟ್ಟುಕೊಂಡು ಈ ರೀತಿ ಅಶಾಂತಿ ಉಂಟುಮಾಡಿದರೆ ಸಾಮಾನ್ಯ ಜನರು ನಿಮ್ಮನ್ನು ಕ್ಷಮಿಸುವುದಿಲ್ಲ. ಸಿ.ಟಿ.ರವಿ, ಅಶೋಕ್, ಕುಮಾರಸ್ವಾಮಿಯವರು ತೋರಿದ ಮಾರ್ಗ ಮುಂದೊಂದು ದಿನ ಅವರಿಗೂ ಎದುರಾಗಬಹುದು. ಏಕೆಂದರೆ ಅವರು ಗಾಜಿನ ಮನೆಯಲ್ಲೇ ಇರುವುದು. ಸಂಘರ್ಷವೇ ನಿಮ್ಮ ಪ್ರಣಾಳಿಕೆಯಾಗದಿರಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ವಿರೋಧ ಪಕ್ಷಗಳ ಸ್ಥಿತಿ ಶೋಚನೀಯವಾಗಬಹುದು!

ಮಾನ್ಯರೆ,

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಸಂಘಟಿತ ಹೋರಾಟಕ್ಕೆ ಒಗ್ಗೂಡಿದ್ದ 28 ವಿರೋಧ ಪಕ್ಷಗಳ ಒಕ್ಕೂಟವಾದ ಎನ್‌ಡಿಐಎ ಮೈತ್ರಿಕೂಟದಲ್ಲಿ ಅಪಸ್ವರ ಕೇಳಿ ಬಂದಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ವಿರೋಧ ಪಕ್ಷಗಳ ಒಕ್ಕೂಟದ ಈ ಸಂಘಟನೆಯ ನೇತೃತ್ವವನ್ನು ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ವಹಿಸಿದೆ. ಸೀಟು ಹೊಂದಾಣಿಕೆ ವಿಚಾರದಲ್ಲಿ ಕಾಂಗ್ರೆಸ್ ಜೊತೆ ಮುನಿಸಿಕೊಂಡಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಆಮ್ ಆದ್ಮಿ ಪಕ್ಷದ ಹಿರಿಯ ನಾಯಕ ಹಾಗೂ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಕಾಂಗ್ರೆಸ್ ಜೊತೆ ಮುಂಬರುವ ಲೋಕಸಭೆಯ ಚುನಾವಣೆಯಲ್ಲಿ ಸ್ಥಾನಗಳ ಹೊಂದಾಣಿಕೆ ಇಲ್ಲ ಎಂದು ಹೇಳುವ ಮೂಲಕ ಬಿಜೆಪಿ ವಿರುದ್ಧದ ಮೈತ್ರಿಕೂಟಕ್ಕೆ ಮರ್ಮಾಘಾತವನ್ನು ಉಂಟು ಮಾಡಿದ್ದಾರೆ. ಮತ್ತೊಂದೆಡೆ, ಬಿಹಾರದ ಮುಖ್ಯಮಂತ್ರಿ ನಿತಿಶ್ ಕುಮಾರ್ ಸಹ ಎನ್‌ಡಿಎಗೆ ಮರು ಸೇರ್ಪಡೆಯಾಗಿದ್ದಾರೆ. ಮಹತ್ವದ ಮತ್ತೊಂದು ಬೆಳವಣಿಗೆಯಲ್ಲಿ, ರಾಜ್ಯದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಸಹ ಬಿಜೆಪಿಗೆ ವಾಪಸ್ಸಾಗಿದ್ದಾರೆ. ಈ ಎಲ್ಲಾ ಬೆಳವಣಿಗೆಗಳು ವಿರೋಧ ಪಕ್ಷಗಳ ಸಂಘಟಿತ ಹೋರಾಟಕ್ಕೆ ಬಿದ್ದ ಹೊಡೆತವಾಗಿದೆ. ಅಯೋಧ್ಯೆಯಲ್ಲಿ ರಾಮಮಂದಿರದ ಅಧಿಕೃತ ಉದ್ಘಾಟನೆ ನಂತರ, ಬಿಜೆಪಿ ದೇಶಾದ್ಯಂತ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಂಡಿದೆ. ಮೋದಿ ನಾಯಕತ್ವ ಮತ್ತಷ್ಟು ಪ್ರಬಲವಾಗಿದೆ. ಮುಂದಿನ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಮಿತ್ರ ಪಕ್ಷಗಳು ಜಯಭೇರಿ ಬಾರಿಸುವ ಸಾಧ್ಯತೆಗಳು ಹೆಚ್ಚಾಗಿದೆ. ವಿರೋಧ ಪಕ್ಷಗಳು ತಮ್ಮ ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡು ಸಂಘಟಿತ ಹೋರಾಟ ನೀಡದಿದ್ದರೆ, ಅವುಗಳ ಸ್ಥಿತಿ ಶೋಚನೀಯವಾಗಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಡಾ.ಮಂಜುನಾಥ್‌ರವರೇ ಮುಂದುವರೆಯಲಿ

ಮಾನ್ಯರೆ,

ಅತ್ಯುತ್ತಮ ಆಸ್ಪತ್ರೆಯೆಂದು ಹೆಸರು ಪಡೆದು ಎಲ್ಲರಿಗೂ ಉತ್ತಮ ಚಿಕಿತ್ಸೆ ನೀಡುತ್ತಿರುವ ಜಯದೇವ ಹೃದ್ರೋಗ ಆಸ್ಪತ್ರೆಯ ಬಗ್ಗೆ ಎಲ್ಲೂ ದೂರುಗಳು ಕೇಳಿಬಂದಿಲ್ಲ. ಡಾ. ಮಂಜುನಾಥ್ ಅವರು ನಿರ್ದೇಶಕರಾಗಿ ಬಂದ ಮೇಲೆ ಮೈಸೂರು ಮತ್ತು ಗುಲ್ಬರ್ಗಾದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ಆರಂಭವಾಗಿ ಜನಸ್ನೇಹಿಯಾಗಿದೆ. ಒಂದು ಸಂಸ್ಥೆ ಚನ್ನಾಗಿ ಕಾರ್ಯ ನಿರ್ವಹಿಸಬೇಕಾದರೆ ಅದರ ಮುಖ್ಯಸ್ಥನ ಪಾತ್ರ ಹಿರಿದು. ಮಾಜಿ ಪ್ರಧಾನಿ ಯವರ ಅಳಿಯ ಆದರೂ ಕುಟುಂಬದ ನೆರಳು ಬೀಳದಂತೆ ಆಸ್ಪತ್ರೆಯನ್ನು ಮುಂದು ವರೆಸಿದ್ದಾರೆ. ಸರ್ಕಾರಿ ಸೇವೆ ಅಂದರೆ ಎಲ್ಲರೂ ಒಂದಲ್ಲ ಒಂದು ದಿನ ನಿವೃತ್ತರಾಗಬೇಕು. ಕೆಲವರ ಸ್ಥಾನವನ್ನು ತುಂಬಲು ಬಹಳ ಕಷ್ಟವಾಗುತ್ತದೆ. ಸರ್ಕಾರಕ್ಕೆ ಅಂತಹ ಸೇವಾ ಮನೋಭಾವ ಇರುವವರನ್ನು ಮುಂದುವರೆಸಲು ಅಧಿಕಾರ ಇರುತ್ತದೆ. ಅದರಲ್ಲೂ ಮಂಜುನಾಥ್ ಅವರು ಅಜಾತಶತ್ರು. ಇವರನ್ನೇ ಅವರು ಇಷ್ಟಪಡುವವರೆಗೆ ಮುಂದು ವರೆಸಿದ್ದರೂ ಯಾರ ವಿರೋಧವಿರುತ್ತಿರಲಿಲ್ಲ. ಆದ್ದರಿಂದ ಸರ್ಕಾರವು ಇಂತಹ ನಿಸ್ಪೃಹ ವೈದ್ಯರ ಮಾರ್ಗದರ್ಶನ ಸಂಸ್ಥೆಗೆ ಸಿಗುವಂತೆ ಅವರ ಸೇವೆಯನ್ನು ಮುಂದುವರೆಸಲಿ.–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು

ಏಕರೂಪದ ವಸ್ತ್ರ ಸಂಹಿತೆ ಜಾರಿ ಮಾಡಲಿ

ಮಾನ್ಯರೆ,

ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ವಸ್ತ್ರ ಸಂಹಿತೆ ಜಾರಿ ಮಾಡಿ ಸರಕಾರ ಆದೇಶಿಸಿರುವುದು ಸಂತೋಷದ ವಿಚಾರ. ಅಂತೆಯೇ ಒಂದೊಂದು ದೇವಾಲಯ ದಲ್ಲಿ ಒಂದೊಂದು ರೀತಿಯ ವಸ್ತ್ರ ಸಂಹಿತೆ ಇರುವ ಬದಲು ಕರ್ನಾಟಕ ರಾಜ್ಯಾದ್ಯಂತ ದೇಗುಲಗಳ ಪ್ರವೇಶಕ್ಕೆ ಏಕರೂಪದ ವಸ್ತ್ರ ಸಂಹಿತೆಯನ್ನು ಜಾರಿಮಾಡುವ ಅಗತ್ಯವಿದೆ. ಕರ್ನಾಟಕದ ಯಾವುದೇ ದೇವಾಲಯಕ್ಕೆ ಹೋದರೂ ಭಕ್ತಾದಿಗಳು ಮೇಲುಡುಗೆ ತೆಗೆದು ಪಂಚೆಯಂತಹ ಉಡುಗೆಯನ್ನು ತೊಟ್ಟು ಹೋದರೆ ಲಕ್ಷಣವಲ್ಲವೇ?

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು.

ಯುವ ಸಮುದಾಯ ಆರೋಗ್ಯಕರ ರಾಜಕೀಯ ಚಿಂತನೆ ಮಾಡದಿದ್ದರೆ ದೇಶಕ್ಕೆ ತುಂಬಾ ನಷ್ಟ

–ಜಿ.ಡಿ.ಹರೀಶ್‌ಗೌಡ, ಹುಣಸೂರು ಶಾಸಕರು



ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್‌ನ ನಿಕಟಪೂರ್ವ ಅಧ್ಯಕ್ಷರೂ ಆದ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್ ಗೌಡರ ಬೆಳವಣಿಗೆಯ ಹಾದಿ ಯುವ ಸಮುದಾಯಕ್ಕೆ ಸ್ಫೂರ್ತಿ. ಮಾಜಿ ಸಚಿವರು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಜಿ.ಟಿ.ದೇವೇಗೌಡರು ಹಾಗೂ ಹಿರಿಯ ಸಹಕಾರಿ ಶ್ರೀಮತಿ ಲಲಿತಾ ದಂಪತಿಯ ಪುತ್ರ ಜಿ.ಡಿ.ಹರೀಶ್‌ಗೌಡರು, ತಂದೆ–ತಾಯಿ ನಾಮಬಲಕ್ಕಿಂತ ಸ್ವಂತ ಪರಿಶ್ರಮ ಹಾಗೂ ಸೇವಾಗುಣದಿಂದ ಜನಪ್ರೀತಿ ಸಂಪಾದಿಸಿದ್ದಾರೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯನಾಗಿ ಸಹಕಾರ ಕ್ಷೇತ್ರ ಪ್ರವೇಶಿಸಿದ ಇವರು ಮೈಸೂರು ಹಾಗೂ ಚಾಮರಾಜನಗರ ಸಹಕಾರಿಗಳ ವಿಶ್ವಾಸ ಗಳಿಸಿ, ಅವರ ಆಶೀರ್ವಾದದಿಂದ ಚಿಕ್ಕ ವಯಸ್ಸಿನಲ್ಲೇ ಸಹಕಾರಿ ಕ್ಷೇತ್ರದ ಉನ್ನತ ಸ್ಥಾನಕ್ಕೇರಿದ್ದಾರೆ. ಎಂಸಿಡಿಸಿಸಿ ಬ್ಯಾಂಕ್ ಚುಕ್ಕಾಣಿ ಹಿಡಿದು ಕೇವಲ ಐದು ವರ್ಷಗಳಲ್ಲಿ ಐತಿಹಾಸಿಕ ಅಭಿವೃದ್ಧಿ ಸಾಧಿಸಿದ್ದಾರೆ. ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರಾಗಿ ರಾಜ್ಯ ಮಟ್ಟದಲ್ಲೂ ಗಮನ ಸೆಳೆದಿದ್ದಾರೆ. ಸ್ವಗ್ರಾಮ ಗುಂಗ್ರಾಲ್ ಛತ್ರದಲ್ಲೇ ಬಾಲ್ಯ ಕಳೆದು, ಮೈಸೂರಿನ ಸೇಂಟ್ ಜೋಸೆಫ್ ಶಾಲೆ, ಮರಿಮಲ್ಲಪ್ಪ ಶಾಲೆ, ಮಹಾಜನ ಪಿಯು ಕಾಲೇಜು, ಎನ್‌ಐಇ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದಿದ್ದಾರೆ. ಸಿವಿಲ್ ಇಂಜಿನಿಯರಿಂಗ್ ಪದವಿ ನಂತರ ವಿದೇಶದಲ್ಲಿ ಉನ್ನತ ಶಿಕ್ಷಣ ಪೂರೈಸಿ, ಸ್ವಂತ ಉದ್ದಿಮೆ ಆರಂಭಿಸುವ ಚಿಂತನೆಯಲ್ಲಿದ್ದರು. ಆದರೆ 2010ರ ಜಿಲ್ಲಾ ಪಂಚಾಯ್ತಿ ಚುನಾವಣೆ ಅವರ ಜೀವನದ ದಿಕ್ಕು ಬದಲಿಸಿತು. ಹುಣಸೂರು ತಾಲೂಕು ಹನಗೋಡು ಜಿಪಂ ಕ್ಷೇತ್ರದಿಂದ ಸ್ಪರ್ಧಿಸಿದ್ದ ತಾಯಿ ಲಲಿತಾ ಅವರ ಪರವಾಗಿ ಪ್ರಚಾರಕ್ಕಿಳಿಯುವ ಮೂಲಕ ಆಕಸ್ಮಿಕವಾಗಿ ರಾಜಕೀಯ ಕ್ಷೇತ್ರ ಪ್ರವೇಶಿಸಿದರು. ನಂತರದಲ್ಲಿ ತಂದೆಯವರೊಂದಿಗೆ ಹುಣಸೂರು ಹಾಗೂ ಚಾಮುಂಡೇಶ್ವರಿ ಕ್ಷೇತ್ರಗಳಲ್ಲಿ ಕೆಲಸ ಮಾಡಿದರು. ದಶಕದಿಂದ ಜನರೊಂದಿಗಿನ ಒಡನಾಟದಲ್ಲಿದ್ದ ಜಿ.ಡಿ.ಹರೀಶ್ ಗೌಡರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹುಣಸೂರು ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, 94,666 ಮತಗಳೊಂದಿಗೆ ಗೆಲುವು ಸಾಧಿಸಿದರು. ಸಹಕಾರ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಯುವ ಶಾಸಕ ಜಿ.ಡಿ.ಹರೀಶ್ ಗೌಡ(ಜಿಡಿಹೆಚ್)ರಿಗೆ ಇಂದು ಹುಟ್ಟುಹಬ್ಬದ ಸಂಭ್ರಮ. ಈ ಸಂದರ್ಭದಲ್ಲಿ ಶಾಸಕರಾಗಿ ಹಾಗೂ ಯಶಸ್ವಿ ಸಹಕಾರಿಯಾಗಿ ಅವರು ತಮ್ಮ ಮನದಾಳದ ಮಾತುಗಳನ್ನು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ.

ಜನ್ಮದಿನದ ವಿಶೇಷ

● ಸಂದರ್ಶನ: ಎಸ್.ಬಿ.ದೇವರಾಜ

ಮೈಸೂರು ಮಿತ್ರ: *ಹುಣಸೂರು ಶಾಸಕರಾಗಿ ಕಳೆದ ಏಳೆಂಟು ತಿಂಗಳ ನಿಮ್ಮ ಕಾರ್ಯಾನುಭವ ಹೇಗಿದೆ?*

ಜಿ.ಡಿ.ಹರೀಶ್‌ಗೌಡ: ಹುಣಸೂರು ಎಲ್ಲಾ ಧರ್ಮ, ಜಾತಿ, ವರ್ಗಗಳ ಜನರಿರುವ ವಿಶೇಷ ಕ್ಷೇತ್ರ ಎಲ್ಲರೂ ತುಂಬಾ ಪ್ರೀತಿ–ವಿಶ್ವಾಸ ತೋರುತ್ತಾರೆ. ಆದರೆ ಬಹಳ ಹಿಂದುಳಿದಿರುವ ತಾಲೂಕು. ಜನ ಸಂಕಷ್ಟದಲ್ಲಿದ್ದಾರೆ. ಇಲ್ಲಿನ ಸಾಕಷ್ಟು ಸಮಸ್ಯೆಗಳು ಕಳೆದ ಏಳೆಂಟು ತಿಂಗಳಲ್ಲಿ ನನ್ನ ಅನುಭವಕ್ಕೆ ಬಂದಿವೆ. ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ್ದೇನೆ.

ಮಿತ್ರ: *ಚುನಾವಣೆ ಸಂದರ್ಭದಲ್ಲಿ ನೀಡಿದ್ದ ಭರವಸೆಗಳನ್ನು, ಈಡೇರಿಸುವ ನಿಟ್ಟಿನಲ್ಲಿ ನಿಮ್ಮ ಪ್ರಯತ್ನ ಹೇಗೆ ಸಾಗಿದೆ?*

ಜಿಡಿಹೆಚ್: ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಆಗದಿರುವುದು, ಆಶ್ರಯ ಬಡಾವಣೆಗಳನ್ನು ನಿರ್ಮಿಸದಿರುವುದು, ಬಡವರಿಗೆ ನಿವೇಶನ ಹಾಗೂ ಮನೆ ಹಂಚಿಕೆ ಮಾಡದಿರುವುದು, ಬಹುಮುಖ್ಯವಾಗಿ ಕಾಲುವೆಗಳು, ಏರಿ ಮತ್ತು ರಸ್ತೆಗಳ ದುರಸ್ತಿಯಾಗದಿರುವುದು ಹೀಗೆ ಸಾಕಷ್ಟು ವಿಚಾರಗಳ ಬಗ್ಗೆ ಚುನಾವಣೆ ಪೂರ್ವದಲ್ಲಿ ಚರ್ಚೆ ಮಾಡಿದ್ದೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ. ಸಂಬಂಧಪಟ್ಟ ಸಚಿವರುಗಳನ್ನು ಭೇಟಿ ಮಾಡಿ, ಕ್ಷೇತ್ರದ ಸಮಸ್ಯೆಗಳನ್ನು ಅವರ ಗಮನಕ್ಕೆ ತಂದಿದ್ದೇನೆ. ಸದ್ಯ ಯಾವುದೇ ಅನುದಾನ ಬಾರದ ಕಾರಣ ಕೆಲಸ ಆರಂಭವಾಗಿಲ್ಲ. ಆದರೆ ಆಶ್ರಯ ಬಡಾವಣೆ ನಿರ್ಮಾಣಕ್ಕೆ ಸೂಕ್ತ ಜಾಗ ಗುರುತಿಸಿ, ಸರ್ವೆ ಮಾಡಿ, ಒತ್ತುವರಿಯಾಗಿದ್ದರೆ ತೆರವು ಮಾಡಿಸಿ ಬಂದೋಬಸ್ತ್ ಮಾಡಿಕೊಳ್ಳುವಂತೆ ತಾಲೂಕು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಆ ನಿಟ್ಟಿನಲ್ಲಿ ಅವರು ಕಾರ್ಯೋನ್ಮುಖರಾಗಿದ್ದು, ಈ ಹಿಂದೆ ಮೀಸಲಿಡಲಾಗಿದ್ದ ಜಾಗವನ್ನು ಗುರುತಿಸುತ್ತಿದ್ದಾರೆ. ಸಚಿವರು ಮುಂದಿನ ದಿನಗಳಲ್ಲಿ ಅನುದಾನ ನೀಡುವ ಭರವಸೆ ನೀಡಿದ್ದಾರೆ.

ಮಿತ್ರ: *ಶಾಸಕರಾಗಿ ಕಾರ್ಯದೊತ್ತಡದ ನಡುವೆ ಸಹಕಾರ ಕ್ಷೇತ್ರದ ಸೇವೆಗೆ ಹೇಗೆ ಸಮಯ ಹೊಂದಿಸಿಕೊಳ್ಳುವಿರಿ?*

ಜಿಡಿಹೆಚ್: ನಾನು ಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿದ್ದಾಗ ಮೈಸೂರು–ಚಾಮರಾಜನಗರ ಜಿಲ್ಲೆಗಳ ರೈತರಿಗೆ ಯಥೇಚ್ಛವಾಗಿ ಸಾಲ ಕೊಟ್ಟಿದ್ದೇವೆ. ಬ್ಯಾಂಕ್ ಠೇವಣಿ ಸುಮಾರು ಮೂರು ಪಟ್ಟು ಹೆಚ್ಚಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಟ್ಟಡ ನಿರ್ಮಾಣಕ್ಕೆ ಅನುದಾನ ಕಲ್ಪಿಸುವ ಸಂಪ್ರದಾಯ ಆರಂಭಿಸಿ, ಸುಮಾರು ನಾಲ್ಕೈದು ಕೋಟಿ ಅನುದಾನ ನೀಡಿದ್ದೇವೆ. ಬ್ಯಾಂಕ್ ಅಭಿವೃದ್ಧಿ ಹಾಗೂ ಸುಧಾರಣೆ ಗಮನಿಸಿರುವ ಎರಡೂ ಜಿಲ್ಲೆಗಳ ಸಹಕಾರಿಗಳು ನನ್ನ ಮೇಲೆ ಅತೀವ ವಿಶ್ವಾಸ ಹೊಂದಿದ್ದಾರೆ. ಹಾಗಾಗಿ ನಾನು ಶಾಸಕನಾಗಿದ್ದರೂ ಎರಡೂ ಜಿಲ್ಲೆಗಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯಕ್ರಮಗಳು ಸೇರಿದಂತೆ ಸಹಕಾರಿ ಕ್ಷೇತ್ರದ ಕಾರ್ಯಗಳಲ್ಲಿ ಭಾಗಿಯಾಗುತ್ತೇನೆ. ಶಾಸಕರಾಗಿ ಕಾರ್ಯದೊತ್ತಡವಿದ್ದರೂ ಸಹಕಾರ ಕ್ಷೇತ್ರಕ್ಕೆ ವಿಶೇಷ ಒತ್ತು ನೀಡುತ್ತೇನೆ.



ಮಿತ್ರ: *ಹುಣಸೂರು ಕ್ಷೇತ್ರದಲ್ಲಿ ಕಂಡ ಗಂಭೀರ ಸಮಸ್ಯೆಗಳು ಹಾಗೂ ಶಾಸಕರಾಗಿ ನಿಮ್ಮ ಆದ್ಯತೆಯ ಯೋಜನೆಗಳೇನು?*

ಜಿಡಿಹೆಚ್: ಕಾಡಂಚಿನ ಪ್ರದೇಶದಲ್ಲಿ ನಮ್ಮ ರೈತರು ಮತ್ತು ಅರಣ್ಯ ಇಲಾಖೆ ಗಿರುವ ಸಂಘರ್ಷ. ಕಾಡುಪ್ರಾಣಿಗಳ ಹಾವಳಿ ಗಂಭೀರವಾಗಿದೆ. ರೈತರು ಉಳುಮೆ ಮಾಡುತ್ತಿರುವ ಭೂಮಿಯನ್ನು ತೆರವು ಮಾಡಿಸಲು ಅರಣ್ಯ ಇಲಾಖೆ ಪ್ರಯತ್ನ ನಡೆಸಿದೆ. ಕಾಡುಪ್ರಾಣಿಗಳಿಂದ ಪ್ರಾಣ ಹಾನಿ ಆಗುತ್ತಿದ್ದು, ನಾನು ಶಾಸಕನಾದ ಮೇಲೆ ಐದಾರು ಬಾರಿ ಜನರ ಮೇಲೆ ಹುಲಿ ದಾಳಿಯಾಗಿದೆ. ಈ ಬಗ್ಗೆ ಅರಣ್ಯ ಸಚಿವರೊಂದಿಗೆ ಚರ್ಚೆ ಮಾಡಿದ್ದೇನೆ. ಅವರು ಸಭೆ ನಡೆಸಿದ್ದು, ಪರಿಹಾರ ಕ್ರಮದ ಭರವಸೆ ನೀಡಿದ್ದಾರೆ. ನಾಲೆಗಳ ದುರಸ್ತಿ ಮಾಡಿಸಿ ರೈತರಿಗೆ ಸರಿಯಾದ ಸಮಯದಲ್ಲಿ ನೀರು ಒದಗಿಸಬೇಕು. ರೈತರು ಜಮೀನುಗಳಿಗೆ ಹೋಗಲಾರದ ಸ್ಥಿತಿಯಲ್ಲಿರುವ ಏರಿಗಳನ್ನು ದುರಸ್ತಿಪಡಿಸಬೇಕು. ಸಾಕಷ್ಟು ರೈತರಿಗೆ ಸಾಗುವಳಿ ಚೀಟಿ ಸಿಕ್ಕಿಲ್ಲ. ಸಾಕಷ್ಟು ಜನರಿಗೆ ನಿವೇಶನಗಳಿಲ್ಲದ ಕಾರಣ ಒಂದೇ ಮನೆಯಲ್ಲೇ ಎರಡು–ಮೂರು ಕುಟುಂಬಗಳು ವಾಸಿಸುತ್ತಿವೆ. ಮಳೆ ಬಂದರೆ ಹುಣಸೂರು ನಗರವೇ ಜಲಾವೃತವಾಗುತ್ತದೆ. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಇವೆಲ್ಲವೂ ಆದ್ಯತೆಯ ಕೆಲಸಗಳಾಗಿವೆ.

ಮಿತ್ರ: *ಬಿಜೆಪಿ–ಜೆಡಿಎಸ್ ಹೊಂದಾಣಿಕೆ ನಂತರದಲ್ಲಿ ಕ್ಷೇತ್ರದ ಜನರ ಭಾವನೆಯಲ್ಲೇನಾದರೂ ವ್ಯತ್ಯಾಸ ಕಂಡಿದ್ದೀರಾ?*

ಜಿಡಿಹೆಚ್: ಜೆಡಿಎಸ್–ಬಿಜೆಪಿ ಹೊಂದಾಣಿಕೆ ಒಳ್ಳೆಯ ಬೆಳವಣಿಗೆ ಎನ್ನುವುದು ಕ್ಷೇತ್ರದ ಮುಖಂಡರು, ಕಾರ್ಯಕರ್ತರು ಹಾಗೂ ಜನತೆಯ ಅಭಿಪ್ರಾಯ. ಹಳೇ ಮೈಸೂರು ಭಾಗದಲ್ಲಿ ಎಂದಿಗೂ ಕಾಂಗ್ರೆಸ್ ನಮ್ಮ ಎದುರಾಳಿ. ಈವರೆಗೂ ಜೆಡಿಎಸ್–ಕಾಂಗ್ರೆಸ್ ಪರಸ್ಪರ ಹೋರಾಟ ನಡೆಸಿಕೊಂಡು ಬಂದಿವೆ. ಹಾಗಾಗಿ ನಮ್ಮ ಪಕ್ಷದ ಮುಖಂಡರೂ ತುಂಬಾ ಖುಷಿಯಾಗಿದ್ದಾರೆ.

ಮಿತ್ರ: *ಮುಂಬರುವ ಲೋಕಸಭಾ ಚುನಾವಣೆಗೆ ಶಾಸಕರಾಗಿ ನಿಮ್ಮ ಸಂಘಟನಾತ್ಮಕ ತಯಾರಿ ಹೇಗಿದೆ?*

ಜಿಡಿಹೆಚ್: ವಿಧಾನ ಸಭೆ ಚುನಾವಣೆ ಮುಗಿದು ಏಳು ತಿಂಗಳಾಗಿದೆ. ನಮ್ಮ ಪಕ್ಷದ ಸಂಘಟನೆ ಗಟ್ಟಿಯಾಗಿದೆ. ಲೋಕಸಭಾ ಚುನಾವಣೆಯಲ್ಲಿ ವಿಧಾನ ಸಭೆ ಚುನಾವಣೆಗಿಂತ ಹೆಚ್ಚು ಮತ ಗಳಿಸುವ ವಿಶ್ವಾಸದೊಂದಿಗೆ ಮುಖಂಡರು, ಕಾರ್ಯಕರ್ತರೆಲ್ಲರೂ ಕೆಲಸ ಮಾಡುತ್ತಿದ್ದೇವೆ. ಲೋಕಸಭೆ ಚುನಾವಣೆ ಸಂಬಂಧ ಪಕ್ಷದ ವರಿಷ್ಠರ ತೀರ್ಮಾನಕ್ಕೆ ಬದ್ಧರಾಗಿ ನಮ್ಮ ಅಭ್ಯರ್ಥಿ ಗೆಲುವಿಗೆ ಎಲ್ಲಾ ರೀತಿ ಹೋರಾಟ ನಡೆಸಲು ಸಿದ್ಧರಿದ್ದೇವೆ.

ಮಿತ್ರ: *ಲೋಕಸಭಾ ಚುನಾವಣೆ ಬಗ್ಗೆ ಜನರ ಪ್ರಸ್ತುತ ಮನಃಸ್ಥಿತಿ ಹೇಗಿದೆ ಎಂದು ಗಮನಿಸಿದ್ದೀರಾ?*

ಜಿಡಿಹೆಚ್: ಜನರ ಮನಃಸ್ಥಿತಿ ಗಮನಿಸಿದರೆ ಎರಡು ಬಾರಿ ಪ್ರಧಾನಿಯಾಗಿ ದೇಶವನ್ನು ಯಶಸ್ವಿಯಾಗಿ ಮುನ್ನಡೆಸಿರುವ ನರೇಂದ್ರ ಮೋದಿಯವರು ಮತ್ತೆ ಪ್ರಧಾನಿಯಾಗುವುದು ನಿಶ್ಚಿತವೆನಿಸುತ್ತದೆ.

ಮಿತ್ರ: *ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ವಿಳಂಬದ ಬಗ್ಗೆ ನಿಮ್ಮ ನಿಲುವು ಹಾಗೂ ಸಹಕಾರಿಗಳ ಮನೋಭಾವ ಏನಿದೆ?*


ಜಿಡಿಹೆಚ್: ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ನವೆಂಬರ್ 21 ರೊಳಗೆ ಆಗಬೇಕಿತ್ತು. ರಾಜಕೀಯ ಕಾರಣಗಳಿಂದ ಚುನಾವಣೆ ಮುಂದೂಡಲು ಸರ್ಕಾರ ವಿಳಂಬ ಧೋರಣೆ ಅನುಸರಿಸಿದೆ. ಹೈಕೋರ್ಟ್ ಏಕಸದಸ್ಯ ಪೀಠ 120 ದಿನದಲ್ಲಿ ಚುನಾವಣೆ ಮಾಡಬೇಕೆಂದು ಆದೇಶ ನೀಡಿತು. ಅದಕ್ಕೆ ನಾವು ಅಪೀಲ್ ಹೋಗಿದ್ದೆವು. ನಂತರ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಪೀಠದ ಮುಂದೆ ಪ್ರಕರಣದ ವಿಚಾರಣೆ ನಡೆದು, 8 ವಾರದಲ್ಲಿ ಚುನಾವಣೆ ನಡೆಸಬೇಕು ಎಂದು ಜನವರಿ 2ರಂದು ಆದೇಶ ನೀಡಲಾಗಿದೆ. ಆದರೂ ಚುನಾವಣೆ ನಡೆಸುವ ಲಕ್ಷಣಗಳು ಕಾಣದಿರುವ ಕಾರಣ ನ್ಯಾಯಾಂಗ ನಿಂದನೆಯಾಗುತ್ತಿದೆ ಎಂದೂ ನಾವು ಕಾನೂನು ಹೋರಾಟಕ್ಕೆ ಮುಂದಾಗಿದ್ದೇವೆ. ಆರು ದಶಕಗಳಿಂದ ಡಿಸಿಸಿ ಬ್ಯಾಂಕ್‌ನಲ್ಲಿ 350 ಕೋಟಿ ಠೇವಣಿ ಇತ್ತು. ನಾನು 2018ರಲ್ಲಿ ಅಧ್ಯಕ್ಷನಾಗಿ ಐದು ವರ್ಷದಲ್ಲಿ 950 ಕೋಟಿ ಠೇವಣಿ ಕ್ರೋಢೀಕರಿಸಿದೆ. ಸಾಲ ವಿತರಣೆ 600 ಕೋಟಿಯಿಂದ 1600 ಕೋಟಿಗೆ ಹೆಚ್ಚಾಯ್ತು. ಎರಡೂ ಜಿಲ್ಲೆಗಳ 45 ಸಾವಿರ ರೈತರಿಗೆ ಮಾತ್ರ ಸಾಲ ನೀಡಿದ್ದರು. ನಾವು ಒಂದು ಲಕ್ಷ ರೈತ ಕುಟುಂಬಗಳಿಗೆ ಸಾಲ ಸೌಲಭ್ಯ ನೀಡಿದೆವು. ಜೊತೆಗೆ ಕೃಷಿಯೇತರ ವಲಯಕ್ಕೂ ನೂರಾರು ಕೋಟಿ ಸಾಲ ನೀಡಿದ್ದೇವೆ. ನಾವು ಬ್ಯಾಂಕ್ ಅಭಿವೃದ್ಧಿ ಮಾಡಿದ್ದೇವೆಯೇ ಹೊರತು ಬ್ಯಾಂಕ್‌ನಿಂದ ಯಾವುದೇ ವೈಯಕ್ತಿಕ ಲಾಭ ಪಡೆದಿಲ್ಲ. ಜಾತ್ಯಾತೀತ, ಪಕ್ಷಾತೀತವಾಗಿ ಸಹಕಾರಿ ಮನೋಭಾವದಿಂದ ಕೆಲಸ ಮಾಡಿದ್ದೇವೆ. ಅಧಿಕಾರವನ್ನು ಎಂದೂ ರಾಜಕೀಯಕ್ಕೆ ಬಳಸಿಕೊಂಡಿದ್ದಿಲ್ಲ. ಆದರೆ ರಾಜಕೀಯ ಕಾರಣಕ್ಕೆ ಉದ್ದೇಶಪೂರ್ವಕವಾಗಿ ಚುನಾವಣೆ ಮುಂದೂಡುತ್ತಿದ್ದಾರೆ. ನ್ಯಾಯಾಲಯದ ಆದೇಶವನ್ನೂ ನಿರ್ಲಕ್ಷಿಸಿದ್ದಾರೆ. ಆದರೆ ಅಂತಿಮವಾಗಿ ಸಹಕಾರಿ ಧರ್ಮ ಗೆಲ್ಲುತ್ತದೆ.


ಮಿತ್ರ: *ರಾಜಕೀಯ ಹಾಗೂ ಸಹಕಾರ ಕ್ಷೇತ್ರದ ಪಯಣದಲ್ಲಿ ನಿಮ್ಮ ಪ್ರಮುಖ ಗುರಿ ಏನು?*

ಜಿಡಿಹೆಚ್: ಸಹಕಾರಿಗಳೆಲ್ಲಾ ನನ್ನನ್ನು ಚಿಕ್ಕ ವಯಸ್ಸಿನಲ್ಲೇ ಆಯ್ಕೆ ಮಾಡಿಕೊಂಡು ಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗುವವರೆಗೆ ಬೆಳೆಸಿದ್ದಾರೆ. ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷನನ್ನಾಗಿ ಕೆಲಸ ಮಾಡುವ ಅವಕಾಶವನ್ನೂ ಒದಗಿಸಿಕೊಟ್ಟಿದ್ದಾರೆ. ಎರಡು ಜಿಲ್ಲೆಗಳ 275 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನೂ ಸಮಾನವಾಗಿ ಕಂಡಿದ್ದೇನೆ. ಯಾವುದೇ ಪಕ್ಷದವರು, ಜಾತಿಯವರೆಂದು ನೋಡಿಲ್ಲ. ಯಾವುದೇ ತಾರತಮ್ಯ ಮಾಡದೆ ಎಲ್ಲಾ ರೈತರಿಗೂ ಸಮಾನವಾಗಿ ಸಾಲ ಸೌಲಭ್ಯ ತಲುಪಿಸಿದ್ದೇವೆ. ಯಾರೇ ಕೇಳಿದರೂ ಸ್ವಂತ ಕಟ್ಟಡಕ್ಕೂ ಡಿಸಿಸಿ ಹಾಗೂ ಅಪೆಕ್ಸ್ ಬ್ಯಾಂಕ್‌ನಿಂದ ಅನುದಾನ ಕೊಡಿಸಿದ್ದೇವೆ. ನಾನು ರಾಜಕೀಯಕ್ಕೆ ಬಂದಿದ್ದು ಆಕಸ್ಮಿಕ. ಹುಣಸೂರು ತಾಲೂಕಿನ ಜನತೆ ನನ್ನನ್ನು ಶಾಸಕನಾಗಿ ಆಯ್ಕೆ ಮಾಡಿದ್ದಾರೆ. ನನ್ನ ಗುರಿ ಸ್ಪಷ್ಟವಾಗಿದೆ. ಶಾಸಕನಾಗಿ ಹುಣಸೂರು ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಹಾಗೂ ಓರ್ವ ಸಹಕಾರಿಯಾಗಿ ಯಾವುದೇ ರಾಜಕೀಯ ಹಸ್ತಕ್ಷೇಪವಿಲ್ಲದೆ ಸಹಕಾರ ಕ್ಷೇತ್ರದ ಅಭಿವೃದ್ಧಿಯಷ್ಟೇ ನನ್ನ ಗುರಿ. ಇದರ ಹೊರತು ವೈಯಕ್ತಿಕವಾಗಿ ಏನನ್ನೋ ಸಾಧಿಸಬೇಕೆಂಬ ಯಾವುದೇ ರೀತಿಯ ಆಸೆಗಳಿಲ್ಲ.

ಮಿತ್ರ: *ರಾಜಕೀಯ ಆಸಕ್ತಿ ಹೊಂದಿರುವ ಯುವ ಸಮುದಾಯಕ್ಕೆ ಯುವ ಶಾಸಕರಾಗಿ ಏನು ನಿಮ್ಮ ಸಲಹೆ?*

ಜಿಡಿಹೆಚ್: ದೇಶದಲ್ಲಿ ಮೋದಿಯವರು ಪ್ರಧಾನಿಯಾಗಿ ಮಾಡಿರುವಂತಹ ಅಭಿವೃದ್ಧಿ, ಸುಧಾರಣಾ ಕಾರ್ಯಗಳಿಂದ ಯುವ ಸಮುದಾಯ ಪ್ರಭಾವಿತವಾಗಿದೆ. ಇದರಿಂದ ಸಾಕಷ್ಟು ಜನ ರಾಜಕೀಯ ಕ್ಷೇತ್ರದ ಮೇಲೆ ಒಲವು ತೋರುತ್ತಿದ್ದಾರೆ. ಇಂತಹವರ ಪ್ರಮಾಣ ಹೆಚ್ಚಾಗಬೇಕು. ಆಗ ಮಾತ್ರ ಬದಲಾವಣೆ ತರಲು ಸಾಧ್ಯವಾಗುತ್ತದೆ. ಯುವ ಸಮುದಾಯ ರಾಜಕೀಯದಿಂದ ಹಿಂದೆ ಸರಿದರೆ ರಾಜಕೀಯವಾಗಿ ದೇಶಕ್ಕೆ ಖಂಡಿತವಾಗಿ ನಷ್ಟವಾಗುತ್ತದೆ. ರಾಜಕೀಯದ ಬಗ್ಗೆ ಕೇವಲ ನಕಾರಾತ್ಮಕವಾಗಿ ಯೋಚಿಸದೆ ಆರೋಗ್ಯಕರ ಚಿಂತನೆಯನ್ನೂ ಮಾಡಬೇಕು. ರಾಜಕೀಯ ವಲಯದ ಒಳ್ಳೆಯ ಬೆಳವಣಿಗೆಯನ್ನೂ ಗಮನಿಸಬೇಕು. ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು.








ಇದ್ದಕ್ಕಿದ್ದಂತೆ ಅಸ್ವಸ್ಥರಾದ ಮಯಾಂಕ್ ಅಗರ್ವಾಲ್: ಐಸಿಯುನಲ್ಲಿ ಚಿಕಿತ್ಸೆ



ಅಗರ್ತಲಾ, ಜ.30– ಕರ್ನಾಟಕ ರಣಜಿ ತಂಡದ ನಾಯಕ, ಬ್ಯಾಟ್ಸ್‌ಮನ್ ಮಯಾಂಕ್ ಅಗರ್ವಾಲ್ ಆರೋಗ್ಯ ಇದ್ದಕ್ಕಿದ್ದಂತೆ ಹದಗೆಟ್ಟಿದ್ದರಿಂದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮಾಧ್ಯಮ ವರದಿಗಳ ಪ್ರಕಾರ, ಅಗರ್ತಲಾದಲ್ಲಿ ರಣಜಿ ಪಂದ್ಯವನ್ನು ಆಡಿದ ನಂತರ ಮಯಾಂಕ್ ವಿಮಾನ\ದಲ್ಲಿ ಸೂರತ್‌ಗೆ ಪ್ರಯಾಣಿಸುತ್ತಿದ್ದರು. ಅವರು ವಿಮಾನವನ್ನು ಹತ್ತಿದ ತತ್‌ಕ್ಷಣ, ಅಸ್ವಸ್ಥರಾಗಿದ್ದು, ಅವರನ್ನು ಡಿಬೋರ್ಡ್ ಮಾಡಿ ಆಸ್ಪತ್ರೆಗೆ ಕರೆ ದೊಯ್ಯಲಾಗಿದೆ. ಮಯಾಂಕ್ ಅವರ ಆರೋಗ್ಯ ಸ್ಥಿರವಾಗಿದ್ದು, ಯಾವುದೇ ಅಪಾಯವಿಲ್ಲ. ರಣಜಿ ಟ್ರೋಫಿಯಲ್ಲಿ ಮಯಾಂಕ್ ಕರ್ನಾಟಕದ ನಾಯಕರಾಗಿ ತಂಡವನ್ನು ಮುನ್ನಡೆಸುತ್ತಿದ್ದಾರೆ. ಮಯಾಂಕ್ ಅವರು ತ್ರಿಪುರಾ ವಿರುದ್ಧ ರಣಜಿ ಟ್ರೋಫಿ ಪಂದ್ಯವನ್ನು ಆಡಲು ಅಗರ್ತಲಾದಲ್ಲಿದ್ದರು.

ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣಕ್ಕೆ ಪದಾಧಿಕಾರಿಗಳ ನೇಮಕ



ಮೈಸೂರು,ಜ.30(ಜಿಎ)–ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ಜಿಲ್ಲಾ ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಿದ್ದು, ರಾಜ್ಯಾಧ್ಯಕ್ಷ ಕೃಷ್ಣಗೌಡ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಟ್ಟಿ ಬಿಡುಗಡೆ ಮಾಡಿದ್ದಾರೆ. ಬಳಿಕ ಮಾತನಾಡಿದ ಅವರು, ರೈತಪರ, ನಾಡು ನುಡಿ, ಜಲ, ಸಾಮಾಜಿಕ ಮೊದಲಾದ ಹೋರಾಟಗಳಲ್ಲಿ ಸಂಘಟನೆ ಪಾಲ್ಗೊಂಡಿದೆ. ವೇದಿಕೆಯ 58 ಶಾಲೆಗಳನ್ನು ದತ್ತು ಪಡೆದು ಮೂಲ ಸೌಕರ್ಯ ಒದಗಿಸಿದೆ. ಈಗ ಜಿಲ್ಲೆಯಲ್ಲೂ ಸಂಘಟನೆಯನ್ನು ಬಲಗೊಳಿಸಲೆಂದು ನೂತನ ಪದಾಧಿ ಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದರು. ಜಿಲ್ಲಾಧ್ಯಕ್ಷ ಎಂ.ಲಿಂಗರಾಜು, ಜಿಲ್ಲಾ ಸಂಘಟನಾ ಕಾರ್ಯದರ್ಶಿ ರಾಜಶೇಖರ ಮೂರ್ತಿ, ಜಿಲ್ಲಾ ಸಹ ಕಾರ್ಯದರ್ಶಿ ವಸಂತಬಾಬು ಹಾಗೂ ಇನ್ನಿತರ ಸ್ಥಾನಗಳಿಗೆ ಚರಣ್‌ರಾಜ್, ಲೋಕೇಶ್, ಪಾರ್ವತಿ ಕೃಷ್ಣ, ರವಿಕುಮಾರ್, ರಕ್ಷಿತ್‌ಗೌಡ, ಪುನೀತ್ ಹಾಗೂ ಪ್ರಮೋದ್ ನೇಮಕ ಮಾಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಎಂ.ಲಿಂಗರಾಜು, ಜಗದೀಶ್, ಕೆ.ಆರ್.ಚರಣ್‌ರಾಜ್, ಶಿವುಗೌಡ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 31 ಬುಧವಾರ 2024

ಸಂಪುಟ: 44 | ಸಂಚಿಕೆ: 283 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಜಯದೇವ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಸೇವಾವಧಿ ಮುಕ್ತಾಯ



ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ಅವರ ಸೇವಾ ಅವಧಿ ನಾಳೆ (ಜನವರಿ 31)ಗೆ ಮುಕ್ತಾಯವಾಗುತ್ತಿದ್ದು ಇಂದು ಅವರಿಗೆ ಕಚೇರಿಯ ಸಿಬ್ಬಂದಿ ವರ್ಗ ಆತ್ಮೀಯವಾಗಿ ಬೀಳ್ಕೊಟ್ಟರು. ಡಾ. ಸಿ.ಎನ್.ಮಂಜುನಾಥ್ ಅವರು 2007ರಿಂದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು. 2023ರ ಜುಲೈನಲ್ಲಿಯೇ ಅವರ ಸೇವಾವಧಿ ಮುಕ್ತಾಯ ಗೊಂಡಿತ್ತು. ಆಸ್ಪತ್ರೆಯ ಸಿಬ್ಬಂದಿ ಮತ್ತು ಹಲವಾರು ಗಣ್ಯರು ಅವರ ಸೇವೆ ವಿಸ್ತರಣೆ ಮಾಡಬೇಕು ಎಂದು ಒತ್ತಾಯಿಸಿದ್ದರಿಂದ ಸರ್ಕಾರ ಅವರ ಸೇವಾ ಅವಧಿಯನ್ನು ವಿಸ್ತರಿಸಿತ್ತು. ಈಗ ಅವಧಿ ಮುಕ್ತಾಯಗೊಂಡಿದ್ದು, ನಿವೃತ್ತರಾಗಿದ್ದಾರೆ.



ಮೈಸೂರು ನಗರ ಪಾಲಿಕೆ ಅಧಿಕಾರಿಗಳ ಅವೈಜ್ಞಾನಿಕ ಹಂಪ್ಸ್‌ಗೆ

ಮತ್ತೊಬ್ಬ ಯುವಕ ಬಲಿ

● ಮಾರಣಾಂತಿಕ ಹಂಪ್ಸ್‌ಗೆ ಒಟ್ಟಾರೆ ಮೂವರು ಬಲಿ ● ಖಾಸಗಿ ಕಂಪನಿ ಉದ್ಯೋಗಿ ಕೊಡಗಿನ ಯುವಕ ಭಾನುವಾರ ಮುಂಜಾನೆ ಈ ಯಮ ಸ್ವರೂಪಿ ಹಂಪ್ಸ್‌ನಲ್ಲಿ ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದರು ● ಚಿಕಿತ್ಸೆ ಫಲಕಾರಿಯಾಗದೇ ಮಂಗಳವಾರ ರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ಸಾವು



ಶಿವಂ

ಮೈಸೂರು, ಜ.30–ಮೈಸೂರಿನ ಬೋಗಾದಿ ರಸ್ತೆಯ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಿಂದ ಆಯುಷ್ ಜಂಕ್ಷನ್ ನಡುವೆ ಶನಿವಾರ ರಾತ್ರೋರಾತ್ರಿ ನಗರ ಪಾಲಿಕೆ ನಿರ್ಮಿಸಿದ್ದ ಅವೈಜ್ಞಾನಿಕ ರೋಡ್ ಹಂಪ್ಸ್‌ಗೆ ಮತ್ತೊಬ್ಬ ಯುವಕ ಬಲಿಯಾಗಿದ್ದಾನೆ.

> “ನಿರ್ಲಕ್ಷ್ಯತನದಿಂದ ವ್ಯಕ್ತಿಯ ಸಾವಿಗೆ ಕಾರಣರಾದವರ ವಿರುದ್ಧ ಭಾರತೀಯ ದಂಡ ಸಂಹಿತೆ 304ಎ ಅಡಿ ಪೊಲೀಸರು ಪ್ರಕರಣ ದಾಖಲಿಸಬೇಕಾಗುತ್ತದೆ. ಈ ಸೆಕ್ಷನ್‌ಗೆ 2 ವರ್ಷ ಜೈಲು ಮತ್ತು ದಂಡ ವಿಧಿಸಬಹುದಾಗಿದೆ. ಈ ಪ್ರಕರಣದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಅಥವಾ ವಲಯ ಕಚೇರಿಯ ಅಧಿಕಾರಿ, ಸಂಬಂಧಪಟ್ಟ ಇಂಜಿನಿಯರ್ ಮತ್ತು ಗುತ್ತಿಗೆದಾರ ಆರೋಪಿಗಳಾಗಿದ್ದಾರೆ. ಇವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ ಕಾನೂನು ಪ್ರಕಾರ ಬಂಧಿಸಬೇಕಾಗುತ್ತದೆ. ಈ ಪ್ರಕರಣದಲ್ಲಿ ಸರ್ಕಾರಿ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಪ್ರಾಣಹಾನಿ ಸಂಭವಿಸಿರುವುದರಿಂದ ಮೃತರ ಕುಟುಂಬಕ್ಕೆ ಹಾಗೂ ಗಾಯಾಳುಗಳಿಗೆ ಸರ್ಕಾರವೇ ಪರಿಹಾರವನ್ನು ಕೊಡಬೇಕಾಗುತ್ತದೆ.
> –ಓ.ಶ್ಯಾಂ ಭಟ್, ಹಿರಿಯ ನ್ಯಾಯವಾದಿ



ಭಾನುವಾರ ಬೆಳಗ್ಗೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ರೋಡ್ ಹಂಪ್ಸ್‌ನಲ್ಲಿ ನಿಯಂತ್ರಣ ತಪ್ಪಿ ಬಿದ್ದು, ತೀವ್ರವಾಗಿ ಗಾಯಗೊಂಡಿದ್ದ ಮೂಲತಃ ವಿರಾಜಪೇಟೆ ಸಮೀಪದ ಕಂಡಂಗಾಲ ಗ್ರಾಮದ ಯುವಕ ಶಿವಂ (25) ಮಂಗಳವಾರ ರಾತ್ರಿ ಚಿಕಿತ್ಸೆ ಫಲಕಾರಿಯಾಗದೇ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಈ ಯುವಕ ಮೈಸೂರಿನ ಖಾಸಗಿ ಕಂಪನಿಯೊಂದರ ಉದ್ಯೋಗಿಯಾಗಿದ್ದು, ಸರಸ್ವತಿಪುರಂನ ಬಾಡಿಗೆ ರೂಂನಲ್ಲಿ ವಾಸವಿದ್ದ. ಭಾನುವಾರ ● 9ನೇ ಪುಟಕ್ಕೆ

ಮಂಡ್ಯವನ್ನು ಬಿಜೆಪಿಯಲ್ಲೇ ಉಳಿಸಿಕೊಳ್ಳಲು

ವರಿಷ್ಠರ ಮನವೊಲಿಕೆ



ಸುಮಲತಾ

ಬೆಂಗಳೂರು, ಜ. 30– ಲೋಕಸಭಾ ಚುನಾವಣೆಗೆ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಖಚಿತವಾಗಿದ್ದು, ಮಂಡ್ಯ ಲೋಕಸಭಾ ಕ್ಷೇತ್ರ ಜೆಡಿಎಸ್ ಪಾಲಾಗುತ್ತದೆ ಎಂಬ ಮಾತುಗಳು ಕೇಳಿಬರುತ್ತಿರುವ ಬೆನ್ನಲ್ಲೇ ಹಾಲಿ ಸಂಸದೆ ಸುಮಲತಾ ಅವರು ಮಂಡ್ಯ ಕ್ಷೇತ್ರವನ್ನು ಬಿಜೆಪಿಯೇ ಉಳಿಸಿಕೊಳ್ಳಲು ತಾವು ಪಕ್ಷದ ವರಿಷ್ಠರ ಮನವೊಲಿಸುವುದಾಗಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ದೃಶ್ಯ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಂಡ್ಯ ಕ್ಷೇತ್ರದಲ್ಲಿ ಬಿಜೆಪಿ ಬಾವುಟ ಹಾರಿಸಬೇಕು ಎಂಬುದೇ ನನ್ನ ಆಸೆಯಾಗಿದೆ ಎಂದಿದ್ದಾರೆ. ಮಂಡ್ಯ ಕ್ಷೇತ್ರದಲ್ಲಿ ರಾಜಕೀಯವಾಗಿ ಆಗಿರುವ ಬದಲಾವಣೆಗಳ ಬಗ್ಗೆ ವಸ್ತುಸ್ಥಿತಿಯನ್ನು ಪಕ್ಷದ ವರಿಷ್ಠರಿಗೆ ಮನವರಿಕೆ ಮಾಡುವಲ್ಲಿ ಯಶಸ್ವಿಯಾಗುವ ವಿಶ್ವಾಸ ತಮಗಿದೆ ಎಂದರು. ಕಳೆದ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ● 6ನೇ ಪುಟಕ್ಕೆ

ಹನುಮ ಧ್ವಜ ವಿವಾದ

ಕೆರಗೋಡು ಗ್ರಾಪಂ ನಡಾವಳಿ ಪುಸ್ತಕ ನಾಪತ್ತೆ, ಸದಸ್ಯರ ಆಕ್ರೋಶ

ಮಂಡ್ಯ, ಜ.30– ಕೆರಗೋಡಿನ ಧ್ವಜಸ್ತಂಭದಲ್ಲಿ ಹನುಮ ಧ್ವಜ ಹಾರಿಸಲು ಅನುಮತಿ ಕೊಡಲು ಗ್ರಾ.ಪಂ. ಸಭೆಯಲ್ಲಿ ಅನುಮೋದಿಸಿ, ಅದನ್ನು ಉಲ್ಲೇಖಿಸಿರುವ ನಡಾವಳಿ ಪುಸ್ತಕವೇ ಇದೀಗ ಕಾಣೆಯಾಗಿದ್ದು, ಈ ಬಗ್ಗೆ ಗ್ರಾಪಂ. ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳೆದ ಡಿ.29ರಂದು ಶ್ರೀ ಗೌರಿಶಂಕರ ಸೇವಾ ಟ್ರಸ್ಟ್‌ನವರು ಧ್ವಜಸ್ತಂಭದಲ್ಲಿ ಹನುಮ ಧ್ವಜ ಹಾರಿಸಲು ಅನುಮತಿ ಕೇಳಿದ್ದರು. ಅಂದೇ ನಡೆದ ಕೆರಗೋಡು ಗ್ರಾ.ಪಂ. ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದಾಗ 22 ಸದಸ್ಯರ ಪೈಕಿ 4 ಮಂದಿಯನ್ನು ಹೊರತುಪಡಿಸಿ ಉಳಿದೆಲ್ಲಾ ಸದಸ್ಯರು ಬೆಂಬಲ ಸೂಚಿಸಿದ ಹಿನ್ನೆಲೆಯಲ್ಲಿ ಧ್ವಜ ಹಾರಿಸಲು ಅನುಮತಿ ಕೊಡಲಾಗಿತ್ತು. ಯಾವುದೇ ಸಭೆಯಾದರೂ ಪ್ರಮುಖ ವಿಚಾರಗಳು ಚರ್ಚೆಯಾದಾಗ ನಡಾವಳಿ ಪುಸ್ತಕದಲ್ಲಿ ಉಲ್ಲೇಖಿಸುವುದು ಕಡ್ಡಾಯ. ಆ ನಿಟ್ಟಿನಲ್ಲಿ ಅಂದು ನಡೆದ ಸಭೆಯಲ್ಲಿ ಈ ವಿಷಯ ನಡಾವಳಿ ಪುಸ್ತಕದಲ್ಲಿ ● 9ನೇ ಪುಟಕ್ಕೆ

ತಾಯಿಯ ಮರಣ ಪ್ರಮಾಣ ಪತ್ರಕ್ಕಾಗಿ ಅಲೆಯುತ್ತಿರುವ ತಬ್ಬಲಿ ಹೆಣ್ಣು ಮಗಳು

ಮೈಸೂರಿನಲ್ಲಿ ಅಧಿಕಾರಿಗಳ ಉಪಟಳದಿಂದ ನಲುಗಿರುವ ಪ್ರಕರಣಗಳು ಒಂದೊಂದಾಗಿ ಬಯಲಿಗೆ



ಮೃತ ಮಹಿಳೆ ಮುಕ್ತ

ಮೈಸೂರು, ಜ.30(ಬಿಎಲ್‌ಯು)– ಅಧಿಕಾರಿಗಳ ಅರಿವಿನ ಕೊರತೆಯೋ ಇಲ್ಲ ಬೇಜವಾಬ್ದಾರಿಯಿಂದಲೋ ಫಲಾನುಭವಿಗಳು ನಲುಗಿರುವ ಪ್ರಕರಣಗಳು ಒಂದೊಂದಾಗಿ ಬಯಲಿಗೆ ಬರುತ್ತಿವೆ. ಅದೂ ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆ ಮೈಸೂರಿನಲ್ಲಿ ಅಧಿಕಾರಿ ವರ್ಗದ ಈ ವರ್ತನೆ ಜನರಲ್ಲಿ ಅಚ್ಚರಿ ಮೂಡಿಸಿದೆ. ಅಪಘಾತದಲ್ಲಿ ಮೃತಪಟ್ಟ ಮೈಸೂರಿನ ಸರ್ಕಾರಿ ಶಾಲಾ ಶಿಕ್ಷಕಿಯ ಮರಣ ಪ್ರಮಾಣ ಪತ್ರ ಪಡೆಯಲು ತಬ್ಬಲಿ ಹೆಣ್ಣು ಮಗಳು ಸರ್ಕಾರಿ ಕಚೇರಿಗೆ ಅಲೆದು... ಅಲೆದು... ರೋಸಿ ಹೋಗಿದ್ದಾರೆ.

ಮೈಸೂರಿನ ಹೆಬ್ಬಾಳು ವಾಸಿ ಮುಕ್ತ ಕೆ.ಮೂರ್ತಿ(49) ಡಿಸೆಂಬರ್ 18ರಂದು ಮೈಸೂರಿನ ರಿಂಗ್ ರಸ್ತೆಯಲ್ಲಿ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ ಲಾರಿ ಡಿಕ್ಕಿಯಾಗಿ ಮೃತಪಟ್ಟರು.

ಮೈಸೂರಿನ ಕೀಳನಪುರ ಸರ್ಕಾರಿ ಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿದ್ದ ಮುಕ್ತ ಅವರಿಗೆ ಒಬ್ಬಳೇ ಮಗಳಿದ್ದು, ಆಕೆ ಎಂಬಿಎ ವ್ಯಾಸಂಗ ಮಾಡುತ್ತಿದ್ದಾಳೆ. ತಂದೆಯನ್ನು ಕಳೆದುಕೊಂಡಿರುವ ಈಕೆಗೆ ಈಗ ತಾಯಿಯೂ ಇಲ್ಲವಾಗಿದ್ದಾರೆ. ಅನುಕಂಪದ ಆಧಾರದ ಮೇಲೆ ತಾಯಿಯ ಕೆಲಸ ಪಡೆಯಲು ಮಗಳು ಮರಣ ಪ್ರಮಾಣ ಪತ್ರಕ್ಕೆ ಅಲೆಯುತ್ತಿದ್ದಾಳೆ. ಮೈಸೂರು ನಗರ ಪಾಲಿಕೆ, ಹೂಟಗಳ್ಳಿ ನಗರ ಸಭೆ ಹಾಗೂ ಸಿದ್ಧಲಿಂಗಪುರ ಗ್ರಾಮ ಪಂಚಾಯಿತಿಯವರು ನಮಗೆ ಅನ್ವಯಿಸಲ್ಲ ಎಂದು ● 9ನೇ ಪುಟಕ್ಕೆ

ಭಾಗ್ಯಮ್ಮ ಮರಣ ಪ್ರಮಾಣ ಪತ್ರ ವಿತರಿಸಿದ ತಾಲೂಕು ಕಚೇರಿ



ಭಾಗ್ಯಮ್ಮ

ಮರಣ ಪ್ರಮಾಣ ಪತ್ರ ನೀಡಲು ಅಲೆದಾಡಿಸುತ್ತಿದ್ದ ಭಾಗ್ಯಮ್ಮ ಪ್ರಕರಣದಲ್ಲಿ ಮೃತರ ಕುಟುಂಬಸ್ಥರಿಗೆ 'ಮೈಸೂರು ಮಿತ್ರ'ನ ವರದಿ ಫಲವಾಗಿ ಪರಿಹಾರ ದೊರೆತಿದೆ. ಮರಣ ಪ್ರಮಾಣ ಪತ್ರಕ್ಕಾಗಿ ನಗರ ಪಾಲಿಕೆ, ತಹಶೀಲ್ದಾರ್ ಕಚೇರಿಗೆ ಅಲೆಯುತ್ತಿದ್ದ ಭಾಗ್ಯಮ್ಮ ಪುತ್ರ ಯೋಗೇಶ್ ರೋಸಿ ಹೋಗಿ 'ಮೈಸೂರು ಮಿತ್ರ'ನಲ್ಲಿ ಅಳಲು ತೋಡಿಕೊಂಡಿದ್ದರು.


ಮಿತ್ರನ ಫಲಶ್ರುತಿ

'ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಮೈಸೂರಿನಲ್ಲೊಂದು ತಬರನ ಕಥೆ ನಿದರ್ಶನ; ಮರಣ ಪ್ರಮಾಣ ಪತ್ರಕ್ಕಾಗಿ ಸರ್ಕಾರಿ ಕಚೇರಿಗೆ ಅಲೆಯುತ್ತಿರುವ ಕಡುಬಡ ಕುಟುಂಬ' ಶೀರ್ಷಿಕೆಯಡಿ 'ಮೈಸೂರು ಮಿತ್ರ'ನ ಮಂಗಳವಾರದ (ಜ.30) ಸಂಚಿಕೆಯಲ್ಲಿ ವರದಿಯಾಗಿತ್ತು. ಈ ವರದಿಯನ್ನು ಗಂಭೀರವಾಗಿ ಪರಿಗಣಿಸಿದ ಅಪರ ಜಿಲ್ಲಾಧಿಕಾರಿ ಲೋಕನಾಥ್ ಅವರು ಮರಣ ಪ್ರಮಾಣ ಪತ್ರ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಇಂದು ಬೆಳಿಗ್ಗೆ ಆದೇಶಿಸಿದ್ದರು. ಇದರ ಪರಿಣಾಮ ತಾಲೂಕು ಕಚೇರಿ ಅಧಿಕಾರಿಗಳು ಸಂಜೆ ವೇಳೆಗೆ ಭಾಗ್ಯಮ್ಮ ಅವರ ಮರಣ ಪ್ರಮಾಣ ಪತ್ರವನ್ನು ಕುಟುಂಬಸ್ಥರಿಗೆ ನೀಡಿದ್ದಾರೆ.



ಫೆ.2ರಂದು ವಿಶೇಷ 'ಸ್ವಾತಿ' ಪೂಜೆ





ಮೈಸೂರು, ಜ.30–ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಫೆ.2ರಂದು ಶುಕ್ರವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಪ್ರಧಾನ ವ್ಯವಸ್ಥಾಪಕ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಮಾಹಿತಿ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.

ಶ್ರೀ ಮಡಿವಾಳ ಮಾಚಿದೇವರ ಜಯಂತಿ ಅಂಗವಾಗಿ ನಾಳೆ ಬೃಹತ್ ಮೆರವಣಿಗೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಸ್.ರವಿನಂದನ್ ಮಾತನಾಡಿದರು.

ಮೈಸೂರು,ಜ.30(ಜಿಎ)–ಶ್ರೀ ಮಡಿವಾಳ ಮಾಚಿದೇವರ ಜಯಂತಿಯ ಅಂಗವಾಗಿ ಮೈಸೂರು ಜಿಲ್ಲಾ ಮಡಿವಾಳ ಮಾಚಿದೇವರ ಸಂಘದ ವತಿಯಿಂದ ಫೆ.1ರಂದು ಬೃಹತ್ ಮೆರವಣಿಗೆ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಎಸ್. ರವಿನಂದನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಬೃಹತ್ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಇದರಲ್ಲಿ ಸುಮಾರು ಎರಡು ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಜೊತೆಗೆ ವಿವಿಧ ಕಲಾತಂಡಗಳೂ ಭಾಗಿಯಾಗಲಿವೆ. ಮೆರವಣಿಗೆಯು ಅರಸು ರಸ್ತೆ, ಮೆಟ್ರೋಪೋಲ್ ವೃತ್ತ ಮೂಲಕ ಮೈಸೂರು–ಹುಣಸೂರು ರಸ್ತೆಯ ಮಾರ್ಗವಾಗಿ ಕಲಾಮಂದಿರ ತಲುಪಲಿದ್ದು, ನಂತರ 11.30ಕ್ಕೆ ಜಿಲ್ಲಾಡಳಿತದ ವತಿಯಿಂದ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಸಮುದಾಯದ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲೆಂದು ನಗರ ಹಾಗೂ ತಾಲೂಕಿನಲ್ಲಿ ಮಡಿವಾಳ ಸಮುದಾಯದವರು ಅಂದು ತಮ್ಮ ಅಂಗಡಿಗಳಿಗೆ ರಜೆ ನೀಡಿ ಮೆರವಣಿಗೆ ಹಾಗೂ ಕಲಾಮಂದಿರದಲ್ಲಿನ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ನಂಜಪ್ಪ ಕಡಕೊಳ, ರಾಚಪ್ಪ, ಪುಟ್ಟರಾಜು, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ವೀರಶೈವ ಲಿಂಗಾಯಿತ ವಧು–ವರರ ಸಮಾವೇಶ

ಮೈಸೂರು, ಜ. 30–ಮೈಸೂರಿನ ಗನ್‌ಹೌಸ್ ಹತ್ತಿರ, ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಫೆ. 3 ರಂದು ಬೆಳಗ್ಗೆ 11 ರಿಂದ ಮ. 2 ರವರೆಗೆ ವೀರಶೈವ ಲಿಂಗಾಯಿತ ವಧು–ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಫೆ. 2ರೊಳಗೆ ನೋಂದಣಿ ಮಾಡಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9686205346 ಸಂಪರ್ಕಿಸಬಹುದು.

ಹಿರಿಯ ಕಲಾವಿದರಿಗೆ 'ಜಾನಪದ ಸೇವಾ ರತ್ನ'



ಮೈಸೂರಿನ ಜಾನಪದ ಕಲಾವಿದರ ಒಕ್ಕೂಟದ ವತಿಯಿಂದ ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಜಾನಪದ ಕಲಾವಿದರಿಗೆ ಜಾನಪದ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು.

ಮೈಸೂರು, ಜ.30(ಎಂಟಿವೈ)–ಜಾನಪದ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಹಿರಿಯ ಕಲಾವಿದರಿಗೆ ರಾಜ್ಯಮಟ್ಟದ ಜಾನಪದ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮೈಸೂರಿನ ಪುರಭವನದ ಸಭಾಂಗಣದಲ್ಲಿ ಮಂಗಳವಾರ ಜಾನಪದ ಕಲಾವಿದರ ಒಕ್ಕೂಟ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಜಾನಪದ ಕಲೆಗೆ ತನ್ನದೇ ಆದ ಮಹತ್ವವಿದೆ. ಜಾನಪದ ಕಲೆ ಮಹತ್ವದ ಕಲೆಯಾಗಿದ್ದು, ಸಮಾಜಕ್ಕೆ ಸಂದೇಶ ನೀಡುವ ಕಲೆಯಾಗಿದೆ. ಬಾಯಿಯಿಂದ ಬಾಯಿಗೆ ಹರಿಡುವ ಜಾನಪದವು ಇತ್ತೀಚಿನ ದಿನಗಳಲ್ಲಿ ಸ್ಪರ್ಧಾತ್ಮಕ ಯುಗದಲ್ಲಿ ನಶಿಸುವ ಹಂತಕ್ಕೆ ತಲುಪಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜಾನಪದ ಕಲೆಯನ್ನು ಉಳಿಸಿ, ಬೆಳೆಸುವ ಅನಿವಾರ್ಯತೆ ಇದೆ. ಅದಕ್ಕಾಗಿ ಹಲವು ಹಿರಿಯ ಜಾನಪದ ಕಲಾವಿದರು ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದರಾದ ಹೆಚ್.ಸಿ.ಮಹೇಶ್‌ಕುಮಾರ್, ಬಸವಣ್ಣ, ಮಹದೇವಸ್ವಾಮಿ, ಯು.ಎನ್. ಕುಲ್‌ದೀಪ್, ಕೆ.ರವಿ, ಅಮಿತ್ ಕುಮಾರ್, ಅರುಣ್‌ಕುಮಾರ್ ನಾಯಕ್, ಜಿ.ಡಿ. ಪುನೀತ್ ಕುಮಾರ್, ಚಿನ್ನಾಪುರ ಸಿ.ಎ. ದೇವರಾಜ, ಎನ್.ನಾರಾಯಣಸ್ವಾಮಿ, ಶ್ರೀನಿವಾಸ್, ನಾರಾಯಣಪ್ಪ, ನಳಿನಮ್ಮ, ಪಿ.ಜಯಣ್ಣ, ಎನ್.ನಾರಾಯಣಸ್ವಾಮಿ, ಅನಸೂಯಮ್ಮ, ಎಸ್.ಎನ್.ಶ್ರೀನಿವಾಸ್, ಮುನಿವೆಂಕಟಪ್ಪ, ರತ್ನಮ್ಮ, ಶ್ರೀನಿವಾಸ್, ನಾರಾಯಣಮ್ಮ, ಎಂ.ನಾರಾಯಣಸ್ವಾಮಿ, ಎಸ್.ಎನ್.ಕೆಂಪರೆಡ್ಡಿ ಅವರಿಗೆ ಜಾನಪದ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಿ, ಸತ್ಕರಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಡಾ.ಹೆಚ್.ಆರ್. ತಿಮ್ಮೇಗೌಡ, ಜಾನಪದ ಕಲಾವಿದರ ಒಕ್ಕೂಟದ ಅಧ್ಯಕ್ಷ ಆರ್.ಕೆ.ಸ್ವಾಮಿ, ಸಾಹಿತಿ ಕಟ್ಟೆ ಕೃಷ್ಣಸ್ವಾಮಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಬಿಜೆಪಿಯಲ್ಲೇ ಉಳಿಸಿಕೊಳ್ಳಲು ವರಿಷ್ಠರ ಮನವೊಲಿಕೆ

ಐದನೇ ಪುಟದಿಂದ

ತಾವು, 1.5 ಲಕ್ಷ ಮತಗಳ ಅಂತರದಲ್ಲಿ ಗೆಲ್ಲುವುದಾಗಿ ತಿಳಿಸಿದಾಗ ಅದನ್ನು ಯಾರೂ ನಂಬಿರಲಿಲ್ಲ. ಆದರೆ, ಅದು ಸಾಧ್ಯವಾಗಿತ್ತು. ಮಂಡ್ಯ ಕ್ಷೇತ್ರದ ಬಗ್ಗೆ ಸಂಪೂರ್ಣವಾಗಿ ಅರಿತಿರುವ ತಮಗೆ ಇಲ್ಲಿನ ರಾಜಕೀಯ ವಸ್ತುಸ್ಥಿತಿ ಏನು ಎಂಬುದರ ಬಗ್ಗೆ ಖಚಿತವಾಗಿ ಗೊತ್ತಿದೆ. ಹೀಗಾಗಿ ಪಕ್ಷದ ವರಿಷ್ಠರಿಗೆ ವಸ್ತುಸ್ಥಿತಿಯನ್ನು ಮನಮುಟ್ಟುವಂತೆ ತಿಳಿಸಿ, ಮಂಡ್ಯ ಕ್ಷೇತ್ರವನ್ನು ಬಿಜೆಪಿಗೇ ಉಳಿಸಿಕೊಂಡು ತಾವು ಸ್ಪರ್ಧಿಸಿ ಕ್ಷೇತ್ರದಲ್ಲಿ ಪಕ್ಷದ ಬಾವುಟ ಹಾರಿಸುವ ವಿಶ್ವಾಸವಿದೆ. ಮಂಡ್ಯದ ಜನತೆ ಪಕ್ಷೇತರರಾಗಿ ನಿಂತಿದ್ದ ತಮಗೆ ನೀಡಿದ್ದ ಅಭಿಮಾನವನ್ನು ಬಿಟ್ಟು ಬೇರೆ ಲ್ಲಿಗೋ ಹೋಗಲು ತಾವು ಸಿದ್ಧವಿಲ್ಲ ಎಂದ ಅವರು, ಕಾಂಗ್ರೆಸ್ ಪಕ್ಷದ ಕೆಲವು ಮುಖಂಡರು ತಮ್ಮನ್ನು ಪಕ್ಷಕ್ಕೆ ಆಹ್ವಾನಿಸಿದ್ದಾರೆ. ನಾನು ಬಿಜೆಪಿಯಲ್ಲಿರುವುದು ಅವರಿಗೂ ಗೊತ್ತಿದೆ. 'ನೀವು ಕಾಂಗ್ರೆಸ್‌ನಲ್ಲಿ ದ್ದಿದ್ದರೆ ಚೆನ್ನಾಗಿತ್ತು. ಪಕ್ಷಕ್ಕೆ ಬನ್ನಿ ಟಿಕೆಟ್ ಕೊಡಿಸುತ್ತೇವೆ' ಎಂದು ಅಭಿಮಾನದಿಂದ ಹೇಳುತ್ತಿದ್ದಾರೆ. ಆದರೆ ನಿರ್ಧಾರ ಕೈಗೊಳ್ಳಬೇಕಾಗಿರುವುದು ನಾನಲ್ಲವೇ? ಎಂದು ಪ್ರಶ್ನಿಸಿದರು. ಈ ನಡುವೆ ಸುಮಲತಾ ಅವ ರನ್ನು ಕಾಂಗ್ರೆಸ್‌ಗೆ ಯಾವುದೇ ನಾಯಕರು ಆಹ್ವಾನಿಸಿಲ್ಲ ಎಂದು ಮಂಡ್ಯ ಜಿಲ್ಲಾ ಉಸ್ತು ವಾರಿ ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಸುಮಲತಾ ಅವರನ್ನು ಯಾರಾದರೂ ಕಾಂಗ್ರೆಸ್ ನಾಯಕರು ಆಹ್ವಾನಿಸಿದ್ದರೆ ಅವರ ಹೆಸರನ್ನು ಸುಮಲತಾ ಹೇಳಲಿ ಎಂದ ಅವರು, ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ನಮ್ಮ ಪಕ್ಷದಲ್ಲೇ ಸೂಕ್ತ ಅಭ್ಯರ್ಥಿಗಳಿರುವಾಗ ಸುಮಲತಾ ಅವರನ್ನು ಕರೆತರುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಅವರು ಹೇಳಿದ್ದಾರೆ.

ಕೆರಗೋಡು ಕೇಸರಿ ಬಾವುಟದ ಗಲಭೆ ಉದ್ದೇಶಪೂರ್ವಕವಾದುದು: ತಪ್ಪಿತಸ್ಥರ ಮೇಲೆ ಕ್ರಮಕ್ಕೆ ಆಗ್ರಹಿಸಿ

ಸಿದ್ಧಾರ್ಥನಗರದ ಡಿಸಿ ಕಚೇರಿ ಬಳಿ ಪ್ರತಿಭಟನೆ



ಮಂಡ್ಯ ಜಿಲ್ಲೆ ಕೆರಗೋಡು ಗ್ರಾಮದಲ್ಲಿ ಕೇಸರಿ ಬಾವುಟದ ವಿವಾದ ಸೃಷ್ಟಿಸಿ ಗಲಭೆ ನಡೆಸಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸಿದ್ಧಾರ್ಥನಗರದ ಡಿಸಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು,ಜ.30(ಜಿಎ)–ಮಂಡ್ಯ ಜಿಲ್ಲೆ ಕೆರಗೋಡು ಗ್ರಾಮದಲ್ಲಿ ಕೇಸರಿ ಬಾವುಟದ ವಿವಾದ ಸೃಷ್ಟಿಸಿ ಗಲಭೆ ನಡೆಸಿರುವುದು ಉದ್ದೇಶಪೂರ್ವಕವಾದುದು. ಇದು ಖಂಡನೀಯ. ಈ ಘಟನೆಯಲ್ಲಿ ಪಾಲ್ಗೊಂಡಿರುವವರ ವಿರುದ್ಧ ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕೆಂದು ನಗರ, ಜಿಲ್ಲಾ ಶೋಷಿತ ವರ್ಗದ ಸಮುದಾಯಗಳ ಒಕ್ಕೂಟ ಪ್ರತಿಭಟನೆ ನಡೆಸಿದೆ.

ಸಿದ್ಧಾರ್ಥ ಬಡಾವಣೆಯಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ, ಈ ಘಟನೆಯಲ್ಲಿ ಪಾಲ್ಗೊಂಡವರ ವಿರುದ್ಧ ಕೂಡಲೇ ಕಠಿಣ ಕ್ರಮ ಕೈಗೊಳ್ಳ ಬೇಕೆಂದು ಆಗ್ರಹಿಸಿದರು.

ಇದಕ್ಕೂ ಮುನ್ನ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಪರವಾಗಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಸರ್ಕಾರದ ಜಾಗದಲ್ಲಿ ರಾಷ್ಟ್ರ ಮತ್ತು ರಾಜ್ಯದ ಧ್ವಜ ಹಾರಿಸಲಷ್ಟೇ ಅನುಮತಿ ಇದೆ. ಆದರೆ ಹನುಮ ಧ್ವಜ ಹಾರಿಸಿದ್ದು, ಅಕ್ಷಮ್ಯ. ಹೀಗಾಗಿ ಸಂಬಂಧಿಸಿದವರು ಕ್ರಮ ಕೈಗೊಂಡಿದ್ದಾರೆ. ಇದನ್ನೇ ನೆಪವಾಗಿಸಿಕೊಂಡು ಒಂದು ಸಮುದಾಯದ ಹಾಸ್ಟೆಲ್ ಮೇಲೆ ಕಲ್ಲು ತೂರಿರುವುದು ಸರಿಯಲ್ಲ. ಇದು ರಾಜಕೀಯ ಪ್ರೇರಿತ ಘಟನೆಯಾಗಿದೆ. ಯಾವ ಪಕ್ಷ ಇದರ ಹಿಂದಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಚುನಾವಣಾ ಉದ್ದೇಶಕ್ಕೆ ಸಮುದಾಯ, ಜಾತಿಗಳ ನಡುವೆ ಈ ರೀತಿ ದ್ವೇಷ ಬಿತ್ತುವುದು ಕೀಳು ರಾಜಕೀಯವಾಗಿದೆ ಎಂದು ಕಿಡಿಕಾರಿದರು.

ಬಳಿಕ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕರ್ನಾಟಕ ಶಾಂತಿಗೆ ಹೆಸರಾದ ರಾಜ್ಯವಾಗಿದೆ. ಇಲ್ಲಿ ಈ ರೀತಿಯ ಗಲಭೆ ಸೃಷ್ಟಿಸಲು ಯತ್ನಿಸಿದರೆ ಜನತೆ ಮರುಳಾಗುವುದಿಲ್ಲ. ಬಿಜೆಪಿ ಮುಖಂಡರು ಕೆಲಸ ಮಾಡುತ್ತಿದ್ದಾರೆ. ಬಿಜೆಪಿಯವರು ಅಭಿವೃದ್ಧಿಯನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಬೇಕೇ ಹೊರತು ಜಾತಿ, ಜಾತಿ, ಧರ್ಮ ಧರ್ಮಗಳ ನಡುವೆ ಸಂಘರ್ಷವುಂಟು ಮಾಡುವುದು ಸರಿಯಲ್ಲ ಎಂದರು.

ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಮಾತನಾಡಿ, ಮಂಡ್ಯದಲ್ಲಿ ನಡೆದ ಘಟನೆಯಲ್ಲಿ ತರಬೇತಿ ಪಡೆದು ಬಂದ ಹೊರಗಿನವರು ಪಾಲ್ಗೊಂಡಿದ್ದಾರೆ. ಹಾಸ್ಟೆಲ್ ಮೇಲೆ ಕಲ್ಲು ತೂರಿದ ಘಟನೆ ಬಳಿಕ ವಿದ್ಯಾರ್ಥಿಗಳು ಅಲ್ಲಿಗೆ ವಾಪಸಾಗಲು ಹೆದರುತ್ತಿದ್ದಾರೆ. ಹೀಗಾಗಿ ಕೂಡಲೇ ಘಟನೆಯಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ವಿವಿಧ ಸಮುದಾಯಗಳ ಮುಖಂಡರಾದ ಎಂ.ಶಿವಣ್ಣ, ಕೆ.ಎಸ್.ಶಿವರಾಮು, ದ್ಯಾವಪ್ಪನಾಯಕ, ನಾಗಭೂಷಣ್, ಶಿವಪ್ಪ, ಯೋಗೀಶ್ ಉಪ್ಪಾರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಫೆ.10ರಂದು ನವೋದಯ ಶಾಲೆಯ 9, 11ನೇ ತರಗತಿ ಪ್ರವೇಶ ಪರೀಕ್ಷೆ

ಮೈಸೂರು ಜ.30–ಜಿಲ್ಲೆಯ ಜವಾಹರ ನವೋದಯ ವಿದ್ಯಾಲಯಕ್ಕೆ 2024–25 ನೇ ಸಾಲಿನ 9 ಮತ್ತು 11ನೆಯ ತರಗತಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆಯು ಫೆ.10ರಂದು ಬೆಳಗ್ಗೆ 11.15ರಿಂದ 1.45ರವರೆಗೆ ನಡೆಯಲಿದೆ.

ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಇಲಾಖೆಯ www. navodaya. gov.in ವೆಬ್‌ಸೈಟ್‌ನಲ್ಲಿ ಪಡೆದು, ಪರೀಕ್ಷಾ ಕೇಂದ್ರಕ್ಕೆ ತಮ್ಮ ಪ್ರವೇಶ ಪತ್ರದೊಂದಿಗೆ ಬೆಳಗ್ಗೆ 10.30ಕ್ಕೆ ಹಾಜರಾಗಬೇಕು. 9ನೇ ತರಗತಿಯ ಪರೀಕ್ಷೆಯು ಮೈಸೂರಿನ ಜೆ.ಎಲ್.ಬಿ ರಸ್ತೆಯಲ್ಲಿರುವ ಮಹಾರಾಜ ಸರ್ಕಾರಿ ಪಿಯು ಕಾಲೇಜು (ಪ್ರೌಢಶಾಲಾ ವಿಭಾಗ) ಹಾಗೂ ನಜರ್ ಬಾದ್‌ನಲ್ಲಿರುವ ಪೀಪಲ್ಸ್ ಪಾರ್ಕ್ ಮಹಿಳಾ ಸರ್ಕಾರಿ ಪಿಯು ಕಾಲೇಜಿನಲ್ಲಿ ನಡೆಯಲಿದ್ದು, 11ನೇ ತರಗತಿಯ ಪರೀಕ್ಷೆಯು ಡಿ.ಎಂ.ಜಿ ಹಳ್ಳಿಯ ಜವಾಹರ ನವೋದಯ ವಿದ್ಯಾಲಯದಲ್ಲಿ ನಡೆಯಲಿದೆ. ದೂ.ಸಂ:0821–2970040/9448413479ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲ್ಯವಿವಾಹ, ಮಕ್ಕಳ ಹಕ್ಕುಗಳ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸಬೇಕು

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಭಿಮತ



ಮೈಸೂರಿನ ಮುಕ್ತ ವಿವಿ ಆವರಣದ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳು ಕುರಿತ ಕಾರ್ಯಾಗಾರವನ್ನು ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಉದ್ಘಾಟಿಸಿದರು.

ಮೈಸೂರು, ಜ. 30(ಆರ್‌ಕೆ)–ಬಾಲ್ಯವಿವಾಹ, ಮಕ್ಕಳ ಹಕ್ಕುಗಳು, ಶಿಕ್ಷಣ ಕುರಿತು ಪೋಷಕರಿಗೆ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅಭಿಪ್ರಾಯಪಟ್ಟಿದ್ದಾರೆ.

ಮಕ್ಕಳ ರಕ್ಷಣಾ ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ನ್ಯೂಟ್ರಿಷನ್ ಸೊಸೈಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಮುಕ್ತ ಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ಇಂದು ಜಿಲ್ಲಾ ಮತ್ತು ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳಿಗಾಗಿ ಏರ್ಪಡಿಸಿದ್ದ 'ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳು' ಕುರಿತ ಒಂದು ದಿನದ ತರಬೇತಿ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು, ಮಾತನಾಡಿದರು. ಗ್ರಾಮೀಣ ಭಾಗಗಳಲ್ಲಿ ಹೆಣ್ಣು ಮಕ್ಕಳ ಬಾಲ್ಯವಿವಾಹ ಹೆಚ್ಚಾಗಿ ನಡೆಯುತ್ತಿದೆ. ಪಾಲಕರಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ. ಮಕ್ಕಳಿಗೆ ಒಳ್ಳೆಯದು, ಕೆಟ್ಟದರ ಬಗ್ಗೆ ಅರಿವು ಮೂಡಿಸಬೇಕಾಗಿದೆ.

ಪ್ರತಿಯೊಬ್ಬರಲ್ಲೂ ಮಾನವೀಯತೆ, ಸಂವೇದನಾಶೀಲತೆ ಇರಬೇಕು. ಹೆಣ್ಣು ಮಕ್ಕಳು ಸಮಸ್ಯೆ ಹೊತ್ತು ತಂದಾಗ ಅದನ್ನು ಕಡೆಗಣಿಸದೇ ನಿವಾರಿಸಬೇಕು. ಪೋಷಕರು, ಅಧಿಕಾರಿಗಳಲ್ಲಿ ಮಕ್ಕಳ ರಕ್ಷಣೆಗಾಗಿ ಇರುವ ಕಾನೂನುಗಳ ಅರಿವಿದ್ದರೆ ಮಾತ್ರ ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸಬಹುದು ಎಂದು ಅಭಿಪ್ರಾಯಪಟ್ಟರು. ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಮಕ್ಕಳ ಏಳ್ಗೆಗಾಗಿ ನಾವು ಜವಾಬ್ದಾರಿಯುತವಾಗಿ ನಿರ್ವಹಣೆ ಮಾಡಬೇಕು. ಬಾಲ್ಯದಲ್ಲೇ ಮಕ್ಕಳಿಗೆ ಆಚಾರ–ವಿಚಾರ, ಸಂಸ್ಕೃತಿ–ಸಂಪ್ರದಾಯಗಳ ಬಗ್ಗೆ ತಿಳಿಸಿದರೆ ಮಾತ್ರ ಸಮಾಜದಲ್ಲಿ ಅವರು ಸತ್ಪ್ರಜೆಗಳಾಗುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್, ಇಂಡಿಯನ್ ಮೆಜಾರಿಟಿ ಮತ್ತು ಪೋಕ್ಸೋ ಕಾಯ್ದೆ ಪ್ರಕಾರ 18 ವರ್ಷದೊಳಗಿನವರು ಮಕ್ಕಳು ಎಂದು ಪರಿಗಣಿಸಲಾಗುತ್ತದೆ. ಸಂವಿಧಾನದ ವಿವಿಧ ವಿಧಿಯಲ್ಲಿ ಮಕ್ಕಳ ಸಮಾನತೆ, ತಾರತಮ್ಯ ವಿರುದ್ಧ ಅಲ್ಲದೆ ಪೌಷ್ಟಿಕ ಆಹಾರ, ಶಿಕ್ಷಣ, ಆರೋಗ್ಯದ ಹಕ್ಕುಗಳ ಬಗ್ಗೆ ಉಲ್ಲೇಖವಿದೆ ಎಂದರು.

ಸಂವಿಧಾನದ ಆಶಯದಂತೆ ಕೇಂದ್ರ, ರಾಜ್ಯ ಸರ್ಕಾರಗಳು ಕಾರ್ಯನಿರ್ವಹಿಸಬೇಕಾಗಿದ್ದು, ಮಕ್ಕಳ ರಕ್ಷಣೆ ಬಗ್ಗೆಯೂ ಅಧಿಕಾರಿಗಳು ಗಮನಹರಿಸಬೇಕು ಎಂದರು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಎಸ್.ಮಂಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಹೆಚ್.ಆರ್. ಸುರೇಶ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಎನ್.ಟಿ.ಯೋಗೇಶ, ಮುಕ್ತ ವಿವಿ ಆಹಾರ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಸಿ.ಅನಿತಾ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಪಾಂಡು ಹಾಗೂ ಇತರರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಜಿಲ್ಲೆಯಲ್ಲಿ ಕುಷ್ಠರೋಗ ನಿರ್ಮೂಲನೆಗೆ ನೀವೂ ಕೈಜೋಡಿಸಿ

ಸ್ಪರ್ಶ ಜಾಗೃತಿ ಜಾಥಾಗೆ ಚಾಲನೆ ನೀಡಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕರೆ



ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಮಂಗಳವಾರ ಕುಷ್ಠರೋಗ ಅರಿವು ಜಾಥಾಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು.

ಮೈಸೂರು, ಜ. 30 (ಆರ್‌ಕೆ)–ಮೈಸೂರು ಜಿಲ್ಲೆಯಲ್ಲಿ ಕುಷ್ಠರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಎಲ್ಲರೂ ಕೈಜೋಡಿಸಬೇಕೆಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕರೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಮೈಸೂರಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಆಯೋಜಿಸಿದ್ದ ಸ್ಪರ್ಶ ಕುಷ್ಠರೋಗ ಜಾಗೃತಿ ಜಾಥಾಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದ ಅವರು, ಪ್ರತಿಜ್ಞಾವಿಧಿ ಬೋಧಿಸಿ, ಮಾತನಾಡಿದರು.


ಕುಷ್ಠರೋಗ ಬೇರೊಬ್ಬರಿಗೆ ಹರಡುವ ಅಂಟು ರೋಗವಲ್ಲ. ಆರಂಭದಲ್ಲೇ ಚಿಕಿತ್ಸೆ ಪಡೆದರೆ ಗುಣಪಡಿಸಿಕೊಳ್ಳಬಹುದಾಗಿದ್ದು, ಕುಷ್ಠರೋಗಿಗಳನ್ನು ದೂರವಿರಿಸಿ ತಾರತಮ್ಯ ಮಾಡದೇ ಅವರೊಂದಿಗೆ ಬೆರೆಯಬೇಕು. ಚಿಕಿತ್ಸೆ ಕೊಡಿಸಿ ಪ್ರೋತ್ಸಾಹಿಸುವ ಅಗತ್ಯವಿದೆ. ಮೈಸೂರು ಜಿಲ್ಲೆಯನ್ನು ಕುಷ್ಠರೋಗ ಮುಕ್ತವಾಗಿಸಲು ಸಹಕರಿಸಿ ಎಂದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ, ಉಪನಿರ್ದೇಶಕಿ ಡಾ.ಮಲ್ಲಿಕಾ, ಜಿಲ್ಲಾ ಕುಷ್ಠರೋಗ ನಿಯಂತ್ರಣ ಅಧಿಕಾರಿ ಡಾ. ಬೃಂದಾ, ಇಲಾಖೆ ಅಧಿಕಾರಿಗಳು, ಗೋಪಾಲಗೌಡ, ನಟರಾಜ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು, ಆಶಾ ಕಾರ್ಯಕರ್ತರು, ಕುಷ್ಠರೋಗ ನಿರ್ಮೂಲನೆಗಾಗಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಜಾಥಾದಲ್ಲಿ ಪಾಲ್ಗೊಂಡು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ಹಾರ್ಡಿಂಜ್ ಸರ್ಕಲ್, ಸಿದ್ಧಾರ್ಥ ಹೋಟೆಲ್, ಕ್ರಿಸ್ಟಲ್ ಪಾರ್ಕ್, ಥಿಯೋಬಾಳ್ ರಸ್ತೆ ಮೂಲಕ ನಜರ್ ಬಾದ್‌ನ ಎಸ್ಪಿ ಕಚೇರಿ ಸರ್ಕಲ್ ಮಾರ್ಗ ಸಾಗಿದ ಜಾಥಾ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ ಬಳಿ ಅಂತ್ಯಗೊಂಡಿತು. ಕುಷ್ಠರೋಗದ ಬಗ್ಗೆ ಘೋಷಣಾ ಫಲಕಗಳನ್ನು ಪ್ರದರ್ಶಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು.

ಸಖಿ ಸ್ವಾವಲಂಬಿ ಯೋಜನೆಗಾಗಿ ಅರ್ಜಿ ಆಹ್ವಾನ

ಮೈಸೂರು, ಜ. 30–ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಮೈಸೂರು, ನ್ಯಾಷನಲ್ ಸ್ಕಿಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಹಾಗೂ ದಿ ಆರ್.ಸಿ.ಎಸ್.ಎಸ್‌ನ ಸಹಯೋಗದೊಂದಿಗೆ 'ಸಖಿ ಸ್ವಾವಲಂಬಿ' ಯೋಜನೆಗಾಗಿ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ನರ್ಸರಿ ಟೀಚರ್ ಟ್ರೈನಿಂಗ್ ತರಬೇತಿ, ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿ, ಎಂಟಿಟಿ (ಮಾಂಟೆಸ್ಸರಿ ಟೀಚರ್ ಟ್ರೈನಿಂಗ್)ಕಂಪ್ಯೂಟರ್ ಶಿಕ್ಷಣ ಮುಂತಾದ ವಿಷಯಗಳ ಕುರಿತು ತರಬೇತಿ ನೀಡಿ ಉದ್ಯೋಗವಕಾಶ ಕಲ್ಪಿಸಿಕೊಡುವ ಈ ಯೋಜನೆಗೆ ದ್ವಿತೀಯ ಪಿಯುಸಿ, ಡಿಪ್ಲೊಮಾ, ಪದವಿ ಮುಂತಾದ ವಿದ್ಯಾರ್ಹತೆ ಹೊಂದಿರುವ 18ಕ್ಕಿಂತ ಮೇಲ್ಪಟ್ಟ ಎಲ್ಲಾ ವರ್ಗದ ಮಹಿಳೆಯರು ಫಲಾನುಭವಿಗಳಾಗಿರುತ್ತಾರೆ. ಆಸಕ್ತರು ಅರ್ಜಿಗಳನ್ನು ಎಸ್‌ಎಸ್‌ಐಟಿ ಸಲ್ಯೂಷನ್ಸ್, ತಾರಕ ಪಾರ್ಕ್ ಹತ್ತಿರ,ರಾಮಕೃಷ್ಣ ನಗರ ಇಲ್ಲಿ ಸೂಕ್ತ ದಾಖಲಾತಿಗಳನ್ನು ನೀಡಿ ಪಡೆಯಬಹುದಾಗಿದೆ. ಮಾಹಿತಿಗಾಗಿ 9964790442, 8310306882 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.1.2024 ಬುಧವಾರ, ಮಳೆ ನಕ್ಷತ್ರ: ಶ್ರವಣ 24.1.2024 ರಿಂದ 05.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಜುವೆಲ್ ಆರ್ಟ್ :** ಕಲಾವಿದರು ಮತ್ತು ಉಪನ್ಯಾಸಕರಾದ ಡಾ. ವಿಠ್ಠಲರಡ್ಡಿ, ಎಫ್. ಚುಳಕಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11 ಗಂಟೆಯಿಂದ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ರಾಷ್ಟ್ರೀಯ ಯುವ ದಿನಾಚರಣೆ, ಉದ್ಘಾಟನೆ : ಸಾಮಾಜಿಕ ನ್ಯಾಯ ವೇದಿಕೆ ಪ್ರಾದೇಶಿಕ ಮುಖ್ಯಸ್ಥ ಸತೀಶ್ ಮೈತ್ರಿ, ಅಧ್ಯಕ್ಷತೆ : ಪಿಬಿಎಂಎಂಇಸಿ ನಿರ್ದೇಶಕ ಡಾ. ಸಿ.ಕೆ. ರೇಣುಕಾರ್ಯ, ಉಪಸ್ಥಿತರು : ಆರ್‌ಎಲ್‌ಹೆಚ್‌ಪಿ ಕಾರ್ಯದರ್ಶಿ ಪ್ರೊ. ವಿ.ಕೆ. ಜೋಸ್, ನಿರ್ದೇಶಕರಾದ ಸರಸ್ವತಿ, ಡಾ. ವಿ. ಭಾವನಾ, ಸ್ಥಳ: ಎಂಟಿಎ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ನಟರಾಜ ಪಬ್ಲಿಕ್ ಸ್ಕೂಲ್:** ನಟರಾಜೋತ್ಸವ, ವಾರ್ಷಿಕ ಸಮಾರಂಭ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಲ್. ನಾಗೇಂದ್ರ, ಸಮಾರೋಪ ಭಾಷಣ: ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಕಾರ್ಯದರ್ಶಿ ಶ್ರೀಮತಿ ಸರಸ್ವತಿ, ವಿಶೇಷ ಅತಿಥಿಗಳು: ಮೈಸೂರು ವಿವಿ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಶ್ರೀ ನಟರಾಜ ಪ್ರತಿಷ್ಠಾನ ವಿಶೇಷ ಅಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾಂಗಣ, ಸಂಜೆ 4ಕ್ಕೆ.

■ **ವೇದಶಾಸ್ತ್ರ ಪೋಷಿಣೀ ಸಭಾ:** ವಿದ್ವಾಂಸರ ಸಮ್ಮಾನ ಸಮಾರಂಭ, ಸಮ್ಮಾನಪ್ರದಾತಾ: ನಿವೃತ್ತ ಐಎಎಸ್ ಅಧಿಕಾರಿ ಎ.ರಾಮಸ್ವಾಮಿ, ಅಧ್ಯಕ್ಷತೆ: ವೇದಶಾಸ್ತ್ರ ಪೋಷಿಣೀ ಸಭಾ ಅಧ್ಯಕ್ಷ ವಿದ್ವಾನ್ ಪ್ರೊ. ಬಿ.ಎನ್.ನಾಗರಾಜ ಭಟ್ಟ, ಪ್ರಶಸ್ತಿ ಪುರಸ್ಕೃತರು: ವಿದ್ವಾನ್ ನಾಗೇಶಶಾಸ್ತ್ರೀ ಹೇರಲೇಕರ್, ವಿದ್ವಾನ್ ಎಸ್.ಕೃಷ್ಣಮೂರ್ತಿ ಭಟ್ಟರು, ವಿದ್ವಾನ್ ಪಳ್ಳತ್ತಡ್ಕ ಶಂಕರನಾರಾಯಣ ಭಟ್ಟರು, ವಿದ್ವಾನ್ ಶ್ರೀಧರ ಶೇಷ ಅಡಿ, ವಿದ್ವಾನ್ ಕೆ.ರಾಜಗೋಪಾಲಾಚಾರ್ಯ, ವಿದ್ವಾನ್ ಟಿ.ಎನ್.ಪ್ರಭಾಕರ್, ವಿದ್ವಾನ್ ಟಿ.ಎನ್. ಪ್ರಭಾಕರ, ವಿದ್ವಾನ್ ಜಿ.ಮಹಾಬಲೇಶ್ವರ ಭಟ್ಟರು, ವಿದ್ವಾನ್ ರಾಜೇಶ್ವರಶಾಸ್ತ್ರೀ ಜೋಶಿ, ವಿದ್ವಾನ್ ಎಸ್.ರಂಗನಾಥ, ವಿದುಷಿ ದಿನಮಣಿ ಶ್ರೀನಿವಾಸಮೂರ್ತಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಪರಂಪರೆ :** ಗಿರಿಜಾ ಕಲ್ಯಾಣ ಸಪ್ತಾಹ, ಡಾ. ಜ್ಯೋತಿಶಂಕರ್ ಅವರಿಂದ ಗಿರಿಜಾ ಕಲ್ಯಾಣ–ದಕ್ಷದಹನ ಕುರಿತು ಪ್ರವಚನ, ಸ್ವರಸಾಗರ ಮ್ಯೂಸಿಕ್ ಫೌಂಡೇಷನ್‌ನಿಂದ ಹಾಡುಗಳು, ಸ್ಥಳ: ಗಣಪತಿ ದೇವಸ್ಥಾನದ ರಜತ್ ಸಭಾಂಗಣ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6 ಗಂಟೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ– ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ–ಮೂಕನಹಳ್ಳಿ ರಂಗಸ್ವಾಮಿ, 6.40 ಪದಸಂಸ್ಕೃತಿ–ಡಾ. ಜ್ಯೋತಿ ಶಂಕರ್, 6.50 ರೈತರಿಗೆ ಸಲಹೆ, 7.15 ಆರೋಗ್ಯವಾಣಿ –ಪ್ರಾಯೋಜಿತ ಕಾರ್ಯಕ್ರಮ, 8.30 ಆರೋಗ್ಯಧಾರೆ, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಸಂಗೀತ–ದೊಂಡುತಾಯ್ ಕುಲಕರ್ಣಿ–ಗಾಯನ, 10.30 ಆರೋಗ್ಯಧಾರೆ–ನೇರ ಫೋನ್ ಇನ್ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 3.00 ಅರುಣಾ ಸಾಯಿರಾಂ– ಹಾಡುಗಾರಿಕೆ, 4.00 ಮಹಿಳಾರಂಗ–ಸ್ತ್ರೀ ಚೇತನ– ಸಸ್ಯಶಾಸ್ತ್ರಜ್ಞೆ ಹಾಗೂ ಯುವ ವಿಜ್ಞಾನಿ ಡಾ. ಶೋಭಾ ಕೋರಣ್ಣನವರ್ ಅವರೊಂದಿಗೆ ಮಾತುಕತೆ. ನಡೆಸಿಕೊಡುತ್ತಾರೆ ಅಬ್ದುಲ್ ರಶೀದ್, 4.45ಹಿಂದಿ ಪಾಠ, ಪ್ರಸ್ತುತಿ– ಡಾ. ಜಯಂತಿ ಪ್ರಸಾದ್ ನೌಟಿಯಾಲ್, 6.50 ಕೃಷಿರಂಗ–ಸಾವಯವ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಮಾರಾಟ ಕುರಿತು ಸಂವಾದದಲ್ಲಿ ಭಾಗವಹಿಸುತ್ತಾರೆ ಎಂ.ಎಂ. ನವೀನ್‌ಕುಮಾರ್ ಹಾಗೂ ಕೆ.ಎಸ್. ವೀಣಾ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಪಂಡಿತ್ ಶಿವಕುಮಾರ್ ಶರ್ಮ–ಸಂತೂರ್ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು

ಗಾಂಧೀಜಿ ತ್ಯಾಗ ಅವಿಸ್ಮರಣೀಯ

ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ಕಾರ್ಯದರ್ಶಿ ಸರೋಜಮ್ಮ ತುಳಸೀದಾಸ್ ಸ್ಮರಣೆ



ಮೈಸೂರಿನ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಮಂಗಳವಾರ ಗಾಂಧೀಜಿ ಅವರ ಹುತಾತ್ಮ ದಿನ ಆಚರಿಸಲಾಯಿತು.

ಮೈಸೂರು,ಜ.30(ಪಿಎಂ)– ದೇಶದ ಸ್ವಾತಂತ್ರ್ಯ ಮತ್ತು ಜನರ ಕಲ್ಯಾಣಕ್ಕಾಗಿ ಗಾಂಧೀಜಿ ಅವರ ತ್ಯಾಗ ಅವಿಸ್ಮರಣೀಯ ಎಂದು ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ ಕಾರ್ಯ ದರ್ಶಿ ಸರೋಜಮ್ಮ ತುಳಸೀದಾಸ್ ಸ್ಮರಿಸಿದರು.

ಮೈಸೂರಿನ ಗಂಗೋತ್ರಿ ಬಡಾವಣೆಯಲ್ಲಿರುವ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಷ್ಟ್ರಪಿತ ಗಾಂಧೀಜಿ ಅವರ 76ನೇ ಹುತಾತ್ಮ ದಿನಾಚರಣೆಯಲ್ಲಿ ಗಾಂಧಿ ಕಟೌಟ್‌ಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ನಮ್ಮ ಮಾವ ಹೆಚ್.ಸಿ.ದಾಸಪ್ಪ ಅವರು ಗಾಂಧಿಯವರ ಒಡನಾಡಿಯಾಗಿದ್ದವರು. ಗಾಂಧೀಜಿ ಹತ್ಯೆಯಾದ ಸಂದರ್ಭದಲ್ಲಿ ಹೆಚ್.ಸಿ.ದಾಸಪ್ಪನವರು ಅವರ ಜತೆಗಿದ್ದರು. ಹಂತಕನ ಗುಂಡೇಟಿಗೆ 'ಹೇ ರಾಮ್' ಎಂದು ಕುಸಿದ ಗಾಂಧೀಜಿ ಅವರ ಬಾಯಿಗೆ ಅಲ್ಲೇ ಇದ್ದ ಚೆಂಬಿನಿಂದ ಮೊದಲಿಗೆ ನೀರು ಬಿಟ್ಟವರು ಹೆಚ್.ಸಿ.ದಾಸಪ್ಪನವರು ಎಂದು ಹೇಳಿದರು. ಅದರ ನೆನಪಿಗಾಗಿ ಹೆಚ್.ಸಿ.ದಾಸಪ್ಪನವರು ಗಾಂಧೀಜಿ ಚಿತಾಭಸ್ಮವನ್ನು ಕರ್ನಾಟಕಕ್ಕೆ ತರುವಾಗ, ಆ ಚೆಂಬಿನ ಮುಚ್ಚಳವನ್ನೂ ತಂದರು. ಗಾಂಧೀಜಿ ಚಿತಾಭಸ್ಮ ಮತ್ತು ಚೆಂಬಿನ ಮುಚ್ಚಳವನ್ನು ಈಗಲೂ ಅರಸೀಕೆರೆಯಲ್ಲಿರುವ ಕಸ್ತೂರ್ ಬಾ ಆಶ್ರಮದಲ್ಲಿ ಇಡಲಾಗಿದೆ ಎಂದು ತಿಳಿಸಿದರು.


ಸಂಸ್ಥೆಯ ಖಜಾಂಚಿ ಹಾಗೂ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡಿ, ಗಾಂಧೀಜಿ ವಿಚಾರಧಾರೆಗಳು ಸರ್ವಕಾಲಕ್ಕೂ ಸಲ್ಲುವಂಥದ್ದು. ಹಲವು ಭಾಷೆ, ಹಲವು ಧರ್ಮ, ಪಂಗಡ ಹೊಂದಿರುವ ಭಾರತ ಭಿನ್ನತೆಯಲ್ಲಿ ಏಕತೆ ಕಾಣಬೇಕಾದರೆ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ವ್ಯವಸ್ಥೆ ಅತೀ ಮುಖ್ಯವೆಂದು ಗಾಂಧಿ ಮನಗಂಡಿದ್ದರು. ಆದರೆ ಅಂದು ಗಾಂಧೀಜಿ ಅವರ ಭವ್ಯಭಾರತದ ದೂರದೃಷ್ಟಿಕೋನ ಅರಿಯದ ತಿಳಿಗೇಡಿಗಳಿಗೆ ಅದು ಅರ್ಥವಾಗಲಿಲ್ಲ. ಇಂದೂ ಸಹ ಗಾಂಧೀಜಿ ಅಂತರ್ಯ ಅರಿಯುವ ಪ್ರಯತ್ನ ಮಾಡುತ್ತಿಲ್ಲ ಎಂದು ವಿಷಾದಿಸಿದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಕರ್ನಾಟಕ ಸರ್ಕಾರದ ವಿಶ್ರಾಂತ ವಿಶೇಷ ಕಾರ್ಯದರ್ಶಿ ಡಾ.ಪಿ.ಬೋರೇಗೌಡ ಮಾತನಾಡಿ, ನಮ್ಮ ಸಮಾಜದಲ್ಲಿ ಪ್ರಾಮಾಣಿಕವಾಗಿ ದುಡಿಯುವವರನ್ನು ಗೌರವಿಸುವ ಕೆಲಸವಾಗುತ್ತಿಲ್ಲ. ಭ್ರಷ್ಟರನ್ನು ಆರಾಧಿಸುವ ವಾತಾವರಣ ಸೃಷ್ಟಿಯಾಗುತ್ತಿದೆ. ಇದರಿಂದ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದ್ದರೆ, ಪ್ರಜಾಪ್ರಭುತ್ವ ವ್ಯವಸ್ಥೆ ಹಾಳು ಬೀಳುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಗಾಂಧಿ ಪುಣ್ಯ ಸ್ಮರಣೆಯ ಹಿನ್ನೆಲೆಯಲ್ಲಿ ನಿಮಿಷ ಕಾಲ ಮೌನಾಚರಣೆ ನಡೆಸಲಾಯಿತು. ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಗುಂಡಪ್ಪ ಗೌಡ, ವಿಶ್ರಾಂತ ಕುಲಪತಿ ಡಾ.ಎನ್.ಎಸ್. ರಾಮೇಗೌಡ, ವಿಶ್ರಾಂತ ಐಜಿಪಿ ಅರ್ಕೇಶ್, ಕುಂಬಾರಕೊಪ್ಪಲಿನ ಹಿರಿಯ ಮುಖಂಡ ಕೆ.ಎಂ.ಬಸವೇಗೌಡ, ನಿವೃತ್ತ ಅಧಿಕಾರಿ ಶ್ರೀಕಂಠಸ್ವಾಮಿ, ಸಂಸ್ಥೆಯ ಪತ್ರಿಕಾ ಕಾರ್ಯದರ್ಶಿ ಎಸ್.ಪ್ರಕಾಶ್ ಬಾಬು ಸೇರಿದಂತೆ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರು ಹಾಜರಿದ್ದರು.

ಕೆ.ಆರ್.ಆಸ್ಪತ್ರೆಗೆ ಮಾನವ ಹಕ್ಕುಗಳ ಆಯೋಗ ಭೇಟಿ; ಪರಿಶೀಲನೆ

ರೋಗಿಗಳಿಗೆ ಸೂಕ್ತ ಚಿಕಿತ್ಸಾ ವ್ಯವಸ್ಥೆಗೆ ಸೂಚನೆ



ಕೆ.ಆರ್.ಆಸ್ಪತ್ರೆಗೆ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಲ್.ನಾರಾಯಣ ಸ್ವಾಮಿ ಮಂಗಳವಾರ ಸಂಜೆ ಭೇಟಿ ನೀಡಿ, ರೋಗಿಗಳ ಸಂಬಂಧಿಕರ ಸಮಸ್ಯೆಗಳನ್ನು ಆಲಿಸಿದರು.

ಮೈಸೂರು, ಜ.30(ಎಸ್‌ಪಿಎನ್)– ನಗರದ ಕೃಷ್ಣರಾಜ ಆಸ್ಪತ್ರೆಗೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಲ್.ನಾರಾಯಣ ಸ್ವಾಮಿ ಮಂಗಳವಾರ ಸಂಜೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಆಸ್ಪತ್ರೆಯ ಒಳರೋಗಿಗಳ ವಾರ್ಡ್‌ಗಳು, ರೇಡಿಯೋ ಡಯಾಗ್ನೋಸಿಸ್ ವಿಭಾಗ, ಎಕ್ಸ್ ರೇ, ಅಲ್ಟ್ರಾ ಸೌಂಡ್, ಒಪಿಡಿ, ಅಪರೇಷನ್ ಥಿಯೇಟರ್, ರೋಗಿಗಳ ನೋಂದಣಿ ವಿಭಾಗ, ಔಷಧಿ ದಾಸ್ತಾನು ಕೇಂದ್ರಕ್ಕೆ ಭೇಟಿ ಇಲ್ಲಿನ ಸಮಸ್ಯೆಗಳನ್ನು ಪರಿಶೀಲಿಸಿದರಲ್ಲದೆ, ಬಳಿಕ ಔಷಧಿಗಳ ದಾಸ್ತಾನು ದಾಖಲಾತಿ ಹಾಗೂ ರೋಗಿಗಳ ಸಂಬಂಧಿಕರನ್ನು ಭೇಟಿಯಾಗಿ ಅವರ ಕುಂದು–ಕೊರತೆಗಳನ್ನು ವಿಚಾರಿಸಿದರು.

ಈ ವೇಳೆ ಆಸ್ಪತ್ರೆ ವೈದ್ಯರು ಕೆಲವು ಔಷಧಿಗಳನ್ನು ಹೊರಗಡೆಗೆ ಚೀಟಿ ಕೊಡುತ್ತಾರೆ. ಸರಿಯಾದ ವೇಳೆಗೆ ಬರುವುದಿಲ್ಲ. ಇಲ್ಲಿನ ಸಿಬ್ಬಂದಿ ರೋಗಿಗಳಿಗೆ ಸರಿಯಾದ ಚಿಕಿತ್ಸೆ ನೀಡಲು ಹಿಂದೇಟು ಹಾಕುತ್ತಾರೆ ಎಂದು ದೂರಿದರು.

ಗ್ರಾಮೀಣ ಪ್ರದೇಶದಿಂದ ಸರ್ಕಾರಿ ಆಸ್ಪತ್ರೆಗೆ ಬರುವವರು ಕಡು ಬಡತನದಲ್ಲಿರುವವರು . ಇಂತಹವರಿಗೆ ಉತ್ತಮ ಆರೋಗ್ಯ ಸೇವೆ ದೊರಕಬೇಕು. ಆಸ್ಪತ್ರೆಯಲ್ಲಿ ಶುಚಿತ್ವ, ರೋಗಿಗಳ ಪಾಲನೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಇಲ್ಲಿನ ಸಿಬ್ಬಂದಿಗಳ ದೂರದಿಂದ ಬರುವ ರೋಗಿಗಳ ಹಾಗೂ ಸಂಬಂಧಿಕರಲ್ಲಿನ ಆತಂಕ ನಿವಾರಣೆ ಮಾಡಲು ಪ್ರಯತ್ನಿಸಬೇಕು. ಸಣ್ಣ, ಪುಟ್ಟ ಸಮಸ್ಯೆಗಳನ್ನು ಬಗೆಹರಿಸಲು ತಮ್ಮ ಹಂತದಲ್ಲೇ ಬಗೆಹರಿಸಲು ಪ್ರಯತ್ನಿಸಬೇಕು. ಮರಣ ಪ್ರಮಾಣ ಪತ್ರ ವಿತರಣೆ ತಡವಾಗುತ್ತಿರುವ ಬಗ್ಗೆ ಅಧಿಕಾರಿಗಳು ಗಮನಹರಿಸಿ ಬೇಗ ಸಿಗುವಂತೆ ಕ್ರಮ ವಹಿಸಬೇಕು ಎಂದು ಹಿರಿಯ ವೈದ್ಯರಿಗೆ ಸೂಚಿಸಿದರು.

ಪರಿಶೀಲನೆ ವೇಳೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯರಾದ ಡಾ.ಟಿ.ಶ್ಯಾಮ್‌ಭಟ್, ಡಾ.ಎಸ್.ಕೆ.ವೆಂಟಗೋಡಿ, ಆರ್‌ಎಂಓ ಡಾ.ನಯಾಜ್ ಹಾಗೂ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಶೋಭಾ ಹಾಗೂ ಹಿರಿಯ ವೈದ್ಯರು ಹಾಜರಿದ್ದರು.

ತಾಕತ್ತಿದ್ದರೆ ಕಾಂತರಾಜ್ ವರದಿ ಸ್ವೀಕರಿಸಿ

- ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮಾಜಿ ಸಿಎಂ ಕುಮಾರಸ್ವಾಮಿ ಸವಾಲು
- ಬಡ ಜನರಿಗೆ ಅದು ಅನುಕೂಲವಾಗುವುದಾದರೆ ನಮ್ಮ ಪೂರ್ಣ ಬೆಂಬಲವಿದೆ
- ಶೋಷಿತರಿಗೆ ನ್ಯಾಯ ಕೊಡಲು ನಿಮಗೆ ಇಷ್ಟು ವರ್ಷ ಬೇಕಿತ್ತಾ?

ಬೆಂಗಳೂರು, ಜ.30(ಕೆಎಂಶಿ)– ಕಾಂತರಾಜ್ ವರದಿಯನ್ನು ತಾಕತ್ತಿದ್ದರೆ ಸ್ವೀಕರಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಸವಾಲು ಹಾಕಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂತರಾಜ್ ವರದಿ ಅತ್ಯುತ್ತಮವಾಗಿದ್ದರೆ ಸ್ವೀಕರಿಸಿ, ನಿಮ್ಮವರೇ ವರದಿ ವೈಜ್ಞಾನಿಕವಾಗಿದೆ ಎಂದು ಸಭೆಗಳನ್ನು ಮಾಡಿದ್ದಾರೆ. ಇಂತಹ ವರದಿಯನ್ನು ಸ್ವೀಕರಿಸಿ, ಅನುಷ್ಠಾನ ಮಾಡಲು ನಿಮ್ಮಿಂದ ಸಾಧ್ಯವೇ? ಎಂದು ಪ್ರಶ್ನಿಸಿದ್ದಾರೆ.

ನಾಡಿನ ಜನರಿಗೆ ಅದರಲ್ಲೂ ಬಡ ವರ್ಗದ ಎಲ್ಲರಿಗೂ ಅನುಕೂಲವಾಗುವುದಾದರೆ ಜಾರಿಗೆ ತನ್ನಿ. ಅದನ್ನು ಬಿಟ್ಟು ನಿಮ್ಮ ದೃಷ್ಟಿಕೋನದಡಿ ಅನುಷ್ಠಾನಗೊಳಿಸಲು ಹೊರಟರೆ ಮುಂದೆ ಅದರ ಪಾಪದ ಫಲ ಅನುಭವಿಸುತ್ತೀರಿ ಎಂದು ಎಚ್ಚರಿಸಿದ್ದಾರೆ. ನಾನು ಅಧಿಕಾರದಲ್ಲಿದ್ದಾಗ ಆ ವರದಿ ಸ್ವೀಕರಿಸಿಲ್ಲ ಎಂದು ಆರೋಪಿಸುವ ನೀವು, ಅಧಿಕಾರಕ್ಕೆ ಬಂದು ವರ್ಷವಾಗುತ್ತಿದ್ದರೂ ಇನ್ನು ಏಕೆ ತಾವು ವರದಿ ಸ್ವೀಕರಿಸಿಲ್ಲ ಎಂದು ಪ್ರಶ್ನಿಸಿದರು.

ಆಯೋಗದ ಸದಸ್ಯ ಕಾರ್ಯದರ್ಶಿ ಸಹಿ ಹಾಕದ ವರದಿಯನ್ನು ಸ್ವೀಕರಿಸಬಹುದೇ ಎಂದು ಪ್ರಶ್ನಿಸಿದ ಅವರು, ಎಲ್ಲ ಸಮುದಾಯದ ಬಡ ಕುಟುಂಬಗಳಿಗೆ ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ನೆರವಾಗುವುದಾದರೆ ನಮ್ಮ ಪಕ್ಷ ಎಲ್ಲ ರೀತಿಯ ಸಹಕಾರ ಕೊಡಲಿದೆ. ಪ್ರಾಮಾಣಿಕವಾಗಿ ಅನುಷ್ಠಾನ ಮಾಡುವುದಾದರೆ ಷರತ್ತು ರಹಿತ ಬೆಂಬಲ ಕೊಡುತ್ತೇವೆ. ಇದು ನೀವು (ಮುಖ್ಯಮಂತ್ರಿ) ಬರೆಸಿರುವ ವರದಿ ಎಂದು ಆರೋಪಿಸಿದರು.

ಶೋಷಿತರಿಗೆ ನ್ಯಾಯ ಕೊಡಲು ಇಷ್ಟು ದಿನ ಬೇಕಿತ್ತೆ ಶೋಷಿತ ವರ್ಗಗಳ ಅನ್ಯಾಯದ ಬಗ್ಗೆ ಮಾತನಾಡುವ ಮುಖ್ಯಮಂತ್ರಿಗಳು ರಾಜಕೀಯಕ್ಕೆ ಬಂದು 35 ವರ್ಷಕ್ಕೂ ಹೆಚ್ಚಾಗಿದೆ. ಅಂದಿನಿಂದ ಇಂದಿನವರೆಗೂ ಏಕೆ ಆಗಿರುವ ಅನ್ಯಾಯವನ್ನು ಸರಿಪಡಿಸಲಿಲ್ಲ ಎಂದು ಪ್ರಶ್ನಿಸಿದರು. ಶೋಷಿತರ ಜಾಗೃತಿ ಸಮಾವೇಶ ಮಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಈವರೆಗೆ ಮೀಸಲು ಸೌಲಭ್ಯವನ್ನು ಯಾರೆಲ್ಲಾ ಪಡೆದುಕೊಂಡಿದ್ದಾರೆ ಎಂಬ ಬಗ್ಗೆ ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.

ಒಬ್ಬ ಕುರಿ ಕಾಯುವವನ ಮಗ ಮುಖ್ಯಮಂತ್ರಿ ಆದ ಅಂತಾ ನನ್ನ ಮೇಲೆ ವಿಷ ಕಾರ್ತಾರೆ ಅಂತ ಅಳಲು ತೋಡಿಕೊಂಡಿದ್ದಾರೆ. ಕುರಿ ಕಾಯುವ ಮಗನನ್ನೇ ಅಂದು ದೇವೇಗೌಡರು ಆರ್ಥಿಕ ಸಚಿವರನ್ನಾಗಿ ಮಾಡಿದ್ದರು. ನಿಮ್ಮ ಇಷ್ಟು ವರ್ಷದ ರಾಜಕೀಯದಲ್ಲಿ ಎಷ್ಟು ಸಲ ಸಚಿವರಾಗಿದ್ದೀರಿ, ಮುಖ್ಯಮಂತ್ರಿ ಆಗಿದ್ದೀರಿ, ಉಪಮುಖ್ಯಮಂತ್ರಿ ಆಗಿದ್ದೀರಿ, ಜಾತಿವ್ಯವಸ್ಥೆ, ಶೋಷಣೆ ಅಂತ್ಯ ಮಾಡಲು ಅವಕಾಶ ಇತ್ತು, ಯಾಕೆ ಮಾಡಲಿಲ್ಲ ಎಂದು ಅವರು ಸಿದ್ದರಾಮಯ್ಯ ಅವರನ್ನು ಖಾರವಾಗಿ ಪ್ರಶ್ನಿಸಿದರು.

ಸಮಾಜ ಒಡೆಯುವ ರಾಜಕಾರಣ ನಿಲ್ಲಿಸಿ: ಸಮಾಜವನ್ನು ಒಡೆಯುವ ರಾಜಕಾರಣ ನಿಲ್ಲಿಸಿ, ಎಷ್ಟು ದಿನ ಅಧಿಕಾರದಲ್ಲಿ ಇರ್ತೀರಾ, ಕದ್ದುಮುಚ್ಚಿ ನಿಮ್ಮ ಹಾಗೆ ರಾಜಕೀಯ ಮಾಡೋನಲ್ಲ ನಾನು. ನೇರವಾಗಿಯೇ ನಾನು ಬಿಜೆಪಿ ಜೊತೆ ಕೈ ಜೋಡಿಸಿದ್ದೇನೆ. ನಿಮ್ಮ ಹಾಗೆ ಹೊಂದಾಣಿಕೆ ರಾಜಕಾರಣ ಮಾಡಲ್ಲ. ಜನಪರ ತೀರ್ಮಾನಗಳು ಇದ್ದರೆ ನಾವು ಕೂಡ ಬೆಂಬಲ ಕೊಡುತ್ತೇವೆ. ಕಮೀಷನ್ ಹೊಡೆಯುವುದನ್ನು ನಿಲ್ಲಿಸಿ, ಕೆಲಸ ಮಾಡಿ ಎಂದು ಸಿದ್ದರಾಮಯ್ಯ ಮೇಲೆ ಹರಿಹಾಯ್ದರು.

ಮಂಡ್ಯದಲ್ಲಿ ಬೆಂಕಿ ಹಚ್ಚಿದ್ದು ನೀವು: ನಾನು ಬೆಂಕಿ ಹಚ್ಚಲು ಮಂಡ್ಯಕ್ಕೆ ಹೋಗಿರಲಿಲ್ಲ, ಬೆಂಕಿ ಹಚ್ಚಿದ್ದು ನೀವು ಎಂದು ಕುಮಾರಸ್ವಾಮಿ ಅವರು ಕಾಂಗ್ರೆಸ್ ಸರ್ಕಾರಕ್ಕೆ ಇದೇ ಸಂದರ್ಭದಲ್ಲಿ ತಿರುಗೇಟು ನೀಡಿದರು. ಕೆರಗೋಡು ಘಟನೆಗೂ, ನನಗೂ ಸಂಬಂಧವಿಲ್ಲ. ಕೆರಗೋಡು ಘಟನೆಗೆ ಸರ್ಕಾರದ ನಡವಳಿಕೆಗಳೇ ಕಾರಣ ಎಂದು ವಾಗ್ದಾಳಿ ನಡೆಸಿದರು.

ಬರಗಾಲದಿಂದ ರೈತರು ಸಂಕಷ್ಟದಲ್ಲಿದ್ದರೂ ಕೃಷಿ ಸಾಲ ಮನ್ನಾ ಅಸಾಧ್ಯ

ಬೆಂಗಳೂರು, ಜ.30(ಕೆಎಂಶಿ)– ತೀವ್ರ ಬರಗಾಲದಿಂದ ರೈತ ಸಂಕಷ್ಟದಲ್ಲಿದ್ದರೂ ಕೃಷಿ ಸಾಲ ಮನ್ನಾ ಅಸಾಧ್ಯ ಎಂದಿರುವ ಸಹಕಾರಿ ಸಚಿವ ಕೆ.ಎನ್.ರಾಜಣ್ಣ, ದೀರ್ಘಾವಧಿ ಸಾಲದ ಮೇಲಿನ ಬಡ್ಡಿ, ಚಕ್ರಬಡ್ಡಿ ಮನ್ನಾ ಮಾಡುವ ಕಾಲಾವಧಿ ವಿಸ್ತರಣೆ ಪ್ರಸ್ತಾಪ ಇಲ್ಲ ಎಂದಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಆಡಳಿತದಲ್ಲಿ ಸಾಲ ಮನ್ನಾ ಮಾಡಿದ 400 ಕೋಟಿ ರೂ. ಇನ್ನೂ ತೀರಿಸಲಾಗುತ್ತಿಲ್ಲ, ಅದೇ ಬಾಕಿ ಇರುವಾಗ ಹೊಸದಾಗಿ ಸಾಲ ಮನ್ನಾ ಮಾಡುವುದಾದರೂ ಹೇಗೆ ಎಂದು ಪ್ರಶ್ನಿಸಿದ್ದಾರೆ. ರೈತನ ಸಂಕಷ್ಟದ ಅರಿವು ನಮಗೂ ಇದೆ. ಹಾಗೆಂದೇ ಸರ್ಕಾರ ಬರ ಪರಿಹಾರ ಸೇರಿದಂತೆ ಇತರ ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆ. ಜೊತೆಗೆ ಸಹಕಾರಿ ಬ್ಯಾಂಕ್‌ಗಳಲ್ಲಿ ರೈತರು ಪಡೆದಿರುವ ದೀರ್ಘಾವಧಿ ಸಾಲವನ್ನು ಪೂರ್ಣವಾಗಿ ಪಾವತಿಸಿದರೆ ಅದರ ಮೇಲಿನ ಬಡ್ಡಿ ಹಾಗೂ ಚಕ್ರಬಡ್ಡಿ ಮನ್ನಾ ಮಾಡುವ ಅವಕಾಶ ಫೆಬ್ರವರಿ ಅಂತ್ಯದವರೆಗೆ ಇದ್ದು, ಇದನ್ನು ಬಳಸಿಕೊಳ್ಳಬಹುದು.

ರೈತರು ಸೇರಿದಂತೆ ಸಹಕಾರಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಯಶಸ್ವಿನಿ ಯೋಜನೆ ಮರುಜಾರಿ ಮಾಡಲಾಗಿದೆ. ಕೇಂದ್ರದ ಆಯುಷ್ಮಾನ್ ಯೋಜನೆಯಡಿ ಹೇಗೆ ಚಿಕಿತ್ಸಾ ದರವನ್ನು ನಿಗದಿ ಪಡಿಸಲಾಗಿದೆಯೋ ಅದೇ ರೀತಿ ಯಶಸ್ವಿನಿ ಯೋಜನೆಗೂ ಅಳವಡಿಸಲಾಗಿದೆ. ಯಶಸ್ವಿನಿ ಯೋಜನೆಯಡಿ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಒಂದು ವಾರದೊಳಗೆ ಹಣ ಪಾವತಿ ಮಾಡಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಎಲ್ಲರನ್ನೂ ಸಮಾನತೆಯಿಂದ ಕಾಣುವುದು; ಎಲ್ಲರಿಗೂ ನ್ಯಾಯ ಕಲ್ಪಿಸುವುದೇ ರಾಮ ರಾಜ್ಯದ ಪರಿಕಲ್ಪನೆ

ಬೆಂಗಳೂರು, ಜ. 30(ಕೆಎಂಶಿ)– ಎಲ್ಲ ಜಾತಿ–ಧರ್ಮದವರು ಸೌಹಾರ್ದತೆಯಿಂದ ಬಾಳಬೇಕೆಂಬ ಕನಸನ್ನು ಕಂಡಿದ್ದ ಮಹಾತ್ಮ ಗಾಂಧೀಜಿ, ಎಲ್ಲರನ್ನೂ ಸಮಾನವಾಗಿ ಕಾಣುವ, ಎಲ್ಲರಿಗೂ ನ್ಯಾಯವನ್ನು ಒದಗಿಸುವುದೇ ಅವರ ರಾಮ ರಾಜ್ಯದ ಪರಿಕಲ್ಪನೆಯಾಗಿತ್ತು ಎಂದು ಸಿಎಂ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.



ಮಹಾತ್ಮ ಗಾಂಧೀಜಿ ಪುಣ್ಯ ಸ್ಮರಣೆ ಸಂದರ್ಭದಲ್ಲಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಾತ್ಮ ಗಾಂಧೀಜಿ 1948ರ ಜನವರಿ 30 ರಂದು ಗೋಡ್ಸೆ ಗುಂಡಿಗೆ ಬಲಿಯಾಗಿ ಹುತಾತ್ಮರಾದ ದಿನ. ಈ ದೇಶಕ್ಕೆ ಅವರ ನಾಯಕತ್ವದಲ್ಲಿ ಸ್ವಾತಂತ್ರ್ಯ ಲಭಿಸಿತು. ಕಾಂಗ್ರೆಸ್‌ನ ಬಹಳಷ್ಟು ನಾಯಕರು ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ–ಬಲಿದಾನಗಳನ್ನು ಮಾಡಿದ್ದಾರೆ ಎಂದರು. ಮಹಾತ್ಮ ಗಾಂಧೀಜಿ ಕೊನೆಯುಸಿರಿನಲ್ಲೂ 'ಹೇ ರಾಮ್' ಎಂದು ಉಚ್ಚರಿಸಿದ್ದರು. ರಾಮನ ಬಗ್ಗೆ ಅಪಾರ ಭಕ್ತಿ, ನಂಬಿಕೆಯನ್ನು ಹೊಂದಿದ್ದರು. ಆದ್ದರಿಂದಲೇ 'ರಘುಪತಿ ರಾಘವ ರಾಜಾರಾಮ್' ಎಂಬುದು ಅವರ ನೆಚ್ಚಿನ ಭಜನೆಯಾಗಿತ್ತು. ಆದರ್ಶಮಯ ಆಡಳಿತವನ್ನು ನೀಡಿದ ಶ್ರೀರಾಮಚಂದ್ರನನ್ನು ಪೂಜಿಸುವ ಮಹಾತ್ಮ ಗಾಂಧೀಜಿ, ರಾಮನ ಆದರ್ಶ ಮೈಗೂಡಿಸಿಕೊಂಡು ಎಲ್ಲ ಧರ್ಮದವರನ್ನೂ ಸಮಾನವಾಗಿ ಕಾಣಬೇಕು ಎಂದಿದ್ದರು.

ನಗರಸಭಾ ಕಾರ್ಯಾಲಯ, ಹುಣಸೂರು ಮೈಸೂರು ಜಿಲ್ಲೆ
E-mail : itstaff_ulb_hunsur@yahoo.co.in
ಫೋನ್: 08222–252048
ಸಂ:ಹುನಕಾ/ಟೆ.ಇ/ಸಾ.ನಿ/ಟೆ.ಪ್ರ/09/2023–24 ದಿನಾಂಕ: 25.01.2024

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪದ್ಧತಿಯಲ್ಲಿ)

2023–24ನೇ ಸಾಲಿನ ನಗರಸಭಾ ನಿಧಿಯಡಿ ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿ ಸಬ್‌ಮರ್ಸಿಬಲ್ ಪಂಪ್ ಮೋಟಾರುಗಳು ಮತ್ತು ಕೈ ಪಂಪುಗಳ ವಾರ್ಷಿಕ ದುರಸ್ತಿ ಮತ್ತು ನಿರ್ವಹಣೆಗೆ ಸಂಬಂಧಿಸಿದ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಗುತ್ತಿಗೆದಾರ ರಿಂದ KW-2ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000 ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು https://kppp.karnataka.gov.in ನಿಂದ ಟೆಂಡರ್ ಷರತ್ತು, ಇಎಂಡಿ ವಿವರ ಹಾಗೂ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಕಾಮಗಾರಿ ಇಂಡೆಂಟ್ ನಂ. DMA/2023-24/OW/WORK_INDENT10554/CALL-2 ಅಂದಾಜು ಮೊತ್ತ ರೂ.33.74 ಲಕ್ಷಗಳು. ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಫಾರಂ ಡೌನ್ ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿ: 12.02.2024 ಅಪರಾಹ್ನ 05.00 ಗಂಟೆ. ಟೆಂಡರ್ ತೆರೆಯುವ ದಿ: 13.02.2024 ಅಪರಾಹ್ನ 05.30 ಗಂಟೆಗೆ. ಹೆಚ್ಚಿನ ಮಾಹಿತಿ, ಕಾಮಗಾರಿ ನಿಭಂದನೆ ಹಾಗೂ ಷರತ್ತುಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಮಾನ್ಯ ಆಡಳಿತಾಧಿಕಾರಿಗಳು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು

ಸಹಿ/– ಪೌರಾಯುಕ್ತರು ನಗರಸಭೆ, ಹುಣಸೂರು

DIPR/DDMYS/KSMCA/964/2023-24

ನಗರಸಭಾ ಕಾರ್ಯಾಲಯ, ಹುಣಸೂರು
CITY MUNICIPAL COUNCIL HUNSUR
ಮೈಸೂರು ಜಿಲ್ಲೆ - 571105
E-mail : itstaff_ulb_hunsur@yahoo.co.in ಫೋನ್: 08222-252048
ಸಂಖ್ಯೆ: ಹುನಕಾ/ಜೆ.ಇ(ಬಿ)/ಸಿಆರ್/32/2023-24 ದಿನಾಂಕ: 30-01-2024

-:ಸಾರ್ವಜನಿಕ ಪ್ರಕಟಣೆ:-

ಹುಣಸೂರು ನಗರಸಭೆಯ ವ್ಯಾಪ್ತಿಯ ಎಲ್ಲಾ ನಾಗರೀಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನಗರಸಭೆಯ ವ್ಯಾಪ್ತಿಯಲ್ಲಿ ಈಗಾಗಲೇ ಇರುವ ಅನಧಿಕೃತ ನಲ್ಲಿಗಳನ್ನು ಸಕ್ರಮಾತಿ ಶುಲ್ಕ ಪಾವತಿಸಿಕೊಂಡು ನಿಯಮಾನುಸಾರ ಸಕ್ರಮಾತಿಗೊಳಸಲು ದಿನಾಂಕ:16.06.2023ರಂದು ನಡೆದ ಕೌನ್ಸಿಲ್ ಸಾಮಾನ್ಯ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ. ಪ್ರಯುಕ್ತ ಹುಣಸೂರು ನಗರಸಭೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಹೊಂದಿರುವ ಅನಧಿಕೃತ ನಲ್ಲಿ ಜೋಡಣೆಗಳನ್ನು ಸಕ್ರಮಗೊಳಿಸಿಕೊಳ್ಳಲು ಸಂಬಂಧಿಸಿದ ಸ್ವತ್ತುಗಳ ದಾಖಲೆಗಳೊಂದಿಗೆ ನಿಗಧಿತ ಸಕ್ರಮಾತಿ ಶುಲ್ಕ ಮತ್ತು ನಿಗಧಿತ ನೀರಿನ ಶುಲ್ಕಗಳನ್ನು ದಿನಾಂಕ:28.03.2024ರ ಒಳಗೆ ನಗರಸಭಾ ಕಚೇರಿಯಲ್ಲಿ ಪಾವತಿಸಿ ನಿಯಮಾನುಸಾರ ಸಕ್ರಮಗೊಳಿಸಿಕೊಳ್ಳಲು ಈ ಮೂಲಕ ಕೋರಲಾಗಿದೆ. ನಿಗಧಿತ ಅವಧಿಯೊಳಗೆ ಸಕ್ರಮಗೊಳಿಸಿಕೊಳ್ಳಲಾಗದ ನೀರಿನ ಜೋಡಣೆಗಳನ್ನು ಖಾಯಂ ಆಗಿ ಕಡಿತಗೊಳಿಸಿ ಸೂಕ್ತ ಕಾನೂನುಕ್ರಮ ಕೈಗೊಳ್ಳಲಾಗುವುದು. ದಯಮಾಡಿ ಎಲ್ಲಾ ನಾಗರೀಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಈ ಮೂಲಕ ಕೋರಲಾಗಿದೆ.

ಸಹಿ/– ಆಡಳಿತಾಧಿಕಾರಿಗಳು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು

ಸಹಿ/– ಪೌರಾಯುಕ್ತರು, ನಗರಸಭೆ, ಹುಣಸೂರು



20ನೇ ವರ್ಷದ ಸವಿನೆನಪು
ಕೃಷ್ಣೇಗೌಡ
(ಆಟೋ ಕೃಷ್ಣಪ್ಪ)ರವರು
ಪಡುವಾರಹಳ್ಳಿ
ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿ ಉಳಿದಿದೆ
ನಿಮ್ಮ ನೆನಪಿನಲ್ಲಿ:
ಪತ್ನಿ ಸುಜಾತ ಮತ್ತು ಮಗಳು ನಾಗಲಕ್ಷ್ಮಿ

ಮಡಿಕೇರಿಯಲ್ಲಿ ಹುತಾತ್ಮರ ದಿನಾಚರಣೆ

ಗಾಂಧೀಜಿಯ ಚಿತಾಭಸ್ಮ ಮೆರವಣಿಗೆ



ಮಡಿಕೇರಿಯಲ್ಲಿ ಹುತಾತ್ಮರ ದಿನಾಚರಣೆ ಪ್ರಯುಕ್ತ ಜಿಲ್ಲಾ ಖಜಾನೆಯಿಂದ ಗಾಂಧೀಜಿ ಚಿತಾಭಸ್ಮವನ್ನು ಮೆರವಣಿಗೆ ನಡೆಸಲಾಯಿತು. ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಎಸ್ಪಿ ಕೆ.ರಾಮರಾಜನ್, ಜಿಪಂ ಸಿಇಓ ವರ್ಣಿತ್ ನೇಗಿ ಮತ್ತಿತರರಿದ್ದರು.

ಮಡಿಕೇರಿ, ಜ.30– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ಸರ್ವೋದಯ ಸಮಿತಿ ವತಿಯಿಂದ ಹುತಾತ್ಮರ ದಿನವನ್ನು ಮಂಗಳ ವಾರ ನಗರದಲ್ಲಿ ಆಚರಿಸಲಾಯಿತು.

ಜಿಲ್ಲಾಡಳಿತ ಭವನದ ಜಿಲ್ಲಾ ಖಜಾನೆಯಿಂದ ಮಹಾತ್ಮ ಗಾಂಧೀಜಿಯವರ ಚಿತಾಭಸ್ಮವನ್ನು ಹೊರ ತೆಗೆದು ಪುಷ್ಪ ಮಾಲೆಗಳಿಂದ ಶೃಂಗರಿಸಿ ಗೌರವ ಸಲ್ಲಿಸಲಾಯಿತು. ನಂತರ ಜಿಲ್ಲಾಡಳಿತ ಹಾಗೂ ಸರ್ವೋದಯ ಸಮಿತಿ ಸದಸ್ಯರ ನೇತೃತ್ವದಲ್ಲಿ ಪೊಲೀಸ್ ವಾದ್ಯದೊಂದಿಗೆ ನಗರದ ಮಂಗೇರಿರ ಮುತ್ತಣ್ಣ ಹಾಗೂ ಜನರಲ್ ತಿಮ್ಮಯ್ಯ ವೃತ್ತದ ಮುಖ್ಯರಸ್ತೆ ಮೂಲಕ ಚಿತಾಭಸ್ಮವನ್ನು ಕೊಂಡೊಯ್ದು ಗಾಂಧಿ ಮಂಟಪ (ಗಾಂಧಿ ಮೈದಾನ) ಬಳಿ ಇರಿಸಿ ಗಾಂಧೀಜಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಲಾಯಿತು.

ಇದೇ ವೇಳೆ ಪೊಲೀಸ್ ಮೀಸಲು ಪಡೆಯ ಸಬ್‌ಇನ್ಸ್‌ಪೆಕ್ಟರ್ ಹನುಮಂತ ಕೌಜಲಗಿ ಮತ್ತು ತಂಡದವರು ಆಗಸದೆಡೆಗೆ ಮೂರು ಸುತ್ತು ಗುಂಡು ಹಾರಿಸುವ ಮೂಲಕ ರಾಷ್ಟ್ರಪಿತರಿಗೆ ಪೊಲೀಸ್ ಗೌರವ ಸಲ್ಲಿಸಿದರು. ನಂತರ ಮೌನಾಚರಣೆ ನಡೆಯಿತು. ಪೊಲೀಸ್ ವಾದ್ಯದ ಸಿದ್ದೇಶ್ ನೇತೃತ್ವದ ತಂಡದವರು ರಾಷ್ಟ್ರಗೀತೆ ಹಾಡಿ ಗಮನ ಸೆಳೆದರು.

ಬಳಿಕ ಸರ್ವಧರ್ಮ ಪ್ರಾರ್ಥನೆ ನಡೆಯಿತು. ಗಾಂಧೀಜಿಯವರ ಮೆಚ್ಚಿನ ಭಜನಾ ಗಾಯನವನ್ನು ಲಿಯಾಕತ್ ಅಲಿ ಹಾಗೂ ಸಂತ ಮೈಕಲರ ಶಾಲೆಯ ಗೈಡ್ಸ್ ತಂಡದ ವಿದ್ಯಾರ್ಥಿಗಳು ನಡೆಸಿಕೊಟ್ಟರು. ಸರ್ವಧರ್ಮ ಗುರುಗಳಿಂದ ಭಗವದ್ಗೀತೆ(ಸಂತೋಷ್ ಭಟ್), ಬೈಬಲ್(ಫಾದರ್ ಜೈಸನ್ ಗೌಡರ್), ಕುರಾನ್(ಮೌಲಾನ ಇಸಾಕ್) ಸಂದೇಶಗಳನ್ನು ಬೋಧಿಸಿದರು. ನಂತರ ಮೆರವಣಿಗೆಯಲ್ಲಿ ಚಿತಾಭಸ್ಮವನ್ನು ಮತ್ತೆ ಜಿಲ್ಲಾ ಖಜಾನೆಯಲ್ಲಿಟ್ಟು ಭದ್ರಗೊಳಿಸಲಾಯಿತು.

ಸರ್ವೋದಯ ಸಮಿತಿಯ ನಿಕಟಪೂರ್ವ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಚಿತಾಭಸ್ಮ ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಇರುವುದು ಇಡೀ ರಾಷ್ಟ್ರದಲ್ಲೇ ವಿಶೇಷವಾಗಿದೆ. ಗಾಂಧೀಜಿಯವರ ಚಿತಾಭಸ್ಮವನ್ನು, ಕೊಳ್ಳಿಮಾಡ ಕರುಂಬಯ್ಯ ಅವರು ಕೊಡಗು ಜಿಲ್ಲೆಗೆ ತಂದಿದ್ದರು. ಅಂದಿನಿಂದ ನಗರದಲ್ಲಿ ಹುತಾತ್ಮರ ದಿನವನ್ನು ಜಿಲ್ಲಾಡಳಿತದ ಸಹಕಾರದಲ್ಲಿ ಸರ್ವೋದಯ ಸಮಿತಿ ವತಿಯಿಂದ ಆಚರಿಸಲಾಗುತ್ತಿದೆ ಎಂದರು.

ಗಾಂಧಿ ಮಂಟಪದಲ್ಲಿ ಚಿತಾಭಸ್ಮವನ್ನು ಇಟ್ಟು ರಾಜ್‌ಘಾಟ್ ಮಾದರಿಯಲ್ಲಿ ಗಾಂಧಿ ಸ್ಮಾರಕ ನಿರ್ಮಿಸುವಲ್ಲಿ ಹಲವು ವರ್ಷಗಳಿಂದ ಪ್ರಯತ್ನ ಮಾಡಲಾಗಿತ್ತು. ಆ ನಿಟ್ಟಿನಲ್ಲಿ ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಅವರು 50 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅವರು ವಿಧಾನಪರಿಷತ್ ಸದಸ್ಯರ ಅನುದಾನದಡಿ 5 ಲಕ್ಷ ರೂ. ನೀಡುವುದಾಗಿ ಪ್ರಕಟಿಸಿದ್ದಾರೆ. ಹಾಗೆಯೇ ಶಾಸಕರಾದ ಡಾ.ಮಂತರ್‌ಗೌಡ ಹಾಗೂ ಎ.ಎಸ್.ಪೊನ್ನಣ್ಣ ಸಹ ಅನುದಾನ ನೀಡಲಿದ್ದಾರೆ. ಜೊತೆಗೆ ಸರ್ಕಾರದಿಂದಲೂ ಅನುದಾನ ಬಿಡುಗಡೆ ಮಾಡಿಸಲಿದ್ದಾರೆ ಎಂದರು.

ನಗರಸಭೆ ಅಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ, ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಪಂ ಸಿಇಓ ವರ್ಣಿತ್ ನೇಗಿ, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್. ವೀಣಾ, ಎಎಸ್ಪಿ ಕೆ.ಎಸ್.ಸುಂದರ್‌ರಾಜ್, ಸರ್ವೋದಯ ಸಮಿತಿ ಅಧ್ಯಕ್ಷ ಅಂಬೆಕಲ್ಲು ಕುಶಾಲಪ್ಪ, ಪ್ರಧಾನ ಕಾರ್ಯದರ್ಶಿ ಮುನಿರ್ ಅಹ್ಮದ್, ಸದಸ್ಯರಾದ ತೋರೇರ ಮುದ್ದಯ್ಯ, ಕೆ.ಟಿ.ಬೇಬಿ ಮ್ಯಾಥ್ಯು, ಅಂಬೆಕಲ್ಲು ನವೀನ್, ಎಸ್.ಪಿ.ವಾಸುದೇವ, ಎಂ.ಎನ್.ಸುಬ್ರಮಣಿ, ಜಿ.ಸಿ.ರಮೇಶ್, ಚಂದ್ರಶೇಖರ್, ರೇವತಿ ರಮೇಶ್, ಪ್ರಕಾಶ್ ಆಚಾರ್ಯ, ತೆನ್ನೀರ ಮೈನಾ, ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಹಕಾರ್ಯದರ್ಶಿ ಬೊಳ್ಳಜಿರ ಅಯ್ಯಪ್ಪ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎನ್.ಮಂಜುನಾಥ್, ಜಿಲ್ಲಾ ಖಜಾನಾಧಿಕಾರಿ ರಘುನಾಥ್, ಸಹಾಯಕ ಖಜಾನಾಧಿಕಾರಿ ಶ್ಯಾಮ್ ಸುಂದರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ, ಮಣಜೂರು ಮಂಜುನಾಥ್, ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಂಘಟಕರಾದ ದಮಯಂತಿ, ಸಹಾಯಕ ಗೈಡ್ ಆಯುಕ್ತೆ ಸುಲೋಚನಾ, ಸಂತ ಮೈಕಲರ ಶಾಲೆಯ ಶಿಕ್ಷಕಿಯರಾದ ಸಗಾಯ ಮೇರಿ, ರೀನಾ, ಸುನಿತಾ ಮತ್ತಿತರರು ಇದ್ದರು.

ಸ್ಕೂಟರ್‌ಗೆ ಬಸ್ ಡಿಕ್ಕಿ: ಮಹಿಳೆ ಸಾವು



ಗುಡ್ಡೆಹೊಸೂರು, (ಕುಶಾಲನಗರ) ಜ.30–ಸ್ಕೂಟರ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಮಹಿಳೆ ಮೃತಪಟ್ಟಿದ್ದು, ಬಾಲಕಿ ತೀವ್ರವಾಗಿ ಗಾಯಗೊಂಡಿರುವ ಘಟನೆ ಇಲ್ಲಿನ ಹಾರಂಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ನಡೆದಿದೆ.

ಸಿದ್ದಾಪುರ ಮೂಲದ ಅರೆಕಾಡು ಗ್ರಾಮದ ಲಲಿತಾ (53) ಮೃತಪಟ್ಟಿದ್ದು, ಇಲ್ಲಿನ ಹಾರಂಗಿ ರಸ್ತೆಯ ಬೊಳ್ಳುರು ಗ್ರಾಮದ ಮಾಜಿ ಸೈನಿಕ ದಿವಂಗತ ಸುದರ್ಶನ್ ಅವರ ಪುತ್ರಿ ಸಿಂಚನಾ ತೀವ್ರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾಳೆ.

10ನೇ ತರಗತಿ ವಿದ್ಯಾರ್ಥಿನಿ ಸಿಂಚನಾ ಬೆಳಗ್ಗೆ 7.30ರಲ್ಲಿ ಖಾಸಗಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ತಮ್ಮ ದೊಡ್ಡಮ್ಮ ಲಲಿತಾ ಅವರನ್ನು ಸ್ಕೂಟರ್‌ನಲ್ಲಿ ಕರೆದುಕೊಂಡು ಹೋಗುತ್ತಿದ್ದಳು. ಈ ವೇಳೆ ಮಡಿಕೇರಿಯಿಂದ ಮೈಸೂರು ಕಡೆ ಹೋಗುತ್ತಿದ್ದ ಬಸ್ ಸ್ಕೂಟರ್‌ಗೆ ಹಾರಂಗಿಯ ಹೆದ್ದಾರಿಯಲ್ಲಿ ಡಿಕ್ಕಿ ಹೊಡೆದಿದೆ. ಪರಿಣಾಮ ಗಂಭೀರವಾಗಿ ಗಾಯಗೊಂಡ ಲಲಿತಾ ಕುಶಾಲನಗರ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಇತ್ತೀಚಿಗೆ ತನ್ನ ಪತಿ ಮೃತಪಟ್ಟ ನಂತರ ತನ್ನ ತಂಗಿಯ ಮನೆ ಹಾರಂಗಿ ರಸ್ತೆಯ ಬೊಳ್ಳುರು ಗ್ರಾಮದಲ್ಲಿ ಲಲಿತಾ ನೆಲೆಸಿದ್ದರು. ಇವರ ಪುತ್ರಿ ಕಾಸರಗೋಡುಗೆ ವಿವಾಹವಾಗಿದ್ದಾರೆ. ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಈ ಸ್ಥಳದಲ್ಲಿ ನಿರಂತರವಾಗಿ ಅಪಘಾತಗಳು ನಡೆಯುತ್ತಿದ್ದು, ಈ ರಸ್ತೆಯಲ್ಲಿ ಹಂಪ್ಸ್ ನಿರ್ಮಾಣ ಅಥವಾ ಬ್ಯಾರಿಕೇಡ್ ಅಳವಡಿಸುವಂತೆ ಇಲ್ಲಿನ ನಿವಾಸಿಗಳು ಒತ್ತಾಯಿಸಿದ್ದಾರೆ.

ಸರ್ಕಾರಿ ಶಾಲೆಯ ಚಾವಣಿ ಕುಸಿತ



ಜೇನುಕಲ್ಲುಬೆಟ್ಟ ಸರ್ಕಾರಿ ಶಾಲೆಯ ಚಾವಣಿ ಕುಸಿದು ಬಿದ್ದಿರುವುದು.

ಕುಶಾಲನಗರ, ಜ.30–ಸಮೀಪದ ಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜೇನುಕಲ್ಲುಬೆಟ್ಟ ಸರ್ಕಾರಿ ಪ್ರಾಥಮಿಕ ಶಾಲೆಯ ಚಾವಣಿ ಗಾರೆ ಕುಸಿದು ಬಿದ್ದಿದ್ದು, ವಿದ್ಯಾರ್ಥಿಗಳು ಅಪಾಯದಿಂದ ಪಾರಾಗಿದ್ದಾರೆ.

ಮಂಗಳವಾರ ಮಧ್ಯಾಹ್ನ ಮಕ್ಕಳು ಊಟಕ್ಕೆ ಹೊರಗೆ ಬಂದಿದ್ದ ವೇಳೆ ಶಾಲೆಯ ಚಾವಣಿಯ ಗಾರೆ ಕುಸಿದಿದೆ. ವಿದ್ಯಾರ್ಥಿಗಳು ತರಗತಿ ಕೊಠಡಿಯಲ್ಲಿ ಇಲ್ಲದ ಸಂದರ್ಭದಲ್ಲಿ ಘಟನೆ ನಡೆದಿದ್ದು, ವಿದ್ಯಾರ್ಥಿಗಳು ಅಪಾಯದಿಂದ ಪಾರಾಗಿದ್ದಾರೆ.

2019–20ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ವತಿಯಿಂದ ಈ ಶಾಲೆಯ ತರಗತಿಯ ಕೊಠಡಿಯನ್ನು 10.60 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿತ್ತು. ಆದರೆ, ದಿಢೀರ್ ಕುಸಿದು ಬಿದ್ದಿದೆ. ಶಾಲೆಯ ಆರ್‌ಸಿಸಿ ಬಿರುಕು ಬಿಟ್ಟಿದ್ದು, ಮಳೆಗಾಲದಲ್ಲಿ ಸೋರಿಕೆ ಆಗುತ್ತದೆ. ಇದರಿಂದ ಮಕ್ಕಳಿಗೆ ತೊಂದರೆ ಆಗುತ್ತಿದೆ. ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಬಸ್ ನಿರ್ವಾಹಕ ಆತ್ಮಹತ್ಯೆ

ಮಡಿಕೇರಿ, ಜ.30– ಖಾಸಗಿ ಬಸ್ ನಿರ್ವಾಹಕ ವಿಷ ಸೇವಿಸಿ ಬಳಿಕ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದಲ್ಲಿ ಮಂಗಳವಾರ ನಡೆದಿದೆ. ವಿರಾಜಪೇಟೆ ತಾಲೂಕಿನ ಆರ್ಜಿ ಗ್ರಾಮ ನಿವಾಸಿ ಮೊಣ್ಣಪ್ಪ(28) ಆತ್ಮಹತ್ಯೆ ಮಾಡಿಕೊಂಡಿದ್ದು, ಈತ ಮಡಿಕೇರಿಯ ಖಾಸಗಿ ಬಸ್‌ವೊಂದರಲ್ಲಿ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದ. ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸಮೀಪವಿದ ಲಾಡ್ಜ್‌ನಲ್ಲಿ ರೂಂ ಅನ್ನು ಬಾಡಿಗೆಗೆ ಪಡೆದಿದ್ದ ಈತ ಬಾಗಿಲು ತೆರೆಯದಿದ್ದರಿಂದ ಲಾಡ್ಜ್‌ನ ಸಿಬ್ಬಂದಿ ಹೋಗಿ ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಪತ್ತೆಯಾಗಿದೆ. ಆದರೆ, ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಪೊಲೀಸರ ಪರಿಶೀಲನೆ ವೇಳೆ ರೂಂನ ಮೇಜಿನ ಮೇಲೆ ಖಾಲಿ ವಿಷದ ಬಾಟಲ್ ಕಂಡು ಬಂದಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಮಡಿಕೇರಿ ನಗರ ಠಾಣೆ ಪೊಲೀಸರು, ಮೃತದೇಹವನ್ನು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ.

ಕೆ.ಆರ್.ಪೇಟೆಯಲ್ಲಿ ಫೆ.10ರಂದು ಬೃಹತ್ ಜನತಾ ದರ್ಶನ

ಕೆ.ಆರ್.ಪೇಟೆ, ಜ.30– ಫೆ.10ರಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯ ಸ್ವಾಮಿ ಅವರ ನೇತೃತ್ವದಲ್ಲಿ ಕೆ.ಆರ್. ಪೇಟೆ ಪಟ್ಟಣದಲ್ಲಿ ಬೃಹತ್ ಜನತಾ ದರ್ಶನ ಹಾಗೂ ಗ್ಯಾರಂಟಿ ಯೋಜನೆ ಗಳ ಫಲಾನುಭವಿಗಳ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹರಳಹಳ್ಳಿ ವಿಶ್ವನಾಥ್ ತಿಳಿಸಿದರು.

ತಾಲೂಕಿನ ಭಾರತೀಪುರ, ಅಘಲಯ, ಲಕ್ಷ್ಮೀಪುರ, ಐಕನಹಳ್ಳಿ, ಮಾದಾಪುರ, ದಬ್ಬೇಘಟ್ಟ, ಆನೆಗೊಳ, ಕಿಕ್ಕೇರಿ ಮತ್ತಿತರ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಲೋಕಸಭಾ ಚುನಾವಣೆಯ ಪೂರ್ವ ತಯಾರಿ ಸಭೆಯಲ್ಲಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವದಲ್ಲಿ ನೀಡಿದ 5 ಪ್ರಮುಖ ಗ್ಯಾರಂಟಿ ಯೋಜನೆಗಳನ್ನು ಕೇವಲ 8 ತಿಂಗಳಲ್ಲಿ ಈಡೇರಿಸಿದೆ. ಈಗ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಹೆಚ್ಚಿನ ಸ್ಥಾನಗಳನ್ನು ಗೆಲ್ಲಬೇಕಾದರೆ ಗ್ಯಾರಂಟಿ ಯೋಜನೆಗಳ ಬಗ್ಗೆ ಜನ ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ ಎಂದರು.

ಕೆರಗೋಡು ಧ್ವಜ ತೆರವು ವಿವಾದ

ಹನುಮ ಧ್ವಜ ಹಾರಿಸಲು ಅನುಮತಿ ಕೊಟ್ಟಿಲ್ಲ: ಕಾಂಗ್ರೆಸ್

ಧ್ವಜ ಹಾರಿಸಲು ಗ್ರಾಪಂ ಅನುಮತಿ ಕೊಟ್ಟಿದೆ: ವಿಪಕ್ಷ



ಮಂಡ್ಯ, ಜ.30–ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವುಗೊಳಿಸಿದ ಪ್ರಕರಣ ಈಗ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ವಾದ–ವಿವಾದಕ್ಕೆ ವೇದಿಕೆಯಾಗಿದ್ದು, ಹನುಮ ಧ್ವಜ ಹಾರಿಸಲು ಯಾವುದೇ ಅನುಮತಿ ನೀಡಿಲ್ಲ ಎಂದು ಕಾಂಗ್ರೆಸ್ ವಾದಿಸಿದರೆ, ವಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಗ್ರಾಮ ಪಂಚಾಯ್ತಿ ಸಭೆಯಲ್ಲಿ ಅನುಮತಿ ನೀಡಲಾಗಿದೆ ಎಂದು ಪ್ರತಿಪಾದಿಸುತ್ತಿದೆ.

ಕೆರಗೋಡು ಗ್ರಾಮದ ರಂಗಮಂದಿರ ಆವರಣದಲ್ಲಿ ಗ್ರಾಮಸ್ಥರು 108 ಅಡಿ ಎತ್ತರದ ಧ್ವಜಸ್ತಂಭ ನಿರ್ಮಿಸಿದ್ದು, ಅಯೋಧ್ಯೆ ಶ್ರೀರಾಮ ಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಹನುಮ ಧ್ವಜವನ್ನು ಹಾರಿಸಲಾಗಿತ್ತು. ಇದನ್ನು ರಾತ್ರೋರಾತ್ರಿ ಜಿಲ್ಲಾಡಳಿತ ಮತ್ತು ಪೊಲೀಸರು ಬಿಜೆಪಿ, ಜೆಡಿಎಸ್ ಮತ್ತು ಹಿಂದೂಪರ ಸಂಘಟನೆಗಳ ಕಾರ್ಯಕರ್ತರ ವಿರೋಧದ ನಡುವೆ ತೆರವುಗೊಳಿಸಿದ್ದರು. ಈ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರ ಮೇಲೆ ಲಾಠಿ ಪ್ರಹಾರ ನಡೆಸಲಾಗಿತ್ತು. ಇದರಿಂದ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಈ ಘಟನೆಯನ್ನು ಖಂಡಿಸಿ ಸೋಮವಾರ ಹಿಂದೂಪರ ಸಂಘಟನೆಗಳು ಕೆರಗೋಡುವಿನಿಂದ ಮಂಡ್ಯದ ಜಿಲ್ಲಾಧಿಕಾರಿಗಳ ಕಚೇರಿವರೆಗೂ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದ್ದರು. ಈ ವೇಳೆ ಪ್ರತಿಭಟನೆ ಉಗ್ರ ಸ್ವರೂಪ ಪಡೆದಿತ್ತು.

ಇದೀಗ ಹನುಮ ಧ್ವಜ ಹಾರಿಸಿದ ಮತ್ತು ತೆರವುಗೊಳಿಸಿದ ಬಗ್ಗೆ ಆಡಳಿತ ಮತ್ತು ವಿಪಕ್ಷಗಳ ನಡುವೆ ವಾಕ್ಸಮರ ನಡೆಯುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ರಾಷ್ಟ್ರಧ್ವಜ ಮತ್ತು ಕನ್ನಡ ಧ್ವಜ ಬಿಟ್ಟು ಬೇರೆ ಧ್ವಜ ಹಾರಿಸಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟು ಬೇರೆ ಧ್ವಜ ಹಾರಿಸಿದ್ದಾರೆ. ಇದು ಸರಿನಾ ಎಂದು ಪ್ರಶ್ನಿಸಿದರು.

ಗೃಹ ಸಚಿವ ಡಾ. ಜಿ.ಪರಮೇಶ್ವರ್ ಮುಚ್ಚಳಿಕೆಯ ಪತ್ರವನ್ನು ಮಾಧ್ಯಮದ ಮುಂದೆ ಹಾಜರುಪಡಿಸಿ, ಇದು ಜ್ಯುಡಿಷಿಯಲ್ ಪತ್ರ. ಇದರ ಮೇಲೆ ನಂಬರ್, ಹೆಸರುಗಳಿವೆ. ಇದರಲ್ಲಿ ರಾಷ್ಟ್ರ ಧ್ವಜ ಮತ್ತು ಕನ್ನಡ ಧ್ವಜ ಬಿಟ್ಟು ಬೇರೆ ಧ್ವಜ ಹಾರಿಸಲ್ಲವೆಂದು ಬರೆದು ಕೊಟ್ಟಿದ್ದಾರೆ. ಈಗ ಇದನ್ನು ನಕಲಿ ಎಂದು ಹೇಳಲು ಪ್ರತಿಪಕ್ಷ ಮುಂದಾಗಿದೆ ಎಂದು ಖಾರವಾಗಿಯೇ ಪ್ರತಿಕ್ರಿಯಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಕಾಂಗ್ರೆಸ್ ನವರು ಬಿಡುಗಡೆ ಮಾಡಿರುವ ಪತ್ರಗಳೆಲ್ಲ ನಕಲಿ, ನಮ್ಮ ಹತ್ತಿರ ಗ್ರಾಮ ಪಂಚಾಯ್ತಿ ಸಭೆಯಲ್ಲಿ ಚರ್ಚಿಸಿ ಧ್ವಜ ಹಾರಿಸಲು ಅನುಮತಿ ನೀಡಿರುವ ಪತ್ರ ಇದೆ ಎಂದರು. ಅಂದು 20 ಮಂದಿ ಗ್ರಾಪಂ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು. ಅದರಲ್ಲಿ 18 ಮಂದಿ ಧ್ವಜ ಹಾರಿಸಲು ಒಪ್ಪಿ ಸಹಿ ಹಾಕಿದ್ದಾರೆ ಎಂದು ಅವರು ವಿವರಿಸಿದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಮಾತನಾಡಿ, ಅಂದು ಧ್ವಜ ಸ್ತಂಭ ನಿರ್ಮಿಸಲು ಗ್ರಾಪಂ ಅನುಮತಿ ಕೋರಿದ್ದರು. ಗ್ರಾಮ ಪಂಚಾಯಿತಿ ಅಂದು ಧ್ವಜ ಸ್ತಂಭ ನಿರ್ಮಿಸಲು ಅನುಮತಿ ನೀಡಿತ್ತು. ಹನುಮ ಧ್ವಜ ಹಾರಿಸಲು ಸಹ ಸಮ್ಮತಿಸಲಾಗಿದೆ. ಧ್ವಜ ಸ್ತಂಭ ನಿರ್ಮಿಸಲು ಸಲ್ಲಿಸಿದ ಅರ್ಜಿ ಮತ್ತು ಮುಚ್ಚಳಿಕೆ ಪತ್ರದಲ್ಲಿ ಇರುವ ಸಹಿಗಳು ಮತ್ತು ಹೆಸರುಗಳು ಬೇರೆ ಬೇರೆ ಇದೆ. ಇದು ಕಾಂಗ್ರೆಸ್‌ನವರು ಸೃಷ್ಟಿಸಿರುವ ನಕಲಿ ಮುಚ್ಚಳಿಕೆ ಪತ್ರ ಎಂದರಲ್ಲದೆ, ಧ್ವಜ ಹಾರಿಸಲು ಅನುಮತಿ ಇದ್ದರೂ ತೆರವುಗೊಳಿಸಲಾಗಿದೆ ಎಂದರು.

ಕಾಂಗ್ರೆಸ್ ಮತ್ತು ವಿಪಕ್ಷಗಳ ನಡುವೆ ಹನುಮ ಧ್ವಜ ಹಾರಿಸುವ ವಿಚಾರಕ್ಕೆ ಸಂಬಂಧಿಸಿದಂತೆ ದಿನಕ್ಕೊಂದು ಹೇಳಿಕೆ ಗಳು ಹೊರಬೀಳುತ್ತಿದ್ದು, ಇದು ಮುಂದೆ ಯಾವ ಹಂತಕ್ಕೆ ತಲುಪಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಕೆರಗೋಡಿನಲ್ಲಿ ಚಲುವರಾಯಸ್ವಾಮಿಗೆ ಘೇರಾವ್ ಯತ್ನ

ಮಂಡ್ಯ, ಜ.30– ಕಾರ್ಯಕ್ರಮ ನಿಮಿತ್ತ ವಿವಾದಿತ ಕೆರಗೋಡು ಗ್ರಾಮದ ಮಾರ್ಗ ತೆರಳುತ್ತಿದ್ದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಗೆ ಜೆಡಿಎಸ್ ಕಾರ್ಯಕರ್ತರು ಮತ್ತು ಗ್ರಾಮಸ್ಥರು ಘೇರಾವ್ ಹಾಕಲೆತ್ನಿಸಿದ ಘಟನೆ ಮಂಗಳವಾರ ನಡೆಯಿತು.

ಮಂಡ್ಯದಿಂದ ಕೆರಗೋಡು ಮಾರ್ಗವಾಗಿ ಮಂಗಳವಾರ ಮಧ್ಯಾಹ್ನ ತೆರಳುವಾಗ ಚಲುವರಾಯ ಸ್ವಾಮಿ ಕಾರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಕಾರ್ಯ ಕರ್ತರು ಮತ್ತು ಗ್ರಾಮಸ್ಥರನ್ನು ಪೊಲೀಸರು ತಡೆದು ಸಚಿವರ ಕಾರು ತೆರಳಲು ಅನುವು ಮಾಡಿಕೊಟ್ಟರು. ಕಾರ್ಯಕರ್ತರು ಚಲುವರಾಯಸ್ವಾಮಿ ಕಾರು ಹೋಗುವಾಗ ಸಚಿವರ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು.

ಇನ್ನು ಗ್ರಾಮದಲ್ಲಿ ಅಳವಡಿಸಿರುವ ಜೆಡಿಎಸ್ ನಾಯಕರ ಫ್ಲೆಕ್ಸ್‌ಗಳನ್ನು ತೆರವು ಮಾಡಲು ಬಂದ ಕೆರಗೋಡು ಗ್ರಾ.ಪಂ. ಕಾರ್ಯದರ್ಶಿ ರತ್ನಮ್ಮಗೆ ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು. ಫ್ಲೆಕ್ಸ್ ತೆರವು ಮಾಡಲು ಅನುಮತಿ ಇದೆಯೇ ಎಂದು ಪ್ರಶ್ನಿಸಿದಾಗ ಪೊಲೀಸರು ಅನುಮತಿ ನೀಡಿದ್ದಾರೆ ಎಂದು ರತ್ನಮ್ಮ ಹೇಳುತ್ತಾರೆ.

ಆಗ ಫ್ಲೆಕ್ಸ್ ತೆರವು ಮಾಡಲು ಗ್ರಾ.ಪಂ. ಇಲ್ಲವೇ ಜಿ.ಪಂ.ನಿಂದ ಅನುಮತಿ ಪಡೆಯಬೇಕು. ಪೊಲೀಸರಿಗೂ ಫ್ಲೆಕ್ಸ್‌ಗೂ ಸಂಬಂಧವಿಲ್ಲ ಎಂದು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆಯಿತು.

ಡಿಸಿ, ಎಸ್‌ಪಿ ಕೆರಗೋಡಿಗೆ ಭೇಟಿ, ಪರಿಶೀಲನೆ

ಮಂಡ್ಯ ಜಿಲ್ಲಾಧಿಕಾರಿ ಕುಮಾರ್ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಅವರು ಮಂಗಳವಾರ ಮಧ್ಯಾಹ್ನ ವಿವಾದಿತ ಕೆರಗೋಡು ಗ್ರಾಮದಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಹನುಮ ಧ್ವಜ ತೆರವುಗೊಳಿಸಿದ ಪ್ರಕರಣ ಸಂಬಂಧ ಭಾನುವಾರ ಮತ್ತು ಸೋಮವಾರ ಕೆರಗೋಡುವಿನಲ್ಲಿ ಸಂಭವಿಸಿದ ಘಟನೆಗಳು ಹಾಗೂ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರಿಗೆ ಘೇರಾವ್ ಹಾಕಿದ ಹಿನ್ನೆಲೆಯಲ್ಲಿ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಿದರು.

ಹಲವರ ವಿರುದ್ಧ ಎಫ್‌ಐಆರ್ ದಾಖಲು

ಮಂಡ್ಯ, ಜ.30– ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವುಗೊಳಿಸುವ ವೇಳೆ ಮತ್ತು ಮರುದಿನ ಬಿಜೆಪಿ, ಭಜರಂಗ ದಳ ಮತ್ತು ಸಂಘ–ಪರಿವಾರ ನಡೆಸಿದ ಪ್ರತಿಭಟನೆ ಸಂಬಂಧ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಸುಮಾರು 58ಕ್ಕೂ ಹೆಚ್ಚು ಜನರ ಮೇಲೆ ಪ್ರಕರಣ ದಾಖಲಾಗಿದೆ.

ಕೆರಗೋಡು ಪೊಲೀಸ್ ಠಾಣೆಯಲ್ಲಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ ಸಂಬಂಧ ಪ್ರತಾಪ್, ಅವಿನಾಶ್, ಪ್ರಕಾಶ್ ಮತ್ತು ಇತರರ ಮೇಲೆ ಎಫ್‌ಐಆರ್ ದಾಖಲಾಗಿದೆ.

ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಎರಡು, ಕೆರಗೋಡು ಪೊಲೀಸ್ ಠಾಣೆಯಲ್ಲಿ ಒಂದು ಎಫ್‌ಐಆರ್ ದಾಖಲಿಸಲಾಗಿದೆ. ಪಶ್ಚಿಮ ಪೊಲೀಸ್ ಠಾಣೆಯಲ್ಲಿ 58 ಮಂದಿ, ಅದೇ ಠಾಣೆಯಲ್ಲಿ ಕುರುಬರ ಸಂಘ ನೀಡಿರುವ ದೂರಿಗೆ ಎಫ್‌ಐಆರ್ ಹಾಕಲಾಗಿದೆ. ಡಿವೈಎಸ್ಪಿ ಶಿವಮೂರ್ತಿ ನೀಡಿದ ದೂರಿನ ಮೇಲೆ ಮಂಡ್ಯ ಪಶ್ಚಿಮ ಠಾಣೆಯಲ್ಲಿ ಎರಡು ಪ್ರಕರಣ ದಾಖಲಾಗಿದ್ದು, ಬ್ಯಾನರ್ ಹರಿದಿರುವುದು, ಕಲ್ಲು ತೂರಾಟ, ಪೊಲೀಸರ ಕೆಲಸಕ್ಕೆ ಅಡ್ಡಿ ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

ಮತ್ತೊಂದು ಕೇಸಿನಲ್ಲಿ ಜಿಲ್ಲಾ ಕುರುಬರ ಸಂಘದ ಮೇಲೆ ದಾಳಿ ಹಿನ್ನೆಲೆಯಲ್ಲಿ ಸಂಘದ ಕಾರ್ಯದರ್ಶಿ ಶಶಿಧರ್ ನೀಡಿರುವ ದೂರಿನ ಮೇಲೆ ಎಫ್‌ಐಆರ್ ದಾಖಲಾಗಿದೆ.

ಜನರ ನೆಮ್ಮದಿ ಹಾಳು ಮಾಡಬೇಡಿ

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ವಾಗ್ದಾಳಿ

ಮಂಡ್ಯ, ಜ.30– ಹನುಮ ಧ್ವಜ ವಿವಾದದ ಹೆಸರಿನಲ್ಲಿ ಮಂಡ್ಯ ಜಿಲ್ಲೆಯ ಜನರ ನೆಮ್ಮದಿ ಹಾಳು ಮಾಡಲು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಮುಂದಾಗಿರುವುದು ನೋವು



ತಂದಿದೆ. ನೀವು ಸಿಎಂ ಆಗುವುದಕ್ಕೆ ಮಂಡ್ಯ ಜನರ ಆಶೀರ್ವಾದವೇ ಕಾರಣ ಎಂಬುದನ್ನು ಮರೆಯಬೇಡಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಜನರ ಜೀವನ ಹಾಳು ಮಾಡಬೇಡಿ. ಜವಾಬ್ದಾರಿಯುತ ಪ್ರತಿಪಕ್ಷದ ನಾಯಕರಾಗಿ ನೀವು ನಮ್ಮನ್ನು ಸರಿಯಾದ ದಾರಿಯಲ್ಲಿ ಸಾಗುವಂತೆ ನೋಡಿಕೊಳ್ಳಬೇಕೇ ವಿನಃ ಶಾಂತಿ ಕದಡುವ ಕೆಲಸ ಮಾಡಬಾರದು. ಚುನಾವಣೆ ಗಮನದಲ್ಲಿಟ್ಟುಕೊಂಡು ಕುಮಾರಸ್ವಾಮಿ ಈ ರೀತಿ ಮಾಡುತ್ತಿದ್ದಾರೆ. ಇವರು ಸಿಂಗಾಪುರದಲ್ಲಿ ಕುಳಿತುಕೊಂಡು ಹೇಗೆಲ್ಲಾ ಮಾತನಾಡಿದ್ದರು ಎಂಬುದನ್ನು ಗಮನಿಸಿ. ಕುಮಾರಸ್ವಾಮಿಯವರು ಬಿಜೆಪಿಯನ್ನು ಟೀಕಿಸಿದಷ್ಟು ಬೇರೆ ಯಾರೂ ಟೀಕಿಸಿಲ್ಲ. ನರೇಂದ್ರ ಮೋದಿ ಪ್ರಧಾನಿಯಾದರೆ ದೇವೇಗೌಡರೇ ದೇಶ ಬಿಟ್ಟು ಹೋಗುತ್ತೇನೆ ಎಂದಿದ್ದರು. ಜೆಡಿಎಸ್‌ನವರು ಬಿಜೆಪಿಯನ್ನು ಟೀಕೆ ಮಾಡಿದಷ್ಟು ಕಾಂಗ್ರೆಸ್ ಕೂಡ ಮಾಡಿಲ್ಲ. ಇದೀಗ ಅವರಿಬ್ಬರೂ ಅಸ್ತಿತ್ವ ಉಳಿಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ಕಿಡಿಕಾರಿದರು. ಜಿಲ್ಲೆಯ ಜನರೇ ನಿಮಗೆ ಅಧಿಕಾರ ನೀಡಿದ್ದು. ಕಳೆದ ಬಾರಿಯ ಚುನಾವಣೆಯಲ್ಲಿ ನಮ್ಮನ್ನು ಆಶೀರ್ವದಿಸಿದ್ದಾರೆ. ಮುಂದೆ ನಾವು ಸರಿಯಾದ ದಾರಿಯಲ್ಲಿ ಸಾಗದಿದ್ದರೆ ನಮಗೂ ಜನ ಪಾಠ ಕಲಿಸಬಹುದು ಎಂದರು.

ಅಂಬೇಡ್ಕರ್‌ಗೆ ಅಪಮಾನ ಮಾಡಿದ ಕಾಂಗ್ರೆಸ್ ತಿರಸ್ಕರಿಸಿ



ಚಾಮರಾಜನಗರದ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ಭೀಮ ಸಮಾವೇಶದಲ್ಲಿ ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಸಿಮೆಂಟ್ ಮಂಜು ಮಾತನಾಡಿದರು. ಎನ್.ಮಹೇಶ್, ಸಿ.ಎಸ್.ನಿರಂಜನ್‌ಕುಮಾರ್, ಎಸ್.ಬಾಲರಾಜು ಮತ್ತಿತರರಿದ್ದರು.

ಚಾಮರಾಜನಗರ, ಜ.30–ಅಂಬೇಡ್ಕರ್ ಬದುಕಿರುವವರೆಗೂ ಶೋಷಣೆ ಮಾಡಿದ ಕಾಂಗ್ರೆಸ್ ಅವರ ಅಂತ್ಯ ಸಂಸ್ಕಾರಕ್ಕೂ ಜಾಗ ನೀಡದೇ ಅಪಮಾನ ಮಾಡಿದೆ. ಇಂತಹ ಪಕ್ಷವನ್ನು ತಿರಸ್ಕರಿಸುವ ಮೂಲಕ ಚುನಾವಣೆಗಳಲ್ಲಿ ತಕ್ಕಪಾಠ ಕಲಿಸಬೇಕು ಎಂದು ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಸಿಮೆಂಟ್ ಮಂಜು ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಜಿಲ್ಲಾ ಎಸ್ಸಿ ಮೋರ್ಚಾದಿಂದ ನಡೆದ ಬಲವರ್ಧನೆಗಾಗಿ ಭೀಮ ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ 10 ವರ್ಷದಲ್ಲಿ ದಲಿತ ಸಮುದಾಯ ಸ್ವಾಭಿಮಾನ ಬದುಕು ಕಟ್ಟಿಕೊಳ್ಳಲು ಅನೇಕ ಯೋಜನೆಗಳನ್ನು ಅನುಷ್ಠಾನ ಮಾಡಿದ್ದಾರೆ. ಜೊತೆಗೆ ಅಂಬೇಡ್ಕರ್ ಅವರ ಹುಟ್ಟಿದೂರು, ವ್ಯಾಸಂಗ ಮಾಡಿದ ಸ್ಥಳ, ಐಕ್ಯ ಮನೆ ಹಾಗೂ ಅವರ ಸಮಾಧಿಯನ್ನು ಅಭಿವೃದ್ಧಿ ಪಡಿಸುವ ಮೂಲಕ ತೀರ್ಥ ಸ್ಥಳವನ್ನಾಗಿ ಮಾಡಿ, ವಿಶ್ವ ನಾಯಕನಿಗೆ ಗೌರವ ಸಲ್ಲಿಸಿದ್ದಾರೆ. ಸಂವಿಧಾನವನ್ನು ಗೌರವಿಸುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬಂದಿದ್ದಾರೆ ಎಂದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ಮಾತನಾಡಿ, ಕಾಂಗ್ರೆಸ್ ಬಲಗೈ ಸಮುದಾಯ ಹಾಗೂ ಅಂಬೇಡ್ಕರ್ ಅವರಿಗೆ ಯಾವ ಯಾವ ಸಂದರ್ಭಗಳಲ್ಲಿ ಮೋಸ ಮಾಡಿದೆ ಎಂದು ಪವರ್ ಪಾಯಿಂಟ್ ಮೂಲಕ ವಿಡಿಯೋ ದಾಖಲೆಗಳ ಸಮೇತ ಪ್ರಚುರಪಡಿಸಿದರು. ಸಿದ್ದರಾಮಯ್ಯ ದಲಿತ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ಪರಮೇಶ್ವರ ಅವರನ್ನು ತುಳಿದು ಮುಖ್ಯಮಂತ್ರಿಯಾಗಿ ಈಗ ನಾನು ದಲಿತ ಎನ್ನುತ್ತಿದ್ದಾರೆ. ಚಿತ್ರದುರ್ಗದಲ್ಲಿ ನಡೆದ ಶೋಷಿತರ ಸಮಾವೇಶದಲ್ಲಿ ಶೋಷಿತ ಮಹಿಳೆಯಾಗಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಏಕವಚನದಲ್ಲಿ ಸಂಬೋಧಿಸುವ ಮೂಲಕ ತಮ್ಮ ಸಂಸ್ಕೃತಿಯನ್ನು ಬಿಂಬಿಸಿದ್ದಾರೆ ಎಂದು ತಿಳಿಸಿದರು.

ಮಾಜಿ ಶಾಸಕ ಎಸ್.ಬಾಲರಾಜು ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಕೇವಲ 10 ವರ್ಷಗಳಲ್ಲಿ ದೇಶ ಹಾಗೂ ದೀನ ದಲಿತರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. 60 ವರ್ಷಗಳಲ್ಲಿ ಕಾಂಗ್ರೆಸ್ ಏನು ಮಾಡಿತ್ತು, ಅದರ ಹತ್ತು ಪಟ್ಟು ಕೆಲಸವನ್ನು ಕೇವಲ 10 ವರ್ಷದಲ್ಲಿ ಮೋದಿ ಮಾಡಿದ್ದಾರೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ರಾಜ್ಯ ಕಾರ್ಯಕಾರಿಣಿ ಸದಸ್ಯೆ ಭಾರ್ಗವಿ ದ್ರಾವಿಡ್, ರಾಜ್ಯ ಕಾರ್ಯದರ್ಶಿ ಪರಮಾನಂದ, ಡಾ.ರಾಜು, ವೆಂಕಟರಮಣಸ್ವಾಮಿ, ಹನೂರು ವೆಂಕಟೇಶ್, ಶಿವರಾಮು, ಜಿಪಂ ಮಾಜಿ ಸದಸ್ಯ ಎ.ಆರ್.ಬಾಲರಾಜು, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮೂಡ್ನಾಕೂಡು ಪ್ರಕಾಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆರೆಹಳ್ಳಿ ಮಹದೇವಸ್ವಾಮಿ, ಅಯ್ಯನಪುರ ಶಿವಕುಮಾರ್, ನಲ್ಲೂರು ಪರಮೇಶ, ಬಂಗಾರು, ಕಾಳಿಚರಣ್, ಶುಭೋದಯ ಸಿದ್ದರಾಜು, ಛಲವಾದಿ ಮಹಾಸಭಾದ ಹಂಸರಾಜು, ಭಾನುಪ್ರಕಾಶ್ ಹಾಜರಿದ್ದರು.

ಕೆರೆಗಳ ಒತ್ತುವರಿ ಪರಿಶೀಲನೆ

ವಿವಿಧೆಡೆಗೆ ನ್ಯಾಯಾಧೀಶ ಎಂ.ಶ್ರೀಧರ, ಜಿಲ್ಲಾಧಿಕಾರಿ ಶಿಲ್ಪಾನಾಗ್ ಭೇಟಿ



ಚಾಮರಾಜನಗರ ತಾಲೂಕಿನ ವಿವಿಧ ಕೆರೆಗಳಿಗೆ ಮಂಗಳವಾರ ನ್ಯಾಯಾಧೀಶ ಎಂ.ಶ್ರೀಧರ ಹಾಗೂ ಜಿಲ್ಲಾಧಿಕಾರಿ ಶಿಲ್ಪಾನಾಗ್ ಭೇಟಿ ನೀಡಿ, ಪರಿಶೀಲಿಸಿದರು.

ಚಾಮರಾಜನಗರ, ಜ.30–ತಾಲೂಕಿನ ವಿವಿಧ ಕೆರೆಗಳಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ, ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ ಹಾಗೂ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಂಗಳವಾರ ಭೇಟಿ ನೀಡಿ, ಒತ್ತುವರಿ ಸಂಬಂಧ ಪರಿಶೀಲನೆ ನಡೆಸಿದರು.

ಅಧಿಕಾರಿಗಳೊಂದಿಗೆ ತಾಲೂಕಿನ ಕೋಡಿ ಮೋಳೆ ಕೆರೆ, ನಾಗವಳ್ಳಿ, ಜ್ಯೋತಿಗೌಡನಪುರ, ಕಾಗಲವಾಡಿ, ಹೊಂಗನೂರು, ಹೊಂಡರಬಾಳು ಸೇರಿದಂತೆ ಇನ್ನಿತರ ಕೆರೆಗಳಿಗೆ ಭೇಟಿ ನೀಡಿ, ವೀಕ್ಷಿಸಿದರು. ಕಾವೇರಿ ನೀರಾವರಿ ನಿಗಮ ಹಾಗೂ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಒಳಪಡುವ ಕೆರೆಗಳ ವಿಸ್ತೀರ್ಣ, ಒತ್ತುವರಿಯಾಗಿರುವ ಭಾಗಗಳು, ಕೆರೆಗಳ ಅಭಿವೃದ್ಧಿ ಕುರಿತು ಮಾಹಿತಿಯನ್ನು ಅಧಿಕಾರಿಗಳಿಂದ ಆಯಾ ಸ್ಥಳದಲ್ಲೇ ಪಡೆದು ಪರಿಶೀಲಿಸಿದರು. ಇದೇ ವೇಳೆ ಜಿಲ್ಲಾಧಿಕಾರಿ ಶಿಲ್ಪಾನಾಗ್, ಕೆರೆಗಳ ಹದ್ದುಬಸ್ತು ಗುರುತಿಸಿ, ಒತ್ತುವರಿ ತೆರವಿಗೆ ಅಗತ್ಯ ಕ್ರಮ ವಹಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಆಯಾ ಭಾಗದ ಗ್ರಾಮಸ್ಥರು ಜಿಲ್ಲಾಧಿಕಾರಿ ಹಾಗೂ ನ್ಯಾಯಾಧೀಶರಿಗೆ ಅಹವಾಲು ಸಲ್ಲಿಸಿ ಕೆರೆಗಳನ್ನು ಅಭಿವೃದ್ಧಿಗೊಳಿಸಬೇಕು. ಕೆಲವೆಡೆ ಕೆರೆಗಳಿಗೆ ತ್ಯಾಜ್ಯ ನೀರು ಸೇರುತ್ತಿರುವುದನ್ನು ತಡೆಯಬೇಕೆಂದು ಮನವಿ ಮಾಡಿದರು. ಕೆರೆಗಳಿಗೆ ಕಲುಷಿತ ನೀರು ಸೇರದಂತೆ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಕೆರೆ ಸುತ್ತಲಿನ ಪ್ರದೇಶದಲ್ಲಿ ಸ್ವಚ್ಛತೆ ಕಾಪಾಡಬೇಕು. ತ್ಯಾಜ್ಯಗಳನ್ನು ಕೆರೆಯ ಬಳಿ ಹಾಕುವುದನ್ನು ತಡೆಗಟ್ಟಬೇಕು. ಕೆರೆಗಳ ವ್ಯಾಪ್ತಿ ನೈರ್ಮಲ್ಯ ಕಾಪಾಡಬೇಕು ಎಂದು ಜಿಲ್ಲಾಧಿಕಾರಿ ಪಿಡಿಓಗಳಿಗೆ ನಿರ್ದೇಶನ ನೀಡಿದರು.

ಕಾಮಗಾರಿ ನಿರ್ವಹಿಸಿರುವ ಸ್ಥಳದಲ್ಲಿ ಅಳವಡಿಸಿರುವ ಮಾಹಿತಿ ಫಲಕಗಳನ್ನು ಸರಿಪಡಿಸುವಂತೆ ಸೂಚಿಸಿದರು. ಅನುದಾನ ಲಭ್ಯತೆಗೆ ಅನುಗುಣವಾಗಿ ಕೆರೆಗಳ ಹೂಳೆತ್ತುವುದು, ಅಭಿವೃದ್ಧಿ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ನರೇಗಾ ಅನುದಾನವನ್ನು ಗ್ರಾಮೀಣ ಭಾಗಗಳಲ್ಲಿ ಹೆಚ್ಚು ಸದ್ಬಳಕೆಯಾಗಬೇಕು. ಸ್ಥಳೀಯವಾಗಿ ಕೆಲಸ ನೀಡಬೇಕು. ಕೆರೆಗಳ ಸಂರಕ್ಷಣೆ ಆಗಬೇಕು ಎಂದು ಸೂಚಿಸಿದರು.

ತಹಶೀಲ್ದಾರ್ ಬಸವರಾಜು, ಭೂ ದಾಖಲೆಗಳ ಉಪನಿರ್ದೇಶಕಿ ವಿದ್ಯಾಯಿನಿ, ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಇಂಜಿನಿಯರ್ ಎಂ.ಬಿ. ಪಾಟೀಲ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಟಿ.ಜಯರಾವ್, ಸಣ್ಣ ನೀರಾವರಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ನಿರಂಜನ್ ಇನ್ನಿತರ ಇಲಾಖೆಯ ಅಧಿಕಾರಿಗಳು ಇದ್ದರು.

ಡಿಸಿಯಿಂದ ಗಣಿತ ಪಾಠ

ಕೆರೆ ಪರಿಶೀಲನೆಗೆ ಹೋಗುವ ವೇಳೆ ಚಾಮರಾಜನಗರ ತಾಲೂಕಿನ ಪುಟ್ಟನಪುರ ಸರ್ಕಾರಿ ಪ್ರಾಥಮಿಕ ಶಾಲೆಗೆ ಜಿಲ್ಲಾಧಿಕಾರಿ ಹಾಗೂ ನ್ಯಾಯಾಧೀಶರು ದಿಢೀರ್ ಭೇಟಿ ನೀಡಿ, ಶಾಲಾ ಮಕ್ಕಳ ಕಲಿಕೆ ಪ್ರಗತಿ ವೀಕ್ಷಿಸಿದರು. ಇದೇ ವೇಳೆ ಡಿಸಿ ಶಿಲ್ಪಾನಾಗ್ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಗಣಿತ ಪಾಠವನ್ನು ಪ್ರೀತಿಯಿಂದ ಹೇಳಿಕೊಟ್ಟರು.

ರೇಷ್ಮೆ ಮಾರುಕಟ್ಟೆಯ ದ್ವಿತಳಿ ಘಟಕ ಉದ್ಘಾಟನೆ



ಕೊಳ್ಳೇಗಾಲದ ಮುಡಿಗುಂಡ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ದ್ವಿತಳಿ ಘಟಕವನ್ನು ರೇಷ್ಮೆ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ಕೊಳ್ಳೇಗಾಲ, ಜ.30–ಪಟ್ಟಣದ ಮುಡಿಗುಂಡ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ದ್ವಿತಳಿ ಘಟಕವನ್ನು ರೇಷ್ಮೆ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ನಂತರ ಮಾತನಾಡಿದ ಸಚಿವರು, ಚಾಮರಾಜನಗರ ಜಿಲ್ಲೆ ರೇಷ್ಮೆ ಬೆಳೆಗೆ ಪ್ರಸಿದ್ಧಿಯಾಗಿದೆ. ಜಿಲ್ಲೆಯಲ್ಲಿ ರೇಷ್ಮೆ ಅಭಿವೃದ್ಧಿಗೆ ಪೂರಕವಾದ ವಾತಾವರಣ ಇದೆ. ಈ ನಿಟ್ಟಿನಲ್ಲಿ ಪ್ರೋತ್ಸಾಹ ನೀಡಲಾಗುವುದು. ರೇಷ್ಮೆ ಬೆಳೆ ಉತ್ತೇಜನೆಗಾಗಿ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲು ಕ್ರಮ ವಹಿಸಲಾಗುವುದು. ರೇಷ್ಮೆ ಬೆಳೆಗಾರರು, ಡೀಲರ್‌ಗಳಿಗೆ ಅನುಕೂಲವಾಗುವಂತಹ ಕಾರ್ಯಗಳಿಗೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ರೇಷ್ಮೆ ಇಲಾಖೆಯಿಂದ ರೈತರಿಗೆ ಬಹಳಷ್ಟು ಸಹಕಾರಿಯಾಗಿದೆ. ಮೈಸೂರು ಸಿಲ್ಕ್ ಪ್ರಪಂಚದಲ್ಲೇ ಹೆಸರು ಪಡೆದಿದೆ. ರೇಷ್ಮೆ ಬೆಳೆಗಾರರ ನೆರವಿಗೆ ಬರಬೇಕಿದೆ. ಕುದೇರಿನಲ್ಲಿರುವ ರೇಷ್ಮೆ ತರಬೇತಿ ಶಾಲೆಯನ್ನು ಪುನರಾರಂಭಿಸಬೇಕು ಎಂದರು.

ಇದೇ ವೇಳೆ ಜಿಲ್ಲಾಧಿಕಾರಿ ಶಿಲ್ಪಾನಾಗ್, ಉಪವಿಭಾಗಾಧಿಕಾರಿ ಮಹೇಶ್ ಇತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಐದನೇ ಪುಟದಿಂದ

ಮತ್ತೊಬ್ಬ ಯುವಕ ಬಲಿ

ಬೆಳಿಗ್ಗೆ 6.30ರ ಸುಮಾರಿನಲ್ಲಿ ತನ್ನ ಬೈಕ್‌ನಲ್ಲಿ ಈ ಮಾರ್ಗವಾಗಿ ತೆರಳುತ್ತಿದ್ದ ಶಿವಂ ಅವರಿಗೆ ರಾತ್ರೋರಾತ್ರಿ ನಿರ್ಮಾಣವಾಗಿದ್ದ ರೋಡ್ ಹಂಪ್ಸ್ ಬಗ್ಗೆ ಅರಿವಿರಲಿಲ್ಲ. ಅಲ್ಲದೇ ರೋಡ್ ಹಂಪ್ಸ್ ಇರುವ ಬಗ್ಗೆ ಯಾವುದೇ ರೀತಿಯ ಸೂಚನೆಗಳೂ ಇಲ್ಲದ ಕಾರಣ ವೇಗವನ್ನು ಕಡಿಮೆ ಮಾಡದೆ ತೆರಳಿದ ಈತ, ಹಠಾತ್ತನೆ ರೋಡ್ ಹಂಪ್ಸ್ ಮೇಲೆ ಬೈಕ್ ಹತ್ತಿದಾಗ ನಿಯಂತ್ರಣ ತಪ್ಪಿ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ ಈತ ನಗರ ಪಾಲಿಕೆಯ ನಿರ್ಲಕ್ಷ್ಯತನಕ್ಕೆ ಇಂದು ಬಲಿಯಾಗಿದ್ದಾರೆ.

ಭಾನುವಾರ ಮುಂಜಾನೆ ಇದೇ ರಸ್ತೆಯಲ್ಲಿ ಬೈಕ್‌ನಲ್ಲಿ ತೆರಳಿದ್ದ ಯುವಕ ರೋಡ್ ಹಂಪ್ಸ್‌ನಲ್ಲಿ ನಿಯಂತ್ರಣ ತಪ್ಪಿ ಬಿದ್ದು ಸಾವನ್ನಪ್ಪಿದರೆ, ಹೆಚ್.ಡಿ.ಕೋಟೆ ಕಡೆಯಿಂದ ತರಕಾರಿ ತುಂಬಿಕೊಂಡು ಬರುತ್ತಿದ್ದ ಆಪೆ ಆಟೋ ರೋಡ್ ಹಂಪ್ಸ್‌ನಲ್ಲಿ ಹಾರಿ ಎದುರಿಗೆ ಬಂದ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಅದರಲ್ಲಿದ್ದ ವ್ಯಕ್ತಿ ಸಾವನ್ನಪ್ಪಿದ್ದು, ಇದೀಗ ಶಿವಂ ಅವರ ಸಾವಿನಿಂದ ಈ ರೋಡ್ ಹಂಪ್ಸ್‌ಗೆ ಮೂವರು ಬಲಿ ಯಾದಂತಾಗಿದೆ. ಇಂದು ಮೃತಪಟ್ಟ ಶಿವಂ ಅವರ ಪಾರ್ಥಿವ ಶರೀರವನ್ನು ಕೊಡಗಿನ ವಿರಾಜಪೇಟೆಯ ಸ್ವಗ್ರಾಮ ಕಂಡಂಗಾಲಕ್ಕೆ ಕೊಂಡೊಯ್ದು ಅಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುತ್ತದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಯಾವುದೇ ರಸ್ತೆಯಲ್ಲಿ ರೋಡ್ ಹಂಪ್ಸ್ ನಿರ್ಮಿಸಬೇಕಿದ್ದಲ್ಲಿ ಮೈಸೂರಿಗೆ ಸಂಬಂಧಿಸಿದಂತೆ ನಗರ ಪಾಲಿಕೆ, ಈ ರಸ್ತೆ ಲೋಕೋಪಯೋಗಿ ಇಲಾಖೆಗೆ ಸೇರಿರುವುದರಿಂದ ಆ ಇಲಾಖೆಯ ಅಧಿಕಾರಿಗಳು ಹಾಗೂ ಮೈಸೂರು ನಗರ ಪೊಲೀಸ್ ಇಲಾಖೆಯ ಸಂಚಾರ ವಿಭಾಗದ ಅಧಿಕಾರಿಗಳು ಸಭೆ ನಡೆಸಿ, ಸ್ಥಳ ಪರಿಶೀಲನೆ ಮಾಡಿ ಈ ಸ್ಥಳದಲ್ಲಿ ರೋಡ್ ಹಂಪ್ಸ್‌ನ ಅವಶ್ಯಕತೆ ಇದೆಯೇ? ಎಂಬುದರ ಬಗ್ಗೆ ನಿರ್ಧರಿಸುತ್ತಾರೆ. ಒಂದು ವೇಳೆ ಅವಶ್ಯಕತೆ ಇದೆ ಎಂದಾದಲ್ಲಿ ಸಂಬಂಧಪಟ್ಟ ರಸ್ತೆಯಲ್ಲಿ ಯಾವ ಪ್ರಮಾಣದ ಹಾಗೂ ಯಾವ ರೀತಿಯ ರೋಡ್ ಹಂಪ್ಸ್ ನಿರ್ಮಿಸಬೇಕು ಎಂಬುದನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿ ನಗರ ಪಾಲಿಕೆಗೆ ರೋಡ್ ಹಂಪ್ಸ್ ನಿರ್ಮಿಸಲು ಅನುಮತಿ ನೀಡಲಾಗುತ್ತದೆ. ಆದರೆ ಈ ರೋಡ್ ಹಂಪ್ಸ್ ನಿರ್ಮಿಸಲು ಮೈಸೂರು ನಗರ ಪಾಲಿಕೆ ಈ ಯಾವುದೇ ಪ್ರಕ್ರಿಯೆ ಕೈಗೊಂಡಿಲ್ಲ ಎಂದು ಹೇಳಲಾಗಿದೆ.

ಎಲ್ಲಾ ಪ್ರಕ್ರಿಯೆಗಳು ಮುಗಿದು ರೋಡ್ ಹಂಪ್ಸ್ ನಿರ್ಮಿಸಲು ನಿರ್ಧಾರ ಕೈಗೊಂಡಿದ್ದರೆ, ಸದರಿ ರಸ್ತೆಯಲ್ಲಿ ವಾಹನ ಸಂಚಾರ ಕಡಿಮೆ ಇರುವ ವೇಳೆಯಲ್ಲಿ ಅರ್ಥಾತ್ ರಾತ್ರಿ ವೇಳೆ ರೋಡ್ ಹಂಪ್ಸ್ ನಿರ್ಮಾಣದ ಕಾಮಗಾರಿ ನಡೆಸಬೇಕಾಗುತ್ತದೆ. ಹಂಪ್ಸ್ ನಿರ್ಮಾಣದ ಒಂದು ದಿನದ ನಂತರ ಅದಕ್ಕೆ ರಿಫ್ಲೆಕ್ಟರ್ ಸಹಿತ ಬಿಳಿ ಪಟ್ಟೆ ಬಳಿಯಬೇಕಾಗುತ್ತದೆ. ಅಲ್ಲಿಯವರೆಗೂ ಈ ಹಂಪ್ಸ್‌ನ ಎಡಬಲ ಬದಿಯಲ್ಲೂ ರಿಫ್ಲೆಕ್ಟರ್ ಇರುವಂತಹ ಬ್ಯಾರಿಕೇಡ್‌ಗಳನ್ನು ಹಾಕಬೇಕಾಗುತ್ತದೆ. ಹೀಗೆ ಬ್ಯಾರಿಕೇಡ್ ಹಾಕಿದಾಗ ವಾಹನ ಸವಾರರಿಗೆ ದೂರದಿಂದಲೇ ಸೂಚನೆ ದೊರೆತು ವಾಹನದ ವೇಗವನ್ನು ತಗ್ಗಿಸುತ್ತಾರೆ. ನಂತರ ಬ್ಯಾರಿಕೇಡ್ ಬಳಿ S ಆಕಾರದಲ್ಲಿ ವಾಹನವನ್ನು ಬಳಸಿಕೊಂಡು ಮುಂದುವರೆಯುತ್ತಾರೆ. ಆಗ ಯಾವುದೇ ರೀತಿಯ ಅಪಘಾತ ವಾಗುವುದಿಲ್ಲ. ಆದರೆ ಈ ರೋಡ್ ಹಂಪ್ಸ್ ಅನ್ನು ಅವೈಜ್ಞಾನಿಕವಾಗಿ ನಿರ್ಮಿಸಿದ ನಗರ ಪಾಲಿಕೆ ಅಧಿಕಾರಿಗಳು ಹಂಪ್ಸ್ ಬಳಿ ಬ್ಯಾರಿಕೇಡ್ ಅನ್ನೂ ಕೂಡ ಹಾಕದೇ ಇದ್ದುದರಿಂದ ರಾತ್ರಿ ವೇಳೆ ಹಂಪ್ಸ್ ಇರುವುದು ಕಾಣದೇ ಮೂವರು ವಾಹನ ಸವಾರರು ಸಾವನ್ನಪ್ಪಿದ್ದಾರೆ. ಇದರ ಹೊಣೆಯನ್ನು ನಗರ ಪಾಲಿಕೆಯೇ ಹೊರಬೇಕಿದೆ.

ಅಲೆಯುತ್ತಿರುವ ತಬ್ಬಲಿ ಹೆಣ್ಣು ಮಗಳು

ಅರ್ಜಿಯನ್ನೇ ಸ್ವೀಕಾರ ಮಾಡುತ್ತಿಲ್ಲ. ಹೀಗೆ ಮೂರು ಸರ್ಕಾರಿ ಸಂಸ್ಥೆಗಳು ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿ ಕೈತೊಳೆದುಕೊಂಡಿವೆ. ಮುಕ್ತ ಅವರು ಮೃತಪಟ್ಟು 45 ದಿನಗಳಾಗಿದ್ದು, ಈ ತನಕ ಮರಣ ಪ್ರಮಾಣ ಪತ್ರಕ್ಕಾಗಿ ಕಚೇರಿಯಿಂದ ಕಚೇರಿಗೆ ಅವರ ಮಗಳು ಅಲೆಯುತ್ತಿದ್ದಾರೆಯೇ ಹೊರತು ಯಾರೂ ಪರಿಹಾರ ಕಲ್ಪಿಸುವ ಮನಸ್ಸು ಮಾಡುತ್ತಿಲ್ಲ. ಕರುಣೆಯೂ ಇಲ್ಲ. ಅನುಕಂಪದ ಆಧಾರದ ಮೇಲೆ ಕೆಲಸಕ್ಕೆ ಮುಕ್ತ ಅವರ ಮಗಳು ಈಗಾಗಲೇ ದಾಖಲಾತಿ ಸಲ್ಲಿಸಿ ಪ್ರಕ್ರಿಯೆ ಆರಂಭಿಸಬೇಕಿತ್ತು. ಆದರೆ ಎಲ್ಲಾ ದಾಖಲಾತಿ ಸಿದ್ಧವಿದ್ದರೂ ಮರಣ ಪ್ರಮಾಣ ಪತ್ರ ಕೈ ಸೇರಿಲ್ಲ.

ಇದಕ್ಕಾಗಿ ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಮುಕ್ತ ಸಂಬಂಧಿ ಮೋಹನ್ ಅಳಲು ತೋಡಿಕೊಂಡಿದ್ದಾರೆ.

ಅಧಿಕಾರಿ ವರ್ಗದ ಬೇಜವಾಬ್ದಾರಿ ಯಾವ ರೀತಿ ಇದೆ ಎಂಬುದಕ್ಕೆ ಇಂತಹ ಪ್ರಕರಣಗಳು ಸ್ಪಷ್ಟ ನಿದರ್ಶನವಾಗಿದೆ. ಒಂದು ಪುಟ್ಟ ವಿಚಾರವೇ ಪರಿಹಾರ ಆಗುತ್ತಿಲ್ಲವೆಂದರೆ ಇನ್ನು ಜಟಿಲ ಸಮಸ್ಯೆಗಳಿಗೆ ಪರಿಹಾರ ಇವರಿಂದ ಸಾಧ್ಯವೇ ಎಂಬ ಪ್ರಶ್ನೆ ಎದುರಾಗಿದೆ. ನಾಡಿನ ದೊರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲೇ ಈ ಪರಿಸ್ಥಿತಿಯಾದರೆ ಇನ್ನು ಉಳಿದ ಜಿಲ್ಲೆಗಳ ಪರಿಸ್ಥಿತಿ ಹೇಗಿರಬೇಡ ಎಂಬ ಪ್ರಶ್ನೆ ಕೂಡ ಕಾಡದೇ ಇರದು.

ಇಲಾಖಾ ಮುಖ್ಯಸ್ಥರನ್ನೇ ಭೇಟಿಯಾಗಿ...

ನಿಮ್ಮ ಯಾವುದೇ ಸಮಸ್ಯೆಗಳಿದ್ದರೆ ನೇರವಾಗಿ ಇಲಾಖಾ ಮುಖ್ಯಸ್ಥರನ್ನೇ ಭೇಟಿ ಮಾಡಿ, ಅಹವಾಲು ಸಲ್ಲಿಸಿ ಎಂದು ಅಪರ ಜಿಲ್ಲಾಧಿಕಾರಿ ಲೋಕನಾಥ್ ಸಲಹೆ ನೀಡಿದ್ದಾರೆ. ಮರಣ ಪ್ರಮಾಣ ಪತ್ರ ನೀಡುವುದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ನಗರ ಪಾಲಿಕೆ, ತಹಶೀಲ್ದಾರ್ ಕಚೇರಿ, ನಗರ ಸಭೆ, ಗ್ರಾಮ ಪಂಚಾಯಿತಿಗಳು ತಾಂತ್ರಿಕ ಕಾರಣ ನೀಡಿದರೆ ನೇರವಾಗಿ ಇಲಾಖಾ ಮುಖ್ಯಸ್ಥರನ್ನೆ ಭೇಟಿ ಮಾಡಿ ಎಂದು ಹೇಳಿದ್ದಾರೆ. ಕೆಳ ಸ್ತರದ ಅಧಿಕಾರಿಗಳು ಹಾಗೂ ಗುಮಾಸ್ತರನ್ನು ಭೇಟಿ ಮಾಡಿದಾಗ ಇಂತಹ ಕಾರಣ ನೀಡುತ್ತಾರೆ. ಆದ ಕಾರಣ ನಗರ ಪಾಲಿಕೆ ಆಯುಕ್ತರು, ತಹಶೀಲ್ದಾರ್ ಸೇರಿದಂತೆ ಆಯಾ ಇಲಾಖೆಯ ಮುಖ್ಯಸ್ಥರನ್ನೆ ನೇರವಾಗಿ ಭೇಟಿ ಮಾಡಿ ಅಹವಾಲು ಸಲ್ಲಿಸಿದರೆ ಅವರು ಸಮಸ್ಯೆ ಪರಿಹಾರ ಮಾಡುತ್ತಾರೆ ಎಂದು ತಿಳಿಸಿದ್ದಾರೆ.

ಮುಕ್ತ ಕುಟುಂಬಸ್ಥರು ನನ್ನ ಭೇಟಿ ಮಾಡಿದರೆ ಮರಣ ಪ್ರಮಾಣ ಪತ್ರ ಕೊಡಿಸಲು ಕ್ರಮ ವಹಿಸುತ್ತೇನೆ ಎಂದು ಲೋಕನಾಥ್ ಭರವಸೆ ನೀಡಿದ್ದಾರೆ.

ಈಗ ಹೇಗೆ ತಾಲೂಕು ಆಡಳಿತ ವ್ಯಾಪ್ತಿಗೆ ಬಂತು...

ಭಾಗ್ಯಮ್ಮ ಮರಣ ಪ್ರಮಾಣ ಪತ್ರ ನೀಡುವುದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ತಹಶೀಲ್ದಾರ್ ಕಚೇರಿ ಸಿಬ್ಬಂದಿ ಮೃತರ ಕುಟುಂಬಸ್ಥರಿಗೆ ಲಿಖಿತವಾಗಿಯೇ ತಿಳಿಸಿತ್ತು. ಆದರೆ ಈಗ ತಹಶೀಲ್ದಾರ್ ಕಚೇರಿಯೇ ಭಾಗ್ಯಮ್ಮ ಮರಣ ಪ್ರಮಾಣ ಪತ್ರ ನೀಡಿದೆ. ಆಗ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿದ್ದ ತಹಶೀಲ್ದಾರ್ ಕಚೇರಿ ಸಿಬ್ಬಂದಿ ಈಗ ಹೇಗೆ ಮರಣ ಪ್ರಮಾಣ ಪತ್ರ ವಿತರಿಸಿದೆ ಎಂಬ ಪ್ರಶ್ನೆ ಅಚ್ಚರಿ ಮೂಡಿಸಿದೆ. ಯಾವುದೇ ತಾಂತ್ರಿಕ ಸಮಸ್ಯೆ ಇದ್ದರೂ ಅದಕ್ಕೆ ಪರಿಹಾರ ಉಂಟು. ಜನ ಸಾಮಾನ್ಯರ ಸಮಸ್ಯೆ ಪರಿಹಾರ ಮಾಡಲು ಸರ್ಕಾರಿ ಅಧಿಕಾರಿಗಳಿಗೆ ಬದ್ಧತೆ ಇರಬೇಕು. ಇಲ್ಲವೆಂದರೆ ಭಾಗ್ಯಮ್ಮ ಕುಟುಂಬಸ್ಥರಂತೆ ಇತರರು ಕಚೇರಿಯಿಂದ ಕಚೇರಿಗೆ ತಬರನಂತೆ ಅಲೆಯಬೇಕಾಗುತ್ತದೆ. ಈಗಲಾದರೂ ಸರ್ಕಾರಿ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಲಿ ಎಂಬುದು 'ಮಿತ್ರ'ನ ಆಶಯ.

ನಡಾವಳಿ ಪುಸ್ತಕ ನಾಪತ್ತೆ, ಸದಸ್ಯರ ಆಕ್ರೋಶ

ಉಲ್ಲೇಖವಾಗಿದ್ದು, ಸದ್ಯ ಕೆರಗೋಡು ಧ್ವಜಸ್ತಂಭ ವಿವಾದದ ಬಳಿಕ ನಡಾವಳಿ ಪುಸ್ತಕವೇ ಕಾಣುತ್ತಿಲ್ಲ ಎಂದು ಗ್ರಾ.ಪಂ. ಅಧಿಕಾರಿಗಳು ಹೇಳಿರುವ ಹಿನ್ನಲೆಯಲ್ಲಿ ಗ್ರಾಪಂ ಗಳಿಗೆ ಆಗಮಿಸಿದ ಅನೇಕ ಸದಸ್ಯರು ಗ್ರಾಪಂ ಕಾರ್ಯದರ್ಶಿ ರತ್ನಮ್ಮರಿಗೆ ತರಾಟೆಗೆ ತೆಗೆದುಕೊಂಡರು. ನಡಾವಳಿ ಪುಸ್ತಕ ನಾಪತ್ತೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸದಸ್ಯರು, 18 ಸದಸ್ಯರು ಒಪ್ಪಿಗೆ ನೀಡಿರುವ ಜೊತೆಗೆ ಸಹಿ ಹಾಕಿರುವ ನಡಾವಳಿ ಪುಸ್ತಕ ಎಲ್ಲಿ ಎಂದು ಪ್ರಶ್ನಿಸಿದಾಗ, ನನಗಿಂತ ಮೇಲಾಧಿಕಾರಿಗಳನ್ನು ಕೇಳಿ ಎಂದು ರತ್ನಮ್ಮ ಹೇಳಿದ್ದಾರೆ. ಆಗ ಸದಸ್ಯರು ರತ್ನಮ್ಮ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಕೆರಗೋಡು ಗ್ರಾಪಂ ಸದಸ್ಯ ಮಹೇಶ್ ಮಾತನಾಡಿ, ವಿಜಯನಗರ ಕಾಲದಿಂದಲೂ ಕೆರಗೋಡಿಗೆ ತನ್ನದೇ ಆದ ಸ್ಥಾನಮಾನವಿದ್ದು, 40 ವರ್ಷಗಳಿಂದಲೂ ಇಲ್ಲಿ ದೇಗುಲ, ಧ್ವಜಸ್ತಂಭ ಇದೆ. ಧ್ವಜಸ್ತಂಭ ಶಿಥಿಲಗೊಂಡಾಗ ಹಲವು ಬಾರಿ ಪುನರ್ ನಿರ್ಮಾಣವಾಗಿದೆ. ಗೌರಿಶಂಕರ ಸೇವಾ ಟ್ರಸ್ಟ್ ಸಹ ಹಲವು ದಶಕಗಳಿಂದ ಕೆರಗೋಡಿನಲ್ಲಿದ್ದು, ಟ್ರಸ್ಟ್ ವತಿಯಿಂದ ಅನೇಕ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದುಕೊಂಡು ಬಂದಿವೆ ಎಂದು ಹೇಳಿದರು.

ಗ್ರಾಮಸ್ಥರು ಹಾಗೂ ಯುವಕರು ಧ್ವಜಸ್ತಂಭವನ್ನು ಅತ್ಯುತ್ತಮವಾಗಿ ನಿರ್ಮಾಣ ಮಾಡಬೇಕೆಂದು 4ರಿಂದ 5 ಲಕ್ಷ ಹಣ ಸಂಗ್ರಹಿಸಿ, ಈ ಧ್ವಜಸ್ತಂಭ ನಿರ್ಮಿಸಿದ್ದಾರೆ. ಅಯೋಧ್ಯೆ ರಾಮಮಂದಿರ ನಿರ್ಮಾಣಗೊಳ್ಳುವ ಸಂದರ್ಭದಲ್ಲಿ ಧ್ವಜಸ್ತಂಭವನ್ನು ಮಾಜಿ ಸಿಎಂ ಕುಮಾರಸ್ವಾಮಿ ಲೋಕಾರ್ಪಣೆ ಮಾಡಬೇಕಿತ್ತು. ಆದರೆ ಅವರ ಅನುಪಸ್ಥಿತಿಯಲ್ಲಿ ಧ್ವಜಸ್ತಂಭ ಉದ್ಘಾಟನೆಯಾಯಿತು ಎಂದು ವಿವರಿಸಿದರು.

ಇದಲ್ಲದೇ ಸ್ತಂಭದಲ್ಲಿ ಹನುಮ ಧ್ವಜ ಹಾರಿಸಲು ಗ್ರಾ.ಪಂ. ಸಭೆಗೆ ಗೌರಿಶಂಕರ ಸೇವಾ ಟ್ರಸ್ಟ್ ಮನವಿ ಕೊಟ್ಟಾಗ ಅಂದು ನಡೆದ ಕೆರಗೋಡು ಗ್ರಾ.ಪಂ. ಸಭೆಯಲ್ಲಿ 22 ಸದಸ್ಯರ ಪೈಕಿ 21 ಜನ ಸದಸ್ಯರಿದ್ದೆವು. ಅಧ್ಯಕ್ಷರು, ಉಪಾಧ್ಯಕ್ಷರನ್ನು ಒಳಗೊಂಡಂತೆ 18 ಮಂದಿ ಸಹಮತ ವ್ಯಕ್ತಪಡಿಸಿ ಅನುಮೋದಿಸಿದ್ದೇವೆ. ನಾಡ ಹಬ್ಬ ಹಾಗೂ ರಾಷ್ಟ್ರೀಯ ಹಬ್ಬ ಹೊರತುಪಡಿಸಿ ಉಳಿದ ಸಂದರ್ಭದಲ್ಲಿ ಹನುಮ ಧ್ವಜ ಹಾರಿಸುವಂತೆ ತೀರ್ಮಾನ ಕೈಗೊಂಡು ಅನುಮೋದನೆ ಮಾಡಿದ್ದೆವು ಎಂದು ವಿವರಿಸಿದರು.

ಸಾಮರಸ್ಯಕ್ಕೆ ಹೆಸರಾಗಿದ್ದ ಕೆರಗೋಡಿನಲ್ಲಿ ಕಾಂಗ್ರೆಸ್‌ನ ಕೆಲ ಮುಖಂಡರು ಮನವಿ ಕೊಟ್ಟು ಕಾನೂನು-ಸುವ್ಯವಸ್ಥೆ ಹಾಳಾಗುವಂತೆ ಮಾಡಿದ್ದಾರೆ. ಇಲ್ಲಿ ಎಂದೂ ಧರ್ಮ ಸಂಘರ್ಷ, ಜಾತಿ ಸಂಘರ್ಷ ಆಗಿಲ್ಲ. ಇಲ್ಲಿರುವ ಮುಸ್ಲೀಮರು ಸಹ ಧ್ವಜ ಇರಲಿ ಎಂದು ಅರ್ಜಿ ಕೊಟ್ಟು ಹಣವನ್ನು ಸಹ ನೀಡಿದ್ದಾರೆ. ಅನ್ಯ ಧರ್ಮದವರದ್ದು ಯಾವುದೇ ಸಮಸ್ಯೆ ಇಲ್ಲ. ನಮ್ಮ ಧರ್ಮದವರೇ ಹನುಮ ಧ್ವಜ ಹಾಕಲು ವಿರೋಧ ವ್ಯಕ್ತಪಡಿಸಿದ್ದಾರೆ. ಇವರ ಕುತಂತ್ರದಿಂದ ಇಷ್ಟೆಲ್ಲಾ ಬೆಳವಣಿಗೆಯಾಗಿದೆ ಎಂದು ಕಿಡಿಕಾರಿದರು. ಈ ಮಧ್ಯೆ ಪುಸ್ತಕ ತಮ್ಮ ಬಳಿ ಇದೆ ಎಂದು ಇಓ ತಿಳಿಸಿದ್ದು, ಗ್ರಾಪಂಗೆ ಯಾವುದೇ ಮಾಹಿತಿ ನೀಡದೆ ಪುಸ್ತಕ ತೆಗೆದುಕೊಂಡು ಹೋಗಿರುವುದು ಎಷ್ಟು ಸರಿ ಎಂದು ಗ್ರಾಪಂ ಸದಸ್ಯರು ಪ್ರಶ್ನಿಸಿದ್ದಾರೆ.

ಎಸ್ಸಿ ಬಲಗೈ ಸಮುದಾಯದ 'ಭೀಮ ಸಮಾವೇಶ'

ದಲಿತರ ಶ್ರೇಯೋಭಿವೃದ್ಧಿಗೆ ಬಿಜೆಪಿ ಬದ್ಧ

ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ



ಮೈಸೂರಿನ ಹೊರವಲಯದ ಕಲ್ಯಾಣ ಮಂಟಪದಲ್ಲಿ ನಡೆದ ಬಿಜೆಪಿ ಬೆಂಬಲಿತ ಬಲಗೈ ಸಮುದಾಯ ಭೀಮ ಸಮಾವೇಶವನ್ನು ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಉದ್ಘಾಟಿಸಿದರು.

ಮೈಸೂರು,ಜ.30(ಎಂಟಿವೈ)- ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಬಿಜೆಪಿ ದಲಿತ ಸಮುದಾಯದ ಅಭಿವೃದ್ಧಿಯ ಚಿಂತನೆಯನ್ನು ಸಾಕಾರಗೊಳಿಸಲು ಬದ್ಧವಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ತಿಳಿಸಿದ್ದಾರೆ.

ಮೈಸೂರಿನ ರಿಂಗ್ ರಸ್ತೆಯ ದೇವೇಗೌಡ ವೃತ್ತದ ಸಮೀಪವಿರುವ ಕಲ್ಯಾಣ ಮಂಟಪವೊಂದರಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾ ಆಯೋಜಿಸಿದ್ದ ಬಿಜೆಪಿ ಬೆಂಬಲಿತ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಬಲವರ್ಧನೆಗಾಗಿ 'ಭೀಮ ಸಮಾವೇಶ' ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದಲಿತ ಸಮುದಾಯದ ಏಳಿಗೆಗಾಗಿ ಕಾರ್ಯಕ್ರಮ ರೂಪಿಸಿದೆ. ದಲಿತ ಸಮುದಾಯ ಶ್ರೇಯೋಭಿವೃದ್ಧಿಗಾಗಿ ಬಿಜೆಪಿ ಬದ್ಧವಾಗಿದೆ. ಆದರೆ, ಸಮುದಾಯಕ್ಕೆ ಬಿಜೆಪಿ ಕುರಿತಂತೆ ವಿರೋಧ ಪಕ್ಷಗಳು ತಪ್ಪು ಸಂದೇಶ ರವಾನಿಸುತ್ತಿವೆ. ಇದಕ್ಕೆ ದಲಿತ ಸಮುದಾಯ ಮನ್ನಣೆ ನೀಡಬಾರದು ಎಂದು ಮನವಿ ಮಾಡಿದರು.

ಮೈಸೂರಲ್ಲಿ ಬಿಜೆಪಿ ಬೆಂಬಲಿತ ಬಲಗೈ ಸಮುದಾಯ ಭೀಮ ಸಮಾವೇಶ ಆಯೋಜಿಸಿರುವುದು ಸಂತೋಷ ತಂದಿದೆ. ಮುಂದಿನ ದಿನಗಳಲ್ಲಿ ಭೀಮ ಸಮಾವೇಶ ತಾಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಆಯೋಜಿಸಿ ಜಾಗೃತಿ ಮೂಡಿಸಬೇಕು. ಡಾ. ಅಂಬೇಡ್ಕರ್ ಅವರ ದಲಿತ ಅಭಿವೃದ್ಧಿ ಚಿಂತನೆಯ ಕನಸನ್ನು ನನಸು ಮಾಡಲು ದಲಿತ ಸಮುದಾಯ ಬಿಜೆಪಿಗೆ ಬೆಂಬಲ ನೀಡಬೇಕು. ಅಂಬೇಡ್ಕರ್ ಅವರು ಸಂವಿಧಾನ ಬರೆದಿರುವುದರಿಂದಲೇ ನಾವು ಭಾರತದ ಪ್ರಜೆಗಳಾಗಿ ಮುಂದುವರೆಯುತ್ತಿದ್ದೇವೆ. ಶ್ರೇಷ್ಠವಾದ ಸಂವಿಧಾನವನ್ನು ದೇಶಕ್ಕೆ ಕೊಡುಗೆ ನೀಡಿದ್ದಾರೆ. 'ಬಟ್ಟೆ ಹರಿದಿದ್ದರೂ ಚಿಂತಿಸಬೇಡಿ, ಕೈಯ್ಯಲ್ಲಿ ಒಂದು ಪುಸ್ತಕ ಇರಲಿ. ಮುಂದಿನ ದಿನ ಅದು ಕಾಪಾಡುತ್ತದೆ' ಎಂಬ ಅಂಬೇಡ್ಕರ್ ಹೇಳಿಕೆ ಮಹತ್ವದ್ದಾಗಿದ್ದು, ಅದರಂತೆ ಎಲ್ಲರೂ ನಡೆದುಕೊಳ್ಳಬೇಕು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದಲಿತ ಸಮುದಾಯ ಬಿಜೆಪಿಯನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಅನ್ಯಾಯ ಮಾಡಿದೆ. ಅಂಬೇಡ್ಕರ್ ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರವನ್ನು ಉದ್ದೇಶಪೂರ್ವಕವಾಗಿ ಬಾಂಗ್ಲಾ ದೇಶಕ್ಕೆ ಸೇರಿಸಲಾಗಿದೆ. ಇದರಿಂದ ಅಂಬೇಡ್ಕರ್ ಅವರನ್ನು ಹತ್ತಿಕ್ಕುವ ಕುತಂತ್ರ ನಡೆದಿರುವುದು ಎಲ್ಲರಿಗೂ ತಿಳಿದಿದೆ. ಪ್ರಧಾನಿ ನರೇಂದ್ರ ಮೋದಿ ದಿಟ್ಟ ಹೆಜ್ಜೆ ಇಡುತ್ತಿದ್ದಾರೆ. ಉತ್ತಮ ಆಡಳಿತ ನೀಡುತ್ತಿದ್ದಾರೆ. ದಲಿತ ಸಮುದಾಯದ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಈ ನಿಟ್ಟಿನಲ್ಲಿ ಬಲಗೈ ಪಂಗಡ ಬಿಜೆಪಿಯನ್ನು ಬೆಂಬಲಿಸಬೇಕು ಎಂದು ಕೋರಿದರು.

ಸಭೆಯಲ್ಲಿ ಮಾಜಿ ಸಚಿವ ಎನ್.ಮಹೇಶ್ ಪ್ರಾತ್ಯಕ್ಷಿಕೆ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಅನ್ಯಾಯ ಮಾಡಿದೆ ಎಂದು ವಿವರಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಎಲ್.ನಾಗೇಂದ್ರ, ಹರ್ಷವರ್ಧನ್, ಎಸ್. ಬಾಲರಾಜು, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಬಾಲರಾಜು, ಎಸ್ಸಿ ಮೋರ್ಚಾ ಅಧ್ಯಕ್ಷ ಮಹದೇವಯ್ಯ, ಮಾಜಿ ಪಾಲಿಕೆ ಸದಸ್ಯರಾದ ವೇದಾವತಿ, ಅಶ್ವಿನಿ ಶರತ್, ಜಿ.ಪಂ ಮಾಜಿ ಉಪಾಧ್ಯಕ್ಷ ಡಾ.ಶಿವರಾಮು, ವೆಂಕಟಸ್ವಾಮಿ, ಲಕ್ಷ್ಮಣ್, ಮಡವಾಡಿ ಮಹೇಶ್, ಮಂಗಳಾ ಸೋಮಶೇಖರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಅಸಮಾನತೆ ಇಲ್ಲದೆ ಇರುವುದೇ ಮಾನವೀಯ ದಾರಿ

ವಿಶೇಷ ಉಪನ್ಯಾಸದಲ್ಲಿ ಪತ್ರಕರ್ತ ರವೀಂದ್ರ ಭಟ್ಟ ಅಭಿಪ್ರಾಯ



ಮಾನಸಗಂಗೋತ್ರಿಯ ಗಾಂಧಿಭವನದಲ್ಲಿ ಮಂಗಳವಾರ ಆಯೋಜಿಸಿದ್ದ 76ನೇ ಸರ್ವೋದಯ ದಿನಾಚರಣೆಯಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರು,ಜ.30(ಜಿಎ)-'ಯಾವುದರಲ್ಲೂ ಅಸಮಾನತೆ ಬೇಡ ಎಂಬುದೇ ಗಾಂಧಿಯ ಧರ್ಮ, ಅದುವೇ ಮಾನವೀಯ ದಾರಿ' ಎಂದು ಹಿರಿಯ ಪತ್ರಕರ್ತ ರವೀಂದ್ರ ಭಟ್ಟ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾಲಯದ ಗಾಂಧಿ ಅಧ್ಯಯನ ಕೇಂದ್ರ ಮತ್ತು ಸಮಾಜ ಕಾರ್ಯ ಅಧ್ಯಯನ ವಿಭಾಗದಿಂದ ಮಾನಸಗಂಗೋತ್ರಿಯ ಗಾಂಧಿಭವನದಲ್ಲಿ ಮಂಗಳವಾರ ಆಯೋಜಿಸಿದ್ದ 76ನೇ ಸರ್ವೋದಯ ದಿನಾಚರಣೆ ಉದ್ಘಾಟಿಸಿ, 'ಧಾರ್ಮಿಕ ಸಹಿಷ್ಣುತೆ: ಗಾಂಧೀಜಿ ಪರಿಕಲ್ಪನೆ ಮತ್ತು ಇಂದಿನ ಅಗತ್ಯ' ಕುರಿತು ವಿಶೇಷ ಉಪನ್ಯಾಸ ನೀಡಿದರು.

ಗಾಂಧೀಜಿ ಧರ್ಮಗಳನ್ನು ರೈಲು ಗಾಡಿಯ ಡಬ್ಬಗಳಂತೆ ನೋಡುತ್ತಿದ್ದರು. ನೀವು ಯಾವುದೇ ಡಬ್ಬ ಹತ್ತಿದರೂ ತಲುಪುವುದು ಮಾತ್ರ ಒಂದೇ ಗುರಿಯನ್ನು, ಆದರೆ ಡಬ್ಬದ ಸ್ವಚ್ಛತೆಯನ್ನು ನಾವು ಮರೆಯಬಾರದು ಎನ್ನುತ್ತಿದ್ದರು. ಧರ್ಮವನ್ನು ಮರು ವ್ಯಾಖ್ಯಾನಿಸಲು ಉತ್ತಮ ಮೌಲ್ಯವನ್ನು ಸ್ಥಾಪಿಸಲು ಸದಾ ಹಾತೊರೆಯುತ್ತಿದ್ದ ವ್ಯಕ್ತಿ ಗಾಂಧಿ ಎಂದರು.

1920ರಲ್ಲಿ ಮಂಗಳೂರಿಗೆ ಭೇಟಿ ನೀಡಿದ್ದ ಗಾಂಧೀಜಿ, ಶೌಕತ್ ಅಲಿಯವರಿಗೆ 'ಪ್ರೀತಿಯ ಸಹೋದರರೇ' ಎಂದು ಕರೆದಿದ್ದನ್ನು ಗಮನಿಸಿ, ನಿಜಕ್ಕೂ ಅವರಿಬ್ಬರೂ ಒಂದೇ ತಾಯಿಯ ಮಕ್ಕಳು ಎಂದು ಕಾರ್ಯಕ್ರಮದಲ್ಲಿ ಹರ್ಷ ವ್ಯಕ್ತಪಡಿಸಿದ್ದರು. ಬೆಳಗಾವಿಯಲ್ಲಿ ಶೌಕತ್ ಅವರಿಗೆ ನೀಡಿದ್ದ ಉಡುಗೊರೆ ತಮಗೆ ನೀಡಿದ್ದಕ್ಕಿಂತ ಸಣ್ಣದು ಎಂದು ಅರಿತು ಸಮಾನವಾದದ್ದನ್ನೇ ನಮ್ಮಿಬ್ಬರಿಗೂ ನೀಡಬೇಕು ಎಂದು ತಾಕೀತು ಮಾಡಿದ್ದನ್ನು ಸ್ಮರಿಸಿದರು.

ವಿವಿ ಕುಲಪತಿ ಪ್ರೊ.ಲೋಕನಾಥ್ ಮಾತನಾಡಿ, ನಮ್ಮದು ತಂತ್ರಜ್ಞಾನ ಆಧಾರಿತ ಯುಗ. ಗಾಂಧೀಜಿ ಕಾಲಕ್ಕೂ ಇಂದಿಗೂ ಬಹಳಷ್ಟು ವ್ಯತ್ಯಾಸಗಳಿದ್ದರೂ ಅವರ ಆಲೋಚನೆ ಇಂದಿಗೂ ಪ್ರಸ್ತುತ. ಜನರು ಪರಸ್ಪರ ಅಪನಂಬಿಕೆಯಲ್ಲಿ ಒದ್ದಾಡುತ್ತಿದ್ದು, ಗಾಂಧೀಜಿಯ ಧಾರ್ಮಿಕ ಸಹಿಷ್ಣುತೆ ನಮಗೆ ಬಹಳ ಮುಖ್ಯ ಎಂದರು.

ಕಾರ್ಯಕ್ರಮದಲ್ಲಿ ಪೌರಕಾರ್ಮಿಕ ಮಹಿಳೆ ನಾಗಮ್ಮ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕುಲಸಚಿವೆ ವಿ.ಆರ್. ಶೈಲಜಾ, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಮಹದೇವನ್, ಸಮಾಜ ಕಾರ್ಯ ವಿಭಾಗದ ಅಧ್ಯಕ್ಷ ಚಂದ್ರಮೌಳಿ, ಗಾಂಧಿ ಅಧ್ಯಯನ ಕೇಂದ್ರದ ಪ್ರೊ.ಎಸ್. ನರೇಂದ್ರಕುಮಾರ್ ಉಪಸ್ಥಿತರಿದ್ದರು.

ಸಾಲ ಪಡೆದು ಉಪಟಳ ನೀಡಿದ ಮೂವರ ವಿರುದ್ಧ ವಿಡಿಯೋ ಮಾಡಿ

ಮಗಳು ಮಲಗಿರುವಾಗ ಲಾಡ್ಜ್‌ನಲ್ಲಿ ದಂಪತಿ ನೇಣಿಗೆ ಶರಣು

ಮೈಸೂರು,ಜ.30(ಆರ್‌ಕೆ): ಸಾಲ ಪಡೆದ ಮೂವರು ವಾಪಸ್ ನೀಡದೆ, ಉಪಟಳ ನೀಡಿದ ಬಗ್ಗೆ ಮೊಬೈಲ್‌ನಲ್ಲೇ ವಿಡಿಯೋ ಹೇಳಿಕೆ ನೀಡಿ 3 ವರ್ಷದ ಹೆಣ್ಣು ಮಗು ಬಿಟ್ಟು ದಂಪತಿ ಲಾಡ್ಜ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಆಲನಹಳ್ಳಿಯಲ್ಲಿ ಇಂದು ಮುಂಜಾನೆ ಸಂಭವಿಸಿದೆ.

ಮೈಸೂರಿನ ಯರಗನಹಳ್ಳಿ ನಿವಾಸಿಗಳಾದ ವಿಶ್ವನಾಥ(30) ಹಾಗೂ ಪತ್ನಿ ಸುಶ್ಮಿತಾ(25) ನೇಣಿಗೆ ಶರಣಾದವರು. ಜನವರಿ 28ರಂದು ಆಲನಹಳ್ಳಿಯ ರಿಂಗ್‌ರಸ್ತೆಯಲ್ಲಿರುವ ಶ್ರೀಸಾಯಿ ರೆಸಿಡೆನ್ಸಿಯ 4ನೇ ಮಹಡಿಯಲ್ಲಿ ಕೊಠಡಿ ಬಾಡಿಗೆಗೆ ಪಡೆದಿದ್ದ ವಿಶ್ವನಾಥ ಇಂದು ಮುಂಜಾನೆ ತನ್ನ ಮೊಬೈಲ್‌ನ ಎರಡು ವಾಟ್ಸ್‌ಆ್ಯಪ್ ಗ್ರೂಪ್‌ಗೆ ವಿಡಿಯೋ ಕಳಿಸಿ, ಪತ್ನಿಯೊಂದಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತನ್ನ ಮೂರು ವರ್ಷದ ಹೆಣ್ಣು ಮಗು ಮಲಗಿದ್ದಾಗ ದಂಪತಿ ನೇಣಿಗೆ ಶರಣಾಗಿದ್ದಾರೆ. ವಿಡಿಯೋದಲ್ಲಿ ಗಾಂಧಿನಗರದ ಶಿವು, ಎನ್.ಆರ್ ಮೊಹಲ್ಲಾದ ರಮೇಶ್ ಹಣ ಕೊಡಬೇಕು, ಚೋರನಹಳ್ಳಿಯ ರಾಜಣ್ಣ ತನ್ನ ಒಡವೆಗಳನ್ನು ಅಡವು ಇಟ್ಟು ಹಣ ತೆಗೆದುಕೊಂಡು ವಾಪಸ್ ನೀಡದಿರುವುದರಿಂದ ತಾವು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ ಎಂದು ವಿಶ್ವನಾಥ್ ವಿಡಿಯೋ ಹೇಳಿಕೆ ಮಾಡಿ ಎರಡು ಗ್ರೂಪುಗಳಿಗೆ ಹರಿಯ ಬಿಟ್ಟಿದ್ದಾರೆ ಎಂದು ಆಲನಹಳ್ಳಿ ಠಾಣೆ ಇನ್‌ಸ್ಪೆಕ್ಟರ್ ಜಿ.ಎಸ್. ಶ್ರೀಕಾಂತ್ ತಿಳಿಸಿದ್ದಾರೆ. ಆತನ ಸಹೋದರ ಕಿಶ್ಯಾಂಸುಂದರ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಆಲನಹಳ್ಳಿ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಘಟನಾ ಸ್ಥಳಕ್ಕೆ ದಾವಿಸಿದ ಪೊಲೀಸರು ಮಹಜರು ನಡೆಸಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ದೇಹಗಳನ್ನು ಒಪ್ಪಿಸಿದ್ದಾರೆ.

ಈ ಬಾರಿ 3.8 ಲಕ್ಷ ಕೋಟಿ ಬಜೆಟ್



ತುಮಕೂರು: ಫೆಬ್ರವರಿ 16 ರಂದು ಮಂಡಿಸಲಿರುವ 2024-25 ನೇ ಸಾಲಿನ ರಾಜ್ಯ ಬಜೆಟ್ ಗಾತ್ರವು ಸುಮಾರು 3.8 ಲಕ್ಷ ಕೋಟಿ ರೂಪಾಯಿಗಳಾಗಿದ್ದು, 2023-24ರ ಬಜೆಟ್‌ಗೆ ಹೋಲಿಸಿದರೆ 50,000 ಕೋಟಿ ರೂಪಾಯಿಗಳಷ್ಟು ಹೆಚ್ಚಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಹೇಳಿದ್ದಾರೆ.

ನನ್ನ ಸರ್ಕಾರದಲ್ಲಿ ಹಣವಿಲ್ಲ ಮತ್ತು ದಿವಾಳಿಯಾಗಿದೆ ಎಂದು ಬಿಜೆಪಿ ಟೀಕಿಸುತ್ತಿದೆ. ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವುದು ಅಸಾಧ್ಯ ಹಾಗೆ ಮಾಡಿದರೆ ಸರ್ಕಾರ ದಿವಾಳಿಯಾಗುತ್ತದೆ ಎಂದು ಸ್ವತಃ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು. ಆದರೆ ನಾನು 3.7 ಲಕ್ಷ ಕೋಟಿಯಿಂದ 3.8 ಲಕ್ಷ ಕೋಟಿಯವರೆಗೆ ಬಜೆಟ್ ಮಂಡಿಸುತ್ತೇನೆ. ಹಣವಿಲ್ಲದಿದ್ದರೆ, ಬಜೆಟ್‌ನ ಗಾತ್ರ ಇಷ್ಟು ಹೇಗೆ ಆಗಲಿದೆ ಎಂದು ಪ್ರಶ್ನಿಸಿದರು.

ತುಮಕೂರು ಜಿಲ್ಲೆಯಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು 30,125 ಫಲಾನುಭವಿಗಳಿಗೆ 697.27 ಕೋಟಿ ಮೌಲ್ಯದ ಸವಲತ್ತುಗಳನ್ನು ವಿತರಿಸಿದ ನಂತರ ಮಾತನಾಡಿದರು. ನಾವು ಮಾಡುತ್ತಿರುವ ಕೆಲಸ ತಮ್ಮ ಟೀಕಾಕಾರರು ಮತ್ತು ವಿರೋಧ ಪಕ್ಷಗಳಿಗೆ ವಿಶೇಷ ವಾಗಿ ಬಿಜೆಪಿಗೆ ಉತ್ತರವಾಗಿದೆ ಎಂದು ಹೇಳಿದರು.

ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ತಕ್ಕ ಪ್ರತ್ಯುತ್ತರ ನೀಡುವಂತೆ ಅವರು ಖಾತ್ರಿ ಯೋಜನೆಗಳ ಫಲಾನುಭವಿಗಳು ಮತ್ತು ಮಹಿಳೆಯರಿಗೆ ಮನವಿ ಮಾಡಿದರು. ಐದು ಖಾತರಿ ಯೋಜನೆಗಳನ್ನು ಜಾರಿಗೆ ತರಲು ಕಾಂಗ್ರೆಸ್ ಸರ್ಕಾರದ ಬಳಿ ಹಣವಿಲ್ಲ ಎಂದು ಜನರನ್ನು ದಾರಿ ತಪ್ಪಿಸುವವರಿಗೆ ಈ ಘಟನೆ ಉತ್ತರವಾಗಿದೆ ಎಂದು ಅವರು ಹೇಳಿದರು.

ನಾವು ಎಲ್ಲಾ ಐದು ಖಾತರಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಈ ಯೋಜನೆಗಳ ಫಲಾನುಭವಿಗಳು ಸುಳ್ಳು ಹೇಳುವವರಿಗೆ ತಕ್ಕ ಉತ್ತರ ನೀಡಬೇಕು ಎಂದು ಸಿದ್ದರಾಮಯ್ಯ ಹೇಳಿದರು. ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದರೂ ಬರ ಪರಿಹಾರ ಕಾಮಗಾರಿಗಳಿಗೆ ಎನ್‌ಡಿಆರ್ ಎಫ್‌ನಿಂದ ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ ಎಂದು ಕೇಂದ್ರ ಸರ್ಕಾರವನ್ನು ಟೀಕಿಸಿದರು. ರಾಜ್ಯ ಸರ್ಕಾರವು 29,28,910 ರೈತರಿಗೆ ಇನ್‌ಪುಟ್ ಸಬ್ಸಿಡಿಯಾಗಿ ತಲಾ 2,000 ರೂ.ಗಳ ಮೊದಲ ಕಂತಿನಲ್ಲಿ 555 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ ಎಂದು ಅವರು ಹೇಳಿದರು. ಅನುದಾನದ ಕೊರತೆಯಿಂದ ರಾಜ್ಯ ಸರ್ಕಾರ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ನಿಲ್ಲಿಸಿಲ್ಲ. ವಾಸ್ತವವಾಗಿ ಅನೇಕ ಹೊಸ ಯೋಜನೆಗಳನ್ನು ಕೈಗೆತ್ತಿಕೊಂಡಿದೆ ಎಂದು ಸಿಎಂ ಹೇಳಿದರು.

ರಾಜ್ಯದಲ್ಲಿ 33 ಡಿವೈಎಸ್ಪಿ, 132 ಇನ್‌ಸ್ಪೆಕ್ಟರ್ಸ್ ವರ್ಗಾವರ್ಗಿ

ಬೆಂಗಳೂರು, ಜ. 30- ರಾಜ್ಯ ಸರ್ಕಾರ ಪೊಲೀಸ್ ಇಲಾಖೆಗೆ ಭಾರೀ ಸರ್ಜರಿ ಮಾಡಿದ್ದು, 33 ಡಿವೈಎಸ್ಪಿ ಮತ್ತು 132 ಇನ್‌ಸ್ಪೆಕ್ಟರ್‌ಗಳ ವರ್ಗಾವರ್ಗಿ ಮಾಡಿದೆ.

ಮೈಸೂರಿನ ಕೆ.ಆರ್. ಉಪವಿಭಾಗಕ್ಕೆ ರಾಜ್ಯ ಗುಪ್ತವಾರ್ತೆಯ ಜಿ.ಎಸ್. ರಘು, ನಂಜನಗೂಡಿಗೆ ಗುಪ್ತವಾರ್ತೆ ಆದೇಶದಲ್ಲಿದ್ದ ಎ.ಆರ್. ಸುಮೀತ್ ವರ್ಗಾಯಿಸಿದ್ದು, ಅಲ್ಲಿದ್ದ ವಿ. ಗೋವಿಂದರಾಜು ಬೆಂಗಳೂರಿನ ಸಿಸಿಬಿಗೆ ವರ್ಗಾಯಿಸಲಾಗಿದೆ. ಸಿಐಡಿಯಲ್ಲಿದ್ದ ಅನುಷಾ ರಾಣಿ ಮೈಸೂರಿನ ಡಿಸಿಆರ್‌ಇ, ಮೈಸೂರು ಚೆಸ್ಕಾಂ ಜಾಗೃತಿ ದಳದಲ್ಲಿದ್ದ ಎಂ. ಧರ್ಮೇಂದ್ರ ಕೊಳ್ಳೇಗಾಲ ಉಪವಿಭಾಗ, ಚನ್ನಪಟ್ಟಣ ಕೆಎಸ್‌ಪಿಟಿಎಸ್‌ಯಲ್ಲಿದ್ದ ಎಲ್.ಕೆ. ರಮೇಶ್ ಮಂಡ್ಯ ಉಪ ವಿಭಾಗಕ್ಕೆ ವರ್ಗಾವಣೆಗೊಂಡಿದ್ದಾರೆ.

ಮೈಸೂರಿನ ಆಲನಹಳ್ಳಿ ಠಾಣೆಗೆ ಜಿ.ಎಸ್. ಸ್ವರ್ಣ, ಸಿದ್ಧಾರ್ಥನಗರ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಆಗಿ ಪಿರಿಯಾಪಟ್ಟಣ ದಲ್ಲಿದ್ದ ಕೆವಿ. ಶ್ರೀಧರ್ ಅವರನ್ನು ವರ್ಗಾಯಿಸಲಾಗಿದ್ದು, ಮೈಸೂರು ಸೆನ್ ಠಾಣೆಯಲ್ಲಿದ್ದ ಜಿ. ಪುರುಷೋತ್ತಮ್ ಸರಸ್ವತಿಪುರಂ ಠಾಣೆ, ಲೋಕಾಯುಕ್ತ ವರ್ಗಾವಣೆ ಆದೇಶದಲ್ಲಿದ್ದ ಎಂ. ಮೋಹನ್‌ಕುಮಾರ್ ಮೈಸೂರು ಸಿಸಿಬಿಗೆ ವರ್ಗಾವಣೆಗೊಂಡಿದ್ದಾರೆ.

ಚಾಮರಾಜನಗರ ಚೆಸ್ಕಾಂ ಜಾಗೃತ ದಳದ ಅಜರುದ್ದೀನ್ ಬೆಂಗಳೂರಿನ ಹೆಚ್ಎಎಲ್ ಠಾಣೆ, ಚಾಮರಾಜನಗರ ಪೂರ್ವ ಠಾಣೆಯ ಆರ್. ಶ್ರೀಕಾಂತ್ ಯಳಂದೂರು, ಅವರ ಸ್ಥಳಕ್ಕೆ ನಂದಗುಡಿ ಠಾಣೆಯ ಎಂ. ದಿವಾಕರ್, ಯಳಂದೂರಿನ ಶಿವರಾಜ್ ಆರ್. ಮುಧೋಳ್ ಗೋಣಿಕೊಪ್ಪ ಠಾಣೆ, ಮೈಸೂರು ಚೆಸ್ಕಾಂ ಜಾಗೃತ ದಳದ ಎಂ. ಶಿವಮಾದಯ್ಯ ಕೊಳ್ಳೇಗಾಲ, ಕೆ.ಆರ್. ಪೇಟೆಯ ಪಿ. ಜಗದೀಶ್ ಮಲೆಮಹದೇಶ್ವರ ಬೆಟ್ಟಕ್ಕೆ ವರ್ಗಾವಣೆ ಮಾಡಲಾಗಿದೆ.

ಮೈಸೂರಿನ ಡಿಎಸ್‌ಬಿಯ ಮುದ್ದುಮಹದೇವ ಸೋಮವಾರಪೇಟೆ, ಅಲ್ಲಿದ್ದ ರಾಮಚಂದ್ರ ನಾಯಕ್ ಉಡುಪಿ ಸೆನ್ ಠಾಣೆ, ಶನಿವಾರಸಂತೆಯ ಎಂ. ಮಂಜುನಾಥ್ ಕೊಡಗು ಜಿಲ್ಲಾ ಮಹಿಳಾ ಠಾಣೆ, ಹಾಸನ ಜಿಲ್ಲೆ ಬೇಲೂರಿನ ಎಸ್.ಎನ್. ರವಿಕಿರಣ್ ಬೆಂಗಳೂರಿನ ಸಂಪಂಗಿರಾಮನಗರ, ಅರಕಲಗೂಡಿನ ಎಸ್.ಎಂ. ರಘುಪತಿ ಚೆನ್ನರಾಯಪಟ್ಟಣಕ್ಕೆ ವರ್ಗಾಯಿಸಲಾಗಿದ್ದು, ಅಲ್ಲಿದ್ದ ಕೆ.ಎಂ. ವಸಂತ ಅರಕಲಗೂಡಿಗೆ, ಗುಪ್ತವಾರ್ತೆಯಲ್ಲಿದ್ದ ಜಿ.ಕೆ. ಸುಬ್ರಮಣ್ಯ ಬೇಲೂರಿಗೆ, ಹಾಸನ ಪಿಟಿಎಸ್‌ನಲ್ಲಿದ್ದ ಡಿ. ಸತೀಶ್ ಚಿಕ್ಕಮಗಳೂರು ಜಿಲ್ಲೆಯ ಬಸವನಹಳ್ಳಿ, ಗುಪ್ತವಾರ್ತೆಯ ಆನಂದೇಗೌಡ ಕೆ.ಆರ್.ಪೇಟೆ ಗ್ರಾಮಾಂತರ ಠಾಣೆಗೆ ವರ್ಗಾವಣೆ ಆಗಿದ್ದಾರೆ.

ಮಾನವ ಹಕ್ಕುಗಳ ಆಯೋಗದ ಹೆಸರು ದುರ್ಬಳಕೆಯಾದರೆ ಕ್ರಮ

- ಆಯೋಗದ ಅಧ್ಯಕ್ಷ ನಾರಾಯಣಸ್ವಾಮಿ ಎಚ್ಚರಿಕೆ
- ಮೈಸೂರಿನಲ್ಲಿ 200 ಪ್ರಕರಣ ಇತ್ಯರ್ಥ
- ಆಯೋಗ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಿದೆ
- ನಮ್ಮದು ಹಲ್ಲು ಕಿತ್ತ ಹಾವು ಎಂಬ ವಾದ ಸರಿ

ಮೈಸೂರು, ಜ.30(ಬಿಎಲ್‌ಯು)- ಮಾನವ ಹಕ್ಕುಗಳ ಆಯೋಗದ ಹೆಸರು ದುರ್ಬಳಕೆ ಮಾಡಿಕೊಂಡು ಹಣ ವಸೂಲಿಗಿಳಿದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಲ್.ನಾರಾಯಣ ಸ್ವಾಮಿ ಎಚ್ಚರಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾನವ ಹಕ್ಕುಗಳ ಪರವಾಗಿ ಬಹಳಷ್ಟು ವ್ಯಕ್ತಿಗಳು ಹಾಗೂ ಸಂಘ ಸಂಸ್ಥೆಗಳು ಹೋರಾಟ ಮಾಡುತ್ತಿವೆ. ಆದರೆ ಮಾನವ ಹಕ್ಕುಗಳ ಆಯೋಗದ ಹೆಸರು ದುರುಪಯೋಗ ಮಾಡಿಕೊಂಡು ಹಣ ವಸೂಲಿಗೆ ಇಳಿದರೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಲ್.ನಾರಾಯಣ ಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವುದು

ಕೆಲವು ವ್ಯಕ್ತಿಗಳು ಮಾನವ ಹಕ್ಕುಗಳ ಹೋರಾಟಗಾರರೆಂದು ಕಾರಿಗೆ ಫಲಕ ಹಾಕಿಕೊಂಡು ಹಣ ವಸೂಲಿ ಮಾಡುತ್ತಿರುವ ದೂರುಗಳಿಗೆ ಸಂಬಂಧಿಸಿದಂತೆ ನಾರಾಯಣ ಸ್ವಾಮಿ ಈ ಎಚ್ಚರಿಕೆ ನೀಡಿದರು.

ಈ ಮೊದಲ ಆಯೋಗ ರಾಜಧಾನಿ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತಿತ್ತು. ಆದರೆ ಈಗ ಜಿಲ್ಲಾ ಮಟ್ಟಕ್ಕೂ ಭೇಟಿ ನೀಡಿ ದೂರು ಸ್ವೀಕಾರ ಮಾಡಲಾಗುತ್ತಿದೆ. ಈಗಾಗಲೇ ಕಲ್ಬುರ್ಗಿ, ಯಾದಗಿರಿ ಹಾಗೂ ಬೀದರ್ ಜಿಲ್ಲೆಗಳಿಗೆ ಭೇಟಿ ನೀಡಿ ಅಲ್ಲೇ ಜನರ ಸಮಸ್ಯೆ ಪರಿಹಾರ ಮಾಡಿದ್ದೇವೆ. ಇದು ಯಶಸ್ವಿಯಾದ ಪರಿಣಾಮ, ಈಗ ಮೈಸೂರು ಜಿಲ್ಲೆಗೂ ಭೇಟಿ ನೀಡಿ ಇಲ್ಲೆ ಜನರಿಂದ ಅಹವಾಲು ಸ್ವೀಕಾರ ಮಾಡುತ್ತಿದ್ದೇವೆ ಎಂದು ವಿವರಿಸಿದರು.

ರಾಜ್ಯದಲ್ಲಿ ಸುಮಾರು 6 ಸಾವಿರ ಪ್ರಕರಣ ದಾಖಲಾಗಿದ್ದು, ಈಗಾಗಲೇ 1,230 ಪ್ರಕರಣ ಇತ್ಯರ್ಥಪಡಿಸಿದ್ದೇವೆ. ಮೈಸೂರು ಜಿಲ್ಲೆಯಲ್ಲಿ 300ಕ್ಕೂ ಅಧಿಕ ಪ್ರಕರಣ ದಾಖಲಾಗಿದ್ದು, 200 ಪ್ರಕರಣ ಇತ್ಯರ್ಥ ಮಾಡಿದ್ದೇವೆ. ಇನ್ನು ನೂರು ಪ್ರಕರಣಗಳನ್ನು ಶೀಘ್ರವೇ ಪರಿಹಾರ ಮಾಡುತ್ತೇವೆ. ಒಟ್ಟಾರೆ ಮಾನವ ಹಕ್ಕುಗಳ ಉಲ್ಲಂಘನೆಯಾದರೆ ಆಯೋಗ ತಕ್ಷಣವೇ ಕ್ರಮ ಕೈಗೊಳ್ಳಲಿದೆ ಎಂದು ನಾರಾಯಣ ಸ್ವಾಮಿ ಭರವಸೆ ನೀಡಿದರು.

ಹೌದು ಹಲ್ಲು ಕಿತ್ತ ಹಾವು: ಮಾನವ ಹಕ್ಕುಗಳ ಆಯೋಗಕ್ಕೆ ಹೆಚ್ಚಿನ ಅಧಿಕಾರವಿಲ್ಲದ ಹಲ್ಲು ಕಿತ್ತ ಹಾವು ಎಂಬ ಟೀಕೆಯನ್ನು ಒಪ್ಪಿಕೊಂಡ ನಾರಾಯಣಸ್ವಾಮಿ, ಕೆಲವೊಂದು ವಿಚಾರದಲ್ಲಿ ಗಟ್ಟಿ ನಿರ್ಧಾರ ಕೈಗೊಳ್ಳಲು ಆಗುತ್ತಿಲ್ಲ. ಸರ್ಕಾರ ಮಾನವ ಹಕ್ಕುಗಳ ಆಯೋಗಕ್ಕೆ ನೀಡಿರುವ ಕಾನೂನುದತ್ತ ಅಧಿಕಾರದ ಚೌಕಟ್ಟಿನಲ್ಲಿ ಕೆಲಸ ನಿರ್ವಹಿಸಬೇಕಿದೆ ಎಂದು ಹೇಳಿದರು.

ಪ್ರತಿ ದಿನ ದಿನ ಪತ್ರಿಕೆಗಳು ಹಾಗೂ ಟಿವಿ ಮಾಧ್ಯಮಗಳಲ್ಲಿ ಬರುವ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ಇದರ ಬಗ್ಗೆ ನಿಗಾ ವಹಿಸಲು ಪ್ರತ್ಯೇಕ ಅಧಿಕಾರಿ ನಿಯೋಜಿಸಿದ್ದೇವೆ. ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂಬುದು ಸ್ಪಷ್ಟವಾದರೆ ಸ್ವಯಂ ದೂರು ದಾಖಲಿಸಿಕೊಂಡು ಕ್ರಮ ಕೈಗೊಳ್ಳುತ್ತೇವೆ ಎಂದು ನಾರಾಯಣ ಸ್ವಾಮಿ ಸ್ಪಷ್ಟಪಡಿಸಿದರು.

ಆಯೋಗದ ಸದಸ್ಯರಾದ ಡಾ.ಟಿ. ಶ್ಯಾಮಭಟ್, ಎಸ್.ಕೆ.ವೆಂಟಗೋಡಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬಜೆಟ್‌ನಲ್ಲಿ ಮೈಸೂರು ಜಿಲ್ಲೆಯ ಅಭಿವೃದ್ಧಿ ಯೋಜನೆಗೆ ಸಾಕಷ್ಟು ಅನುದಾನ ಮೀಸಲಿರಿಸಿ

ಜನಪ್ರತಿನಿಧಿಗಳು, ಕೈಗಾರಿಕೋದ್ಯಮಿಗಳು, ಹೋಟೆಲ್ ಮಾಲೀಕರು, ಪತ್ರಕರ್ತರು, ಸಾಹಿತಿಗಳು, ಟ್ರಾವೆಲ್ ಏಜೆಂಟರು, ರೈತ ಮುಖಂಡರು, ಪ್ರವಾಸೋದ್ಯಮ ಸಹಭಾಗಿಗಳು, ವ್ಯಾಪಾರಸ್ಥರು, ಪಾರಂಪರಿಕ ತಜ್ಞರು, ಯೋಗ, ಸಿನೆಮಾ, ಕ್ರೀಡಾ ಕ್ಷೇತ್ರದ ಪರಿಣತರು, ಮಾಜಿ ಮೇಯರ್‌ಗಳು, ಸೇವಾಪಾಲುದಾರರಿಂದ ಸರ್ಕಾರಕ್ಕೆ ಸಲಹೆ-ಅಭಿಪ್ರಾಯ ಮಂಡನೆ

ಮೈಸೂರು, ಜ. 30(ಆರ್‌ಕೆ)- ಫೆಬ್ರವರಿ ತಿಂಗಳಲ್ಲಿ ಮಂಡನೆಯಾಗಲಿರುವ 2024ರ ರಾಜ್ಯ ಆಯ-ವ್ಯಯದಲ್ಲಿ ಮೈಸೂರು ನಗರ ಮತ್ತು ಜಿಲ್ಲೆಯ ಅಭಿವೃದ್ಧಿ ಯೋಜನೆಗಳನ್ನು ಸೇರ್ಪಡೆಗೊಳಿಸಿ ಅಗತ್ಯ ಅನುದಾನ ಮೀಸಲಿರಿಸುವಂತೆ ವಿವಿಧ ಕ್ಷೇತ್ರಗಳ ಪರಿಣಿತರು ಸಲಹೆ-ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ಜೆಎಲ್‌ಬಿ ರಸ್ತೆಯ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮೀಟಿಂಗ್ ಹಾಲ್‌ನಲ್ಲಿ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅಧ್ಯಕ್ಷತೆಯಲ್ಲಿ ಮಂಗಳವಾರ ಏರ್ಪಡಿಸಿದ್ದ ಬಜೆಟ್ ಪೂರ್ವಭಾವಿ ಸಮಾಲೋಚನಾ ಸಭೆಯನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಜೆಎಲ್‌ಬಿ ರಸ್ತೆಯ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮೀಟಿಂಗ್ ಹಾಲ್‌ನಲ್ಲಿ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಬಜೆಟ್ ಪೂರ್ವಭಾವಿ ಸಮಾಲೋಚನಾ ಸಭೆಯನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸಿದರು.

ಮೈಸೂರಿನಲ್ಲಿ ಮೂಲಸೌಲಭ್ಯಗಳೊಂದಿಗೆ ಪ್ರವಾಸೋದ್ಯಮ, ವಿಮಾನ ನಿಲ್ದಾಣದ ಅಭಿವೃದ್ಧಿ, ಸ್ವಚ್ಛತೆಗೆ ಒತ್ತು ನೀಡಬೇಕು, ಕೈಗಾರಿಕೆಗಳಿಗೆ ಪ್ರೋತ್ಸಾಹದಾಯಕ ಯೋಜನೆ ರೂಪಿಸುವ ಅಗತ್ಯವಿದೆ ಎಂದ ಡಾ. ತಿಮ್ಮಯ್ಯ, ರಾಜ್ಯದ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಅವಿರತ, ಪ್ರಾಮಾಣಿಕ ಸೇವೆ ಸಲ್ಲಿಸುತ್ತಿರುವ ಖ್ಯಾತ ಹೃದ್ರೋಗ ತಜ್ಞ ಡಾ. ಸಿ.ಎನ್. ಮಂಜುನಾಥ್‌ರನ್ನು ನಿರ್ದೇಶಕರನ್ನಾಗಿ ಮುಂದುವರಿಸುವುದು ಹೃದ್ರೋಗಿಗಳ ಹಿತದೃಷ್ಟಿಯಿಂದ ಸೂಕ್ತ ಎಂದು ಅಭಿಪ್ರಾಯಪಟ್ಟರು.

ಎಂಎಲ್‌ಸಿ ಸಿ.ಎನ್. ಮಂಜೇಗೌಡರು ಮಾತನಾಡಿ, ಹಳೇ ಆರ್‌ಎಂಸಿಯಲ್ಲಿ ಕೋಲ್ಡ್ ಸ್ಟೋರೇಜ್, ರೈತರಿಗೆ ತಂಗುದಾಣ, ಇಲ್ಲಿ ಬೆಳೆಯುವ ಹೂವಿಗೆ ಅಂತರರಾಷ್ಟ್ರೀಯ ಮಾರುಕಟ್ಟೆ ವ್ಯವಸ್ಥೆ, ಮುಡಾದಿಂದ ಹೊಸ ಬಡಾವಣೆ, ಸರ್ಕಾರಿ ಕಟ್ಟಡಗಳ ದುರಸ್ತಿ ಹಾಗೂ ನೀರು ಶುದ್ಧೀಕರಣ ಘಟಕಗಳಿಗೆ ಬಜೆಟ್‌ನಲ್ಲಿ ಅನುದಾನ ಘೋಷಣೆಯಾಗಬೇಕು ಎಂದರು.

ವಿಷಮುಕ್ತ ಸಿರಿಧಾನ್ಯ: ಪಾರಂಪರಿಕ ಕಟ್ಟಡಗಳ ದುರಸ್ತಿ, ಬ್ರಾಂಡೆಡ್ ವಸ್ತುಗಳಿಗೆ ಮಾರುಕಟ್ಟೆ, ನೈಸರ್ಗಿಕ ಕೃಷಿ ಮೂಲಕ ವಿಷಮುಕ್ತ ಸಿರಿಧಾನ್ಯ ಆಹಾರ ಪೂರೈಕೆ, ಸಣ್ಣ ಕೈಗಾರಿಕೆ, ಫುಡ್ ಇಂಡಸ್ಟ್ರೀಸ್‌ಗಳಿಗೆ ಸೌಲಭ್ಯ ನೀಡಬೇಕೆಂದು ರೈತ ಮುಖಂಡ ಬಡಗಲಪುರ ನಾಗೇಂದ್ರ ತಿಳಿಸಿದರು.

ರಘು ಸೆಂಟರ್‌ಗೆ ಅನುದಾನ: ಹೆಬ್ಬಾಳ್‌ನಲ್ಲಿ ನೆನೆಗುದಿಗೆ ಬಿದ್ದಿರುವ ರಘು ಕೇಂದ್ರಕ್ಕೆ 1 ಕೋಟಿ ಅನುದಾನ, ಸಣ್ಣ ಕೈಗಾರಿಕೆಗಳ ತೆರಿಗೆ ಪ್ರಮಾಣ ಕಡಿತ, ಕೈಗಾರಿಕಾ ಪಟ್ಟಣ ಪ್ರಾಧಿಕಾರ ರಚನೆ, ಇಲ್ಲಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗಾಗಿ ಬಜೆಟ್‌ನಲ್ಲಿ ಹಣ ಒದಗಿಸಬೇಕೆಂದು ಮೈಸೂರು ಕೈಗಾರಿಕೆಗಳ ಸಂಘದ ಅಧ್ಯಕ್ಷರಾದ ಮಾಜಿ ಮೇಯರ್ ಪಿ. ವಿಶ್ವನಾಥ್ ಸಲಹೆ ನೀಡಿದರು.

ದಸರಾ ಪ್ರಾಧಿಕಾರ: ಮೈಸೂರು ದಸರಾಗೆ ಪ್ರತ್ಯೇಕ ಪ್ರಾಧಿಕಾರ ರಚನೆ, ಏಮ್ಸ್ ಮಾದರಿ ಮೈಸೂರು ಮೆಡಿಕಲ್ ಕಾಲೇಜು ಅಭಿವೃದ್ಧಿ, ಮೈಸೂರು ನಗರ ವ್ಯಾಪ್ತಿಯ ವಿಸ್ತರಣೆ, ಸ್ಮಾರ್ಟ್ ಸಿಟಿ ಯೋಜನೆ, ಮಹಾರಾಣಿ ವಿಜ್ಞಾನ, ಕಲಾ ಕಾಲೇಜು ಮತ್ತು ಹಾಸ್ಟೆಲ್ ಬಿಲ್ಡಿಂಗ್ ವಿಸ್ತರಣೆ, ಪೌರಕಾರ್ಮಿಕರ ಮಕ್ಕಳ ಪ್ರತ್ಯೇಕ ಹಾಸ್ಟೆಲ್, ಡೆಫ್ ಅಂಡ್ ಡೆಮ್ ವಿದ್ಯಾರ್ಥಿಗಳಿಗೆ ಸ್ಕಿಲ್ ಟ್ರೈನಿಂಗ್ ಸೆಂಟರ್, ಸರ್ಕ್ಯೂಟ್ ನೆಟ್‌ವರ್ಕ್ ಯೋಜನೆ ಅನುಷ್ಠಾನವಾಗಬೇಕೆಂದು ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ ಅಭಿಪ್ರಾಯಪಟ್ಟರು.

ಫಿಲಂ ಸಿಟಿ: ಮೈಸೂರಲ್ಲಿ ಫಿಲಂ ಸಿಟಿಗೆ ಚಾಲನೆ, ಟೂರಿಸಂ ಸೆಂಟರ್, ಪಾರಂಪರಿಕ ಕಟ್ಟಡಗಳ ಸಂರಕ್ಷಣೆಯಾಗಲಿ ಎಂದು ಸಂಘ-ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್. ಪ್ರಶಾಂತ್ ಸಲಹೆ ನೀಡಿದರೆ, ಪ್ರವಾಸೋದ್ಯಮದ ದೃಷ್ಟಿಯಿಂದ ಹೊರ ರಾಜ್ಯಗಳಿಂದ ಬರುವ ಪ್ರವಾಸಿ ವಾಹನಗಳ ತೆರಿಗೆ ಕಡಿತಗೊಳಿಸುವಂತಹ ಮೈಸೂರು ಟ್ರಾವೆಲ್ ಅಸೋಸಿಯೇಷನ್‌ನ ಜಯಕುಮಾರ್ ಒತ್ತಾಯಿಸಿದರು.

ಹೂಳೆತ್ತಬೇಕು: ಕಬಿನಿ ಮತ್ತು ಕೆಆರ್‌ಎಸ್ ಜಲಾಶಯದ ಹೂಳೆತ್ತಿಸಿ ನೀರಿನ ಸಂಗ್ರಹ ಸಾಮರ್ಥ್ಯ ಹೆಚ್ಚಿಸಬೇಕೆಂದು ಕನ್ನಡಪರ ಹೋರಾಟಗಾರ ಎಂ. ಶಿವಶಂಕರ ಹೇಳಿದರೆ, ಸಿನೆಮಾ ಮಂದಿರಗಳೂ ಸೇರಿದಂತೆ ಇತರ ಉದ್ಯಮಗಳ ತೆರಿಗೆ ಕಡಿತಗೊಳಿಸುವಂತೆ ಫಿಲಂ ಎಗ್ಸಿಬ್ಯೂಟರ್ಸ್ ಅಸೋಸಿಯೇಷನ್‌ನ ರಾಜಾರಾಂ ನುಡಿದರು.

ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ: ಮೈಸೂರು ಟೂರಿಸ್ಟ್ ಡೆಸ್ಟಿನೇಷನ್ ಆಗಬೇಕು, ಪಶ್ಚಿಮವಾಹಿನಿ ಬಳಿ ಕಾವೇರಿ ನದಿಯ ದ್ವೀಪ ಅಭಿವೃದ್ಧಿ ಹಾಗೂ ಮೈಸೂರಿಗೆ ಪ್ರತ್ಯೇಕ ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ರಚಿಸಬೇಕು ಎಂದ ಪತ್ರಕರ್ತ ಟಿ.ಗುರುರಾಜ್, ಇಲ್ಲಿನ ಪಾರಂಪರಿಕ ಕಟ್ಟಡಗಳ ರಿಪೇರಿಗೆ ಅನುದಾನ ಅಗತ್ಯವಿದೆ ಎಂದರು.

4 ಕಡೆ ಈಜುಕೊಳ: ಮೈಸೂರಿನ 4 ಕಡೆ ಈಜುಕೊಳ, ಕ್ರೀಡಾಂಗಣವಾಗಬೇಕು, ಮೈಸೂರನ್ನು ಬೃಹತ್ ನಗರ ಎಂದು ಘೋಷಣೆ, ಇನ್ನೂ 4 ಕಡೆ ತ್ಯಾಜ್ಯ ಸಂಗ್ರಹ, ರಿಂಗ್ ರೋಡ್ ಹೊರಭಾಗದ ನಿವಾಸಿಗಳಿಗೆ ಕಬಿನಿ, ಕೆಆರ್‌ಎಸ್ ನೀರು ಪೂರೈಕೆ ಮಾಡಲು ಮುಡಾದಿಂದ 150 ಕೋಟಿ ರೂ. ಅಂದಾಜು ಪಟ್ಟಿಗೆ ಅನುಮೋದನೆ ನೀಡಬೇಕೆಂದು ಮಾಜಿ ಮೇಯರ್ ಭೈರಪ್ಪ ತಿಳಿಸಿದರು.

ಏಕಗವಾಕ್ಷಿ ವ್ಯವಸ್ಥೆ: ಉದ್ಯಮಗಳಿಗೆ ಒಂದೇ ಸೂರಿನಡಿ ಅನುಮತಿ ನೀಡಲು ಸಿಂಗಲ್ ವಿಂಡೋ ಸಿಸ್ಟಂ, ಕೌಶಲ್ಯ ತರಬೇತಿ ಸೆಂಟರ್ ಸ್ಥಾಪನೆಯಾಗಬೇಕೆಂದು ಜಿಎಸ್‌ಎಸ್‌ಎಸ್ ಸಂಸ್ಥೆಯ ಶ್ರೀಹರಿ ಅಭಿಪ್ರಾಯಪಟ್ಟರೆ, ರಾಜಕಾಲುವೆ ಸಂರಕ್ಷಣೆ, ನಂಜನಗೂಡು ಹಳೇ ಸೇತುವೆಯ ರೈಲು ಹಳಿಯಲ್ಲಿ ಪಾರಂಪರಿಕ ರೈಲು ಮ್ಯೂಸಿಯಂ, ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ಕೆಡವದೇ ನವೀಕರಿಸಿ ಸಂರಕ್ಷಿಸಬೇಕೆಂದು ಇತಿಹಾಸ ತಜ್ಞ ಪ್ರೊ. ಎನ್.ಎಸ್. ರಂಗರಾಜು ಸಲಹೆ ನೀಡಿದರು.

ವಿಮಾನ ನಿಲ್ದಾಣ ಅಭಿವೃದ್ಧಿ: ವಿಮಾನ ನಿಲ್ದಾಣ ವಿಸ್ತರಣೆ, ವ್ಯಾಪಾರಕ್ಕೆ ಶಾಶ್ವತ ಸ್ಥಳ, 6 ತಿಂಗಳ ಮುಂಚಿತವಾಗಿ ದಸರಾ ಕಾಮಗಾರಿಗಳಾಗಬೇಕು, ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ ನೀಡಬೇಕೆಂದು ಸಿದ್ಧಾರ್ಥ ಹೋಟೆಲ್ ಗ್ರೂಪ್‌ನ ಪಿ.ವಿ. ಗಿರಿ ಅಭಿಪ್ರಾಯಪಟ್ಟರು.

ಡಿಸ್ನಿಲ್ಯಾಂಡ್: ಫಿಲಂ ಸಿಟಿ ಸ್ಥಳದಲ್ಲೇ ಡಿಸ್ನಿಲ್ಯಾಂಡ್ ನಿರ್ಮಾಣ, ಮೈಸೂರಲ್ಲಿ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಸೆಂಟರ್ ಬಂದರೆ ಇಲ್ಲಿನ ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರ ಅಭಿವೃದ್ಧಿಯಾಗಲಿದೆ ಎಂದು ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ತಿಳಿಸಿದ್ದಾರೆ.

ಸುಬ್ಬರಾಯನ ಕೆರೆಯಲ್ಲಿ ಈಜುಕೊಳ, ಕ್ರೀಡೆಗೆ ಒತ್ತು, ಯೋಗ ವಿವಿ, ಫುಡ್ ಸ್ಟ್ರೀಟ್, ಪಾರ್ಕಿಂಗ್ ವ್ಯವಸ್ಥೆ, ಉದ್ದಿಮೆಗಳ ಟ್ರೇಡ್ ಲೈಸೆನ್ಸ್ ವ್ಯವಸ್ಥೆ ರದ್ದುಪಡಿಸುವುದು, ತ್ಯಾಜ್ಯ ವಿಲೇವಾರಿ ಘಟಕ ಸೇರಿದಂತೆ ಇನ್ನಿತರ ಯೋಜನೆಗಳನ್ನು ಬಜೆಟ್‌ನಲ್ಲಿ ಸೇರಿಸುವಂತೆ ಹಲವರು ಸಭೆಯಲ್ಲಿ ಸಲಹೆ ನೀಡಿದರು.

ಡಾ. ಸಿ. ಕೃಷ್ಣ, ಕೆ.ಬಿ. ಲಿಂಗರಾಜು, ಸುರೇಶ್ ಕುಮಾರ್ ಜೈನ್, ಎಂ. ಮೋಹನ್‌ಕುಮಾರ್ ಗೌಡ, ಹೊಸಕೋಟೆ ಬಸವರಾಜು, ಪಿ.ಎನ್. ಚಂದ್ರಶೇಖರ್, ನಾಗರಾಜ್, ಸುಬ್ರಹ್ಮಣ್ಯ ರಾವ್, ಲಕ್ಷ್ಮಣ್ ಹೊಸಕೋಟೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ. ರಾಘವೇಂದ್ರ ಕಾರ್ಯದರ್ಶಿ ರಂಗಸ್ವಾಮಿ, ಎಕ್ಸಿಕ್ಯೂಟಿವ್ ಕಮಿಟಿ ಮೆಂಬರ್ ಬೀರೇಶ್, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ. ಹೆಗಡೆ ಸೇರಿದಂತೆ ಹಲವರು ಸಭೆಯಲ್ಲಿ ಅಭಿಪ್ರಾಯ ತಿಳಿಸಿದರು.

ಮಾನವ ಸರಪಳಿ ನಿರ್ಮಿಸಿ ಸೌಹಾರ್ದತೆ ಸಂದೇಶ

ಆಳುವವರು ಸಮರ್ಥರಾಗಿದ್ದರೆ ಇಂತಹ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ ; ಹಿರಿಯ ಸಾಹಿತಿ ದೇವನೂರ ಮಹಾದೇವ

ಮೈಸೂರು,ಜ.30(ಪಿಎಂ)- ಸೌಹಾರ್ದ ಕರ್ನಾಟಕದ ವತಿಯಿಂದ ಸಮಾಜದಲ್ಲಿ ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ಮಹಾತ್ಮ ಗಾಂಧಿ ಹುತಾತ್ಮ ದಿನವಾದ (ಜ.30) ಮಂಗಳವಾರ ಸೌಹಾರ್ದತಾ ಮಾನವ ಸರಪಳಿ ನಿರ್ಮಿಸಿ ಸೌಹಾರ್ದತೆಯ ಸಂದೇಶ ಸಾರಲಾಯಿತು.

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸಮಾವೇಶಗೊಂಡ ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರು, ಚಾಮರಾಜ ಒಡೆಯರ್ ವೃತ್ತದ ಸುತ್ತ ಹಾಗೂ ಅಶೋಕ ರಸ್ತೆಯಲ್ಲಿ ಪುರಭವನದ ಎದುರು ಕೆಲಕಾಲ ಮಾನವ ಸರಪಳಿ ನಿರ್ಮಿಸಿ ಸೌಹಾರ್ದತೆಯ ಅಗತ್ಯತೆ ಸಾರಿದರು. ಅಲ್ಲದೆ, ಅಶೋಕ ರಸ್ತೆಯ ಕೆಲವೆಡೆಯೂ ಕೆಲಕಾಲ ಮಾನವ ಸರಪಳಿ ನಿರ್ಮಿಸಿ, ಬಳಿಕ ಎಲ್ಲರೂ ಪುರಭವನದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಸಮಾವೇಶಗೊಂಡರು.


ಮೈಸೂರಿನ ಚಾಮರಾಜ ಒಡೆಯರ್ ವೃತ್ತದಲ್ಲಿ ಮಂಗಳವಾರ ಮಾನವ ಸರಪಳಿ ನಿರ್ಮಿಸಿ ಸೌಹಾರ್ದತೆ ಸಂದೇಶ ಸಾರಲಾಯಿತು.

ಇದೇ ವೇಳೆ ಮಾತನಾಡಿದ ಹಿರಿಯ ಸಾಹಿತಿ ದೇವನೂರ ಮಹಾದೇವ, 2024ನೇ ಲೋಕಸಭಾ ಚುನಾವಣೆಯಲ್ಲಿ ನಮ್ಮ-ನಿಮ್ಮ ಒಳಗಿರುವ ಎಲ್ಲವನ್ನು ಮರೆತು ಎಲ್ಲರೂ ಮನಸ್ಸು ಮಾಡಿದರೆ ಅಸಾಧ್ಯ ಎಂದುಕೊಂಡಿರುವುದು ಸಾಧ್ಯವಾಗಲಿದೆ. ಅದು ಆಗಲಿ ಎಂದು ಬಯಸುತ್ತೇನೆ ಎಂದು ತಿಳಿಸಿದರು.

ಇಂದು ಸೌಹಾರ್ದತೆ ಬೇಕೆಂದು ಕೇಳುತ್ತಿದ್ದೇವೆ. ಇದೆಂಥಹ ದಯಾನೀಯ ಸ್ಥಿತಿ. ಇಷ್ಟೊಂದು ಉತ್ಕಟವಾಗಿ ನಾವು ಕೇಳುತ್ತಿದ್ದೇವೆ ಎಂದರೆ, ನಮ್ಮ ಸಮಾಜದ ಸೌಹಾರ್ದತೆಯನ್ನು ಯಾರೋ ಹಾಳುಗೆಡವಿದ್ದಾರೆ ಎಂದೇ ಅರ್ಥ. ನಮ್ಮ ಬಾಳ್ವೆ ಮತ್ತು ಸಮಾಜಕ್ಕೆ ಯಾರೋ ವಿಷ ಹಾಕಿದ್ದಾರೆ. ನ್ಯಾಯದ ತಕ್ಕಡಿ ಅಲುಗಾಡುತ್ತಿದೆ. ಇಂತಹ ಪರಿಸ್ಥಿತಿ ತಂತಾನೆ ಸೃಷ್ಟಿಯಾಗಿದ್ದಲ್ಲ. ಇದು ಆಳ್ವಿಕೆ ಮಾಡುವವರು ಮಾಡಿದ್ದೇ ಆಗಿದೆ. ಅವರಿಗೆ ಸಮಸ್ಯೆಗಳ ಎದುರು ಮುಖಾಮುಖಿಯಾಗುವ ಸಾಮರ್ಥ್ಯ ಇಲ್ಲ. ಹಾಗಾಗಿ ಇಂತಹ ಸಮಸ್ಯೆಗಳು ಉಂಟಾಗಿವೆ ಎಂದು ಕಿಡಿಕಾರಿದರು.

ಆಳುವವರು ಸಮರ್ಥರಾಗಿದ್ದರೆ ಸಮಸ್ಯೆಗಳು ಉದ್ಭವವಾಗುತ್ತಿರಲಿಲ್ಲ. ಅಸಮರ್ಥರು ಆಳ್ವಿಕೆ ಮಾಡುತ್ತಿದ್ದಾರೆ. ಇವರು ತಾವೇ ಜಗತ್ತಿಗೆ ಪೈಲ್ವಾನರು ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಒಳಗಡೆ ಅವರು ಟೊಳ್ಳು. ಇಲ್ಲಿಯ ಬೆಲೆ ಏರಿಕೆ ನಿಯಂತ್ರಿಸಲಿಲ್ಲ. ನಿರುದ್ಯೋಗ ನಿವಾರಣೆ ಮಾಡಲಿಲ್ಲ. ಹಣ ದುಬ್ಬರ ಇಳಿಸಲಿಲ್ಲ. ಆಮೇಲೆ ಬಡವ-ಬಲ್ಲಿದರ ನಡುವೆ ಅಂತರ ಕಡಿಮೆ ಮಾಡಲಿಲ್ಲ. ಕೋವಿಡ್ ಕಾಲದಲ್ಲಿ ಕಾರ್ಪೊರೇಟ್ ವಲಯದ ಅಂದಾನಿಯ ಸಂಪತ್ತು ದ್ವಿಗುಣವಾಯಿತು ಹೇಗೆ? ಎಂದು ಪ್ರಶ್ನಿಸಿದರು.

ವಚನ ಪರಿಪಾಲನೆ ಮಾಡದವರ ಬಾಯಲ್ಲಿ ಜೈ ಶ್ರೀರಾಮ್: ಈ ಮೊದಲು ತೆರಿಗೆ ಪಾವತಿಸುವಂತೆ ಜನರ ರಕ್ತ ಹೀರುತ್ತಿದ್ದರು. ಆದರೆ ಈಗ ರಕ್ತ ಮತ್ತು ನರವನ್ನೂ ಹೀರುತ್ತಿದ್ದಾರೆ. ವಚನ ಪಾಲನೆಗೆ ಶ್ರೀರಾಮ ಒಂದು ಪ್ರತೀಕ. ಆದರೆ ವಚನ ಪಾಲನೆ ಮಾಡದೇ ಇದ್ದವರು ಇಂದು ಜೈ ಶ್ರೀರಾಮ್ ಎಂದು ಹೇಳುತ್ತಿದ್ದಾರೆ. ಆ ಮೂಲಕ ವಚನ ಪಾಲನೆಗೆ ಪ್ರತೀಕವಾದ ಶ್ರೀರಾಮನ ಚೈತನ್ಯವನ್ನೇ ಕೊಲ್ಲುತ್ತಿದ್ದಾರೆ. ಒಟ್ಟಿನಲ್ಲಿ ಇವರು ಅಸಮರ್ಥರು. ನಮಗೆ ಇಂತಹ ಪರಿಸ್ಥಿತಿ ಬರಬಾರದಿತ್ತು. ಆದರೆ ಬಂದಿದ್ದು, ಈಗ ನಾವು ನಮ್ಮಿಂದ ಸಾಧ್ಯವಿಲ್ಲ ಎಂದು ಕೈಕಟ್ಟಿ ಕುಳಿತುಕೊಳ್ಳಬಾರದು ಎಂದು ದೇವನೂರ ಮಹಾದೇವ ಕರೆ ನೀಡಿದರು.

ಈ ಆಳ್ವಿಕೆ ಹೋಗದೇ ಸಮಸ್ಯೆಗಳು ಬಗೆಹರಿಯುವುದಿಲ್ಲ. ನಾವು ಈ ಘಳಿಗೆಯಿಂದಲೇ ನಾವಿರುವಲ್ಲೇ ಜಾಗೃತಿ ಮೂಡಿಸಬೇಕು. ಸಾಮಾಜಿಕ ಜಾಲತಾಣಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಇಲ್ಲವಾದರೆ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಇಡೀ ದೇಶವೇ ಅಪಾಯದ ತುತ್ತ ತುದಿಯಲ್ಲಿ ಇದೆ. ನಾವು ಪಾರವಾಗಲು ಮಾತನಾಡಬೇಕು. ಕ್ರಿಯಾಶೀಲವಾಗಿ ನಡೆದುಕೊಳ್ಳಬೇಕು ಎಂದರು.

ಮಂಡ್ಯ ಕೆರೆಗೋಡು ಗ್ರಾಮದಲ್ಲಿ ಗಲಾಟೆ ಆಗುತ್ತಿದೆ. ಇದರ ಅರ್ಥವೇನು. ನಾವು ಮಾಡಬೇಕಾದನ್ನು ಮಾಡದ ಹಿನ್ನೆಲೆಯಲ್ಲಿ ಇಂತಹ ಗಲಾಟೆಗಳು ಆಗುತ್ತಿವೆ. ಈಗ ನಾವು ದೊಡ್ಡ ಮಟ್ಟದ್ದನ್ನೇ ಮಾಡಬೇಕೆಂದಿಲ್ಲ. ಸಣ್ಣ ಸಣ್ಣದನ್ನು ಮಾಡಿದರೆ ಸಾಕು. ಪರಸ್ಪರ ಹೆಗಲ ಮೇಲೆ ಕೈ ಹಾಕಿಕೊಳ್ಳುವುದೂ ಸೌಹಾರ್ದತೆ ಕಾಪಾಡಲು ಒಂದು ಪ್ರಕ್ರಿಯೆಯೇ ಆಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನೃಪತುಂಗ ಕನ್ನಡ ಶಾಲೆಯ ಮಕ್ಕಳಲ್ಲಿ ಕೆಲವರು ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಮಹಾತ್ಮ ಗಾಂಧಿ ಸೇರಿದಂತೆ ವಿವಿಧ ರಾಷ್ಟ್ರ ನಾಯಕರ ವೇಷಭೂಷಣದಲ್ಲಿ ಕಾಣಿಸಿಕೊಂಡರು. ಪ್ರಗತಿಪರ ಚಿಂತಕರಾದ ಪ್ರೊ.ಕೆ.ಎಸ್. ಭಗವಾನ್, ಅರವಿಂದ ಮಾಲಗತ್ತಿ, ಪ್ರೊ ಕಾಳಚನ್ನೇಗೌಡ, ರಂಗಕರ್ಮಿಗಳಾದ ರಾಮೇಶ್ವರಿ ವರ್ಮ, ಹೆಚ್.ಜನಾರ್ಧನ್ (ಜನ್ನಿ), ಹಿರಿಯ ಪತ್ರಕರ್ತರಾದ ಜಿ.ಪಿ. ಬಸವರಾಜು, ಕೃಷ್ಣಪ್ರಸಾದ್, ಟಿ.ಗುರುರಾಜ್, ದಸಂಸ ಮುಖಂಡರಾದ ಬೆಟ್ಟಯ್ಯ ಕೋಟೆ, ಚೋರನಹಳ್ಳಿ ಶಿವಣ್ಣ, ಆಲುಗೂಡು ಶಿವಕುಮಾರ್, ಕಲ್ಲಹಳ್ಳಿ ಕುಮಾರ್, ವಿವಿಧ ಸಂಘಟನೆಗಳ ಮುಖಂಡ ರಾದ ಸುನಂದಮ್ಮ, ಕೆ.ಬಸವರಾಜು, ಅಹಿಂದ ಜವರಪ್ಪ, ದೇವದಾಸ್, ದ್ಯಾವಪ್ಪ ನಾಯಕ, ಹೊಸ ಕೋಟೆ ಬಸವರಾಜು, ಮರಂಕಯ್ಯ, ಬಾಲಾಜಿ ರಾವ್, ಸ.ರ. ಸುದರ್ಶನ, ನೆಲೆ ಹಿನ್ನಲೆ ಗೋಪಾಲ ಕೃಷ್ಣ, ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ ಕಾರ್ಯದರ್ಶಿ ಸವಿತಾ, ಇನ್ಸಾಫ್ ಸಂಚಾಲಕ ನೂರ್ ಮರ್ಚೆಂಟ್, ಸೌಹಾರ್ದ ಕರ್ನಾಟಕ ಸಂಚಾಲಕ ಸಿ.ಬಸವಲಿಂಗಯ್ಯ, ಸಹ ಸಂಚಾಲಕ ಜಗದೀಶ್ ಸೂರ್ಯ ಮತ್ತಿತರರು ಪಾಲ್ಗೊಂಡಿದ್ದರು.

ಬಜೆಟ್‌ನಲ್ಲಿ ರಾಯಚೂರಿಗೆ ಏಮ್ಸ್ ಮಂಜೂರು ಮಾಡಿ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಸಿಎಂ ಸಿದ್ದರಾಮಯ್ಯ ಪತ್ರ

ಬೆಂಗಳೂರು, ಜ.30- ರಾಯಚೂರು ಜಿಲ್ಲೆಯಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ಏಮ್ಸ್) ಸ್ಥಾಪಿಸಬೇಕು ಎಂಬ ರಾಜ್ಯದ ಪ್ರಸ್ತಾವನೆಯನ್ನು ಮುಂಬರುವ ತಮ್ಮ ಬಜೆಟ್‌ನಲ್ಲಿ ಮಂಜೂರು ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದಾರೆ. ನಿರ್ಮಲಾ ಸೀತಾರಾಮನ್ ಅವರು ಫೆಬ್ರವರಿ ಒಂದರಂದು ಮಧ್ಯಂತರ ಬಜೆಟ್ ಮಂಡಿಸಲಿದ್ದಾರೆ.

ರಾಯಚೂರು ಕಲ್ಯಾಣ ಕರ್ನಾಟಕ ಭಾಗದ ಮಹತ್ವದ ಜಿಲ್ಲೆಯಾಗಿದೆ. ಅಲ್ಲಿ ಆರೋಗ್ಯ, ಶಿಕ್ಷಣ ಮತ್ತು ತಲಾ ಆದಾಯದ ಮಟ್ಟವು ಕರ್ನಾಟಕದ ಇತರ ಪ್ರದೇಶಗಳಿಗೆ ಹೋಲಿಸಿದರೆ ಇನ್ನೂ ಕಡಿಮೆ ಇದೆ. ರಾಯಚೂರು ಜಿಲ್ಲೆಯಲ್ಲಿ ಉನ್ನತ ಗುಣಮಟ್ಟದ ರೆಫರಲ್ ವೈದ್ಯಕೀಯ ಕೇಂದ್ರ ಸ್ಥಾಪಿಸುವ ತುರ್ತು ಅಗತ್ಯವಿದೆ ಎಂದು ಸಿಎಂ ಸಿದ್ದರಾಮಯ್ಯ ಅವರು ಜನವರಿ 29ರ ಕೇಂದ್ರ ಹಣಕಾಸು ಸಚಿವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.



ಕರ್ನಾಟಕದಲ್ಲಿ ಏಮ್ಸ್ ಸ್ಥಾಪನೆಯ ಪ್ರಸ್ತಾವನೆಯು ಸಾಕಷ್ಟು ಸಮಯದಿಂದ ಬಾಕಿ ಉಳಿದಿದೆ. ರಾಜ್ಯ ಸರ್ಕಾರವು ಸಂಭವನೀಯ ಸ್ಥಳಗಳನ್ನು ಪರಿಗಣಿಸಿ, ರಾಯಚೂರು ಏಮ್ಸ್ ಸ್ಥಾಪಿಸಲು ಅತ್ಯಂತ ಸೂಕ್ತ ಸ್ಥಳವಾಗಿದೆ ಎಂದು ಸಿಎಂ ಅಭಿಪ್ರಾಯಪಟ್ಟಿದ್ದಾರೆ.

ಆದ್ದರಿಂದ ಮುಂಬರುವ 2024-25ರ ಬಜೆಟ್‌ನಲ್ಲಿ ರಾಯಚೂರಿಗೆ ಏಮ್ಸ್ ಮಂಜೂರು ಮಾಡುವಂತೆ ನಾನು ನಿಮ್ಮಲ್ಲಿ ಮನವಿ ಮಾಡುತ್ತೇನೆ ಎಂದು ಸಿಎಂ ಹೇಳಿದ್ದಾರೆ.

ಸಿಎಂ ಸಿದ್ದರಾಮಯ್ಯ ಅವರು ತಮ್ಮ ಪತ್ರಕ್ಕೆ ಜೂನ್ 17, 2023 ರಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಮನ್ಸುಖ್ ಮಾಂಡವಿಯಾ ಅವರಿಗೆ ಬರೆದ ಪತ್ರದ ಪ್ರತಿಯನ್ನು ಸಹ ಲಗತ್ತಿಸಿದ್ದಾರೆ.

INDIA ಕೂಟಕ್ಕೆ ದೊಡ್ಡ ಹೊಡೆತ: ಚಂಡೀಗಢ ಮೇಯರ್ ಚುನಾವಣೆಯಲ್ಲಿ ಗೆದ್ದ ಬಿಜೆಪಿ

ಚಂಡೀಗಢ ಜ.30-ಚಂಡೀಗಢ ಮೇಯರ್ ಚುನಾವಣೆಯಲ್ಲಿ AAP-Congress ಮೈತ್ರಿಕೂಟಕ್ಕೆ ಭಾರಿ ಹಿನ್ನಡೆಯಾಗಿದೆ. ಈ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮನೋಜ್ ಕುಮಾರ್ ಸೋಂಕರ್ ಗೆಲುವು ಸಾಧಿಸಿದ್ದಾರೆ. ಲೋಕಸಭೆ ಚುನಾವಣೆಗೂ ಮುನ್ನ ಬಂದಿರುವ ಈ ಫಲಿತಾಂಶ ಇಂಡಿಯಾ ಮೈತ್ರಿಕೂಟಕ್ಕೆ ಹೊಡೆತ ಎಂದೇ ಪರಿಗಣಿಸಲಾಗುತ್ತಿದೆ. ಮನೋಜ್ ಕುಮಾರ್ 16 ಮತಗಳನ್ನು ಪಡೆದರೆ, ಎಎಪಿ ಅಭ್ಯರ್ಥಿ ಕುಲದೀಪ್ ಕುಮಾರ್ 12 ಮತಗಳನ್ನು ಪಡೆದರು. ಆದರೆ 8 ಮತಗಳು ರದ್ದಾಗಿವೆ.

ಫಲಿತಾಂಶದಲ್ಲಿ ಬಿಜೆಪಿ ರಿಗ್ಗಿಂಗ್ ಮಾಡಿದೆ ಎಂದು ಎಎಪಿ ಆರೋಪಿಸಿದೆ. ಎಎಪಿ ಕೌನ್ಸಿಲರ್ ಕಮಲಪ್ರೀತ್ ಮಾಧ್ಯಮಗಳ ಜೊತೆ ಮಾತನಾಡುತ್ತಾ ಮತಗಳನ್ನು ರದ್ದುಗೊಳಿಸಲಾಗಿದೆ ಎಂದು ಹೇಳಿದ್ದು. ಇದು ಮೋಸ. ಮತಗಳನ್ನು ಏಕೆ ರದ್ದುಗೊಳಿಸಲಾಗಿದೆ ಎಂಬುದನ್ನು ತಿಳಿಸಿಲ್ಲ ಎಂದು ಹೇಳಿದ್ದು.

ಚಂಡೀಗಢ ಮೇಯರ್ ಚುನಾವಣೆಗೆ ಜನವರಿ 18ರಂದು ಮತದಾನ ನಡೆಯಬೇಕಿತ್ತು. ಆದರೆ ಅಧ್ಯಕ್ಷರು ಅಸ್ವಸ್ಥರಾದ ನಂತರ ಚಂಡೀಗಢ ಆಡಳಿತವು ಫೆಬ್ರವರಿ 6ಕ್ಕೆ ಮುಂದೂಡಿತು. ಇದರ ವಿರುದ್ಧ ಆಮ್ ಆದ್ಮಿ ಪಕ್ಷ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಚುನಾವಣೆಯನ್ನು ಮುಂದೂಡುವ ಆಡಳಿತದ ಆದೇಶದ ವಿರುದ್ಧ ಕಾಂಗ್ರೆಸ್ ಮತ್ತು ಎಎಪಿಯ ಕೌನ್ಸಿಲರ್‌ಗಳು ಪ್ರತಿಭಟನೆ ನಡೆಸಿದ್ದರು. ಬಿಗಿ ಭದ್ರತೆಯ ನಡುವೆ ಜನವರಿ 30ರಂದು ಮತದಾನ ನಡೆಸುವಂತೆ ಹೈಕೋರ್ಟ್ ಸೂಚಿಸಿತ್ತು.

ಬಿಜೆಪಿ ಜೊತೆ ಮೈತ್ರಿಗೆ ಸಿದ್ಧ: ಗಣಿಧಣಿ ಜನಾರ್ದನ ರೆಡ್ಡಿ

ಕೊಪ್ಪಳ, ಜ.30- ಲೋಕಸಭೆ ಚುನಾವಣೆಗೂ ಮುನ್ನ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳಲು ಸಿದ್ಧ ಎಂದು ಗಣಿ ಉದ್ಯಮಿ ಹಾಗೂ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಸಂಸ್ಥಾಪಕ ಗಾಲಿ ಜನಾರ್ದನ ರೆಡ್ಡಿ ಸೋಮವಾರ ಪುನರುಚ್ಚರಿಸಿದ್ದಾರೆ. ಕೊಪ್ಪಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜನಾರ್ಧನ ರೆಡ್ಡಿ, 'ಪ್ರಧಾನಿ ನರೇಂದ್ರ ಮೋದಿ ಅವರನ್ನು ಮೂರನೇ ಬಾರಿಗೆ ಭಾರತದ ಪ್ರಧಾನಿಯಾಗಿ ನೋಡಲು ನಾನು ಬಯಸುತ್ತೇನೆ ಎಂದು ಅವರು ಹೇಳಿದರು.




ಅವೈಜ್ಞಾನಿಕ ಹಂಪ್‌ಗಳ ಬಗ್ಗೆ ಸಾರ್ವಜನಿಕರ ಆಕ್ರೋಶ ; ಸಂಬಂಧಿಸಿದವರ ವಿರುದ್ಧ ಕ್ರಮಕ್ಕೆ ಆಗ್ರಹ

ಬೋಗಾದಿ ರಸ್ತೆಯ ರೈಲ್ವೆ ಗೇಟ್ ಬಳಿ ಬಿಳಿ ಬಣ್ಣದ ಪಟ್ಟೆ ಮಾಸಿದ ಹಂಪ್‌ಗಳು

ಪ್ರಮಾಣಿತ ಅಳತೆ ಇಲ್ಲದೇ ಹಂಪ್‌ಗಳು ಏರುಪೇರು



ಮೈಸೂರಿನ ಬೋಗಾದಿ ರಸ್ತೆಯ ಕ್ರಾಫರ್ಡ್ ಭವನದ ಹಿಂಭಾಗದಲ್ಲಿರುವ ರೈಲ್ವೆ ಗೇಟ್ ದಾಟುವ ಮುನ್ನ ಎರಡು ಕಡೆಯಲ್ಲಿರುವ ಅವೈಜ್ಞಾನಿಕ ರಸ್ತೆ ಡುಬ್ಬಗಳು. ಬಿಳಿ ಪಟ್ಟೆ ಮಾಸಿ ಹೋಗಿರುವುದನ್ನೂ ಕಾಣಬಹುದು.


ರೆಂಬೆ-ಕೊಂಬೆಗಳ ಮರೆಯಲ್ಲಿರುವ ರೈಲ್ವೆ ಗೇಟ್‌ನ ಸೂಚನಾ ಫಲಕ

ಮೈಸೂರು, ಜ.30(ಪಿಎಂ)- ಅಪಘಾತ ತಪ್ಪಿಸಿ ಜೀವ ಉಳಿಸಬೇಕಾದ ರಸ್ತೆ ಹಂಪ್ಸ್ (ಡುಬ್ಬ) ಪ್ರಾಣ ತೆಗೆದರೆ ಅದು ದುರಂತವೇ ಸರಿ. ಮೈಸೂರು ನಗರದ ಬೋಗಾದಿ ರಸ್ತೆಯಲ್ಲಿ ರಾತ್ರೋರಾತ್ರಿ ನಿರ್ಮಿಸಿದ ಅವೈಜ್ಞಾನಿಕ ಹಂಪ್‌ಗಳು (ಬಿಳಿ ಪಟ್ಟೆ ಇಲ್ಲದಿದ್ದಾಗ ನಡೆದ ಅಪಘಾತ) ಮೂವರು ಯುವಕರನ್ನು ಬಲಿ ಪಡೆದಿವೆ.

ಇನ್ನು ಇದೇ ರಸ್ತೆಯಲ್ಲಿ (ರೈಲ್ವೆ ಗೇಟ್) ಹಾಕಲಾಗಿರುವ ಎರಡು ಹಂಪ್‌ಗಳಲ್ಲಿಯೂ ಬಿಳಿ ಬಣ್ಣ ಇಲ್ಲ. ಹಾಕಿದ್ದ ಬಿಳಿ ಬಣ್ಣ ಮಾಸಿ ಹೋಗಿ ಎಷ್ಟೋ ದಿನಗಳಾಗಿವೆ. ಅಷ್ಟೇ ಅಲ್ಲ, ಒಂದು ಬದಿಯಲ್ಲಿ ಎತ್ತರವಿದ್ದರೆ ಮತ್ತೊಂದು ಬದಿಯಲ್ಲಿ ತಗ್ಗಿದೆ. ಹೀಗೆ ಪ್ರತಿಫಲನ ಬಣ್ಣದ ಪಟ್ಟೆಗಳಿಲ್ಲದೆ, ಏರುಪೇರಿನಿಂದ ಕೂಡಿರುವ ಅವೈಜ್ಞಾನಿಕ ಹಂಪ್‌ಗಳು ಮೈಸೂರು ನಗರದ ಬಹುತೇಕ ಕಡೆಗಳಲ್ಲಿ ಇದ್ದು, ಅವುಗಳಿಗೆ ವೈಜ್ಞಾನಿಕ ಸ್ವರೂಪ ನೀಡಬೇಕೆಂಬುದು ನಾಗರಿಕರ ಆಗ್ರಹವಾಗಿದೆ.

ಬಿಳಿ ಬಣ್ಣದ ಪಟ್ಟೆಗಳನ್ನು ಹಂಪ್ಸ್‌ಗಳ ಮೇಲ್ಭಾಗ ಬಳಿಯಬೇಕು. ಜೊತೆಗೆ ಅದು ಹೆಚ್ಚು ಬೆಳಕು ಹೊರಹೊಮ್ಮುವ ಲುಮಿನಸ್ ಬಣ್ಣ ಆಗಿರಬೇಕು. ಇದು ಕೇಂದ್ರ ಸರ್ಕಾರ ರಚಿಸಿರುವ 'ಇಂಡಿಯನ್ ರೋಡ್ ಕಾಂಗ್ರೆಸ್‌ನ ಸಂಹಿತೆ'ಯಲ್ಲಿ ಉಲ್ಲೇಖಿಸಿರುವ ಅಂಶ ಎನ್ನುತ್ತಾರೆ ನಿವೃತ್ತ ಪೊಲೀಸ್ ಅಧಿಕಾರಿ ಶಂಕರೇಗೌಡ. ಆದರೆ ಮೈಸೂರಿನ ಬಹುತೇಕ ಹಂಪ್‌ಗಳಲ್ಲಿ ಬಿಳಿ ಪಟ್ಟೆಗಳೇ ಕಾಣಿಸದ ಪರಿಸ್ಥಿತಿ ನಿರ್ಮಾಣವಾಗಿದೆ. ಎಷ್ಟೋ ಹಂಪ್‌ಗಳ ಬಿಳಿ ಪಟ್ಟೆ ಮಾಸಿ ಹೋಗಿದ್ದರೆ, ಮತ್ತಷ್ಟು ಹಂಪ್‌ಗಳು ಬಿಳಿ ಪಟ್ಟೆಯ ಬಣ್ಣವನ್ನೇ ಕಂಡಿಲ್ಲ.

> ಐಆರ್‌ಸಿ (ಇಂಡಿಯನ್ ರೋಡ್ ಕಾಂಗ್ರೆಸ್) ಸಂಹಿತೆ 99-2018ರ ಪ್ರಕಾರ ರೋಡ್ ಹಂಪ್ಸ್ ಯಾವ ವಿಶೇಷಣದಲ್ಲಿ ಇರಬೇಕೆಂಬ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿದೆ. ಅದನ್ನು ಪಾಲನೆ ಮಾಡಬೇಕು. ಆದರೆ ಬಹುತೇಕ ಇದರ ಪಾಲನೆಯಾಗುತ್ತಿಲ್ಲ. ಈ ನಿಯಮಾವಳಿ ಪಾಲನೆ ಮಾಡದೇ ಯಾರದ್ದೋ ಒತ್ತಡಕ್ಕೆ ಹಂಪ್ಸ್ ಹಾಕುವ ಸನ್ನಿವೇಶದಲ್ಲಿ ರಸ್ತೆ ಅಪಘಾತಗಳು ಸಂಭವಿಸುವುದು ಸಾಮಾನ್ಯವಾಗಿದೆ. ಜೊತೆಗೆ ಹಂಪ್‌ಗಳಿಗೆ ಪ್ರತಿಫಲಿತ ಬಣ್ಣವನ್ನು ಕಡ್ಡಾಯವಾಗಿ ಹಾಕಬೇಕು. 45 ಮೀಟರ್ ಅಂತರದಲ್ಲಿ ರೋಡ್ ಹಂಪ್ ಇರುವ ಬಗ್ಗೆ ಸೂಚನಾ ಫಲಕ ಅಳವಡಿಸಬೇಕು. ಆದರೆ ಮಾರ್ಗಸೂಚಿಗಳನ್ನು ಬಹುತೇಕ ಪಾಲನೆ ಮಾಡದೇ ಹಿನ್ನೆಲೆಯಲ್ಲಿ ಈ ರೀತಿಯಲ್ಲಿ ಅಪಘಾತಗಳು ಸಂಭವಿಸುತ್ತಿವೆ. ರಸ್ತೆ ಸುರಕ್ಷತಾ ಸಮಿತಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿದ್ದು, ಯಾವುದೇ ಹಂಪ್ ಹಾಕುವಾಗಲೂ ರಸ್ತೆ ಸುರಕ್ಷತಾ ಸಮಿತಿ ಅಭಿಪ್ರಾಯ ಪಡೆಯಬೇಕೆಂಬುದನ್ನು ಕಡ್ಡಾಯಗೊಳಿಸಬೇಕು. ಏಕೆಂದರೆ ಸದರಿ ಸಮಿತಿಯಲ್ಲಿ ಎಲ್ಲಾ ಅಧಿಕಾರಿಗಳು ಸೇರಿದಂತೆ ನಾಗರಿಕರೂ ಇರುತ್ತಾರೆ.
>
> -ಶಂಕರೇಗೌಡ, ನಿವೃತ್ತ ಪೊಲೀಸ್ ಅಧಿಕಾರಿಗಳು.

ಬೋಗಾದಿ ರಸ್ತೆಯಲ್ಲಿ ಮೈಸೂರು ವಿವಿ ಕ್ರಾಫರ್ಡ್ ಭವನದ ಹಿಂಭಾಗದಲ್ಲಿರುವ ರೈಲ್ವೆ ಗೇಟ್‌ನ (ರೈಲ್ವೆ ಕ್ರಾಸಿಂಗ್) ಎರಡೂ ಕಡೆ ರಸ್ತೆಯಲ್ಲಿರುವ ಹಂಪ್ಸ್‌ಗಳಲ್ಲಿ ಬಿಳಿ ಪಟ್ಟೆಗಳೇ ಇಲ್ಲ. ನಿತ್ಯ ಇಲ್ಲಿ ಸಂಚರಿಸುವ ವಾಹನ ಸವಾರರಿಗೆ ಇಲ್ಲಿ ಹಂಪ್ಸ್ ಇವೆ ಎಂಬ ಎಚ್ಚರ ಇದ್ದರೆ, ಅಪರೂಪಕ್ಕೆ ಇಲ್ಲಿ ಸಾಗುವ ಸವಾರರು ಹಂಪ್ ಇರುವ ಅರಿವಿಲ್ಲದೆ, ವೇಗವಾಗಿ ಚಲಿಸಿದರೆ ಅಪಘಾತ ತಪ್ಪಿದ್ದಲ್ಲ. ಜೊತೆಗೆ ಈ ಎರಡು ಹಂಪ್‌ಗಳೂ ಏರುಪೇರಾಗಿದ್ದು, ಪ್ರಮಾಣಿತ ಆಕಾರ-ಅಳತೆ ಹೊಂದಿಲ್ಲ ಎಂಬುದನ್ನು ನೋಡಿದ ಯಾರೂ ಬೇಕಾದರೂ ಊಹಿಸಬಹುದು.

ಅಲ್ಲದೆ, ಸುಗಮ ಮತ್ತು ಸುರಕ್ಷಿತ ಸಂಚಾರಕ್ಕೆ ಅನುಕೂಲವಾಗುವಂತೆ ಇಲ್ಲಿ ರಸ್ತೆ ಮೇಲೆ ಯಾವುದೇ ರೇಖಾ ಚಿಹ್ನೆಗಳು ಇಲ್ಲ. ನಗರದ ವಿವಿಧ ಭಾಗಗಳಲ್ಲೂ ಇದೇ ಸನ್ನಿವೇಶ ಇದೆ. ಇನ್ನು ಕುಕ್ಕರಹಳ್ಳಿಕೆರೆ ಸಮೀಪ ರಸ್ತೆಬದಿಯಲ್ಲಿ 'ಮುಂದೆ ರೈಲ್ವೆ ಗೇಟ್ ಇರುವ' ಬಗ್ಗೆ ಸೂಚನಾ ಫಲಕ ಅಳವಡಿಸಿದ್ದರೂ ಸವಾರರಿಗೆ ಮಾತ್ರ ಅದು ಕಾಣದ ಪರಿಸ್ಥಿತಿಯಲ್ಲಿದೆ. ಕಾರಣ ಫಲಕವನ್ನು ಬಹುತೇಕ ಮರದ ರೆಂಬೆ-ಕೊಂಬೆಗಳು ಮರೆ ಮಾಡಿಕೊಂಡಿವೆ. ಇದರಿಂದ ಫಲಕ ಇದ್ದರೂ ಪ್ರಯೋಜನಕ್ಕೆ ಬಾರದಾಗಿದೆ. ಅಲ್ಲದೆ, ಇದೇ ರಸ್ತೆಗೆ ಸಂಬಂಧಿಸಿದಂತೆ 40 ಕಿ.ಮೀ. ವೇಗ ಮಿತಿ ಎಂದು ಫಲಕ ಅಳವಡಿಸಿದ್ದು, ಅದರಂತೆ ಇಲ್ಲಿ ವೇಗ ಮಿತಿ ಪಾಲನೆಯ ಮೇಲ್ವಿಚಾರಣೆಗೂ ಯಾವುದೇ ಕ್ರಮ ಕೈಗೊಂಡಂತೆ ಕಾಣುತ್ತಿಲ್ಲ.

> ಮೂವರ ಬಲಿ ಪಡೆದ ಬಳಿಕ ಕೆಲ ದಿನಗಳವರೆಗೆ ಚರ್ಚೆಯಾಗುತ್ತದೆ. ಅಲ್ಲಿಯವರೆಗೆ ಸಂಬಂಧಿಸಿದ ಅಧಿಕಾರಿ ವರ್ಗದವರು ಸೂಕ್ತ ಕ್ರಮ ವಹಿಸುವ ಭರವಸೆ ನೀಡಿ, ನಂತರದಲ್ಲಿ ಮರೆಯುತ್ತಾರೆ. ಇದಕ್ಕೆ ಪರಿಹಾರವೆಂದರೆ ಈಗ ಅಪಘಾತ ನಡೆದ ಸ್ಥಳದ ಸರಹದ್ದು ಹೊಂದಿರುವ ಪೊಲೀಸರ ವಿರುದ್ಧ ಕ್ರಮ ಆಗಬೇಕು. ಏಕೆಂದರೆ ನಿಯಮದ ಪ್ರಕಾರ ಈ ಎಲ್ಲದರ ಪರಿಶೀಲನೆ ಅವರ ಜವಾಬ್ದಾರಿಯಾಗಿದೆ. ಇಲ್ಲವಾದರೆ ಇಂತಹ ಘಟನೆಗಳು ಪುರಾವರ್ತನೆಯಾಗುತ್ತವೆ. ಈಗ ತಕ್ಷಣಕ್ಕೆ ಕ್ರಮ ಕೈಗೊಂಡರೆ ನಗರ ಇತರೆ ಸ್ಥಳಗಳಲ್ಲಿ ನಿಯಮಗಳು ಪಾಲನೆಯಾಗಲಿದೆ.
>
> -ಭಾಮೀ ಶೆಣೈ, ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ), ಮೈಸೂರು.

> ಹಂಪ್ ಹಾಕುವ ಉದ್ದೇಶ ಅಪಘಾತ ತಪ್ಪಿಸುವುದಾಗಿದೆ. ರಸ್ತೆ ಇಂಜಿನಿಯರ್, ಪೊಲೀಸರು, ವಾಹನ ಚಾಲಕರು ಸೇರಿದಂತೆ ಎಲ್ಲರೂ ಜವಾಬ್ದಾರಿ ಅರಿತರೆ ಅಪಘಾತ ತಪ್ಪಲಿದೆ. ಇನ್ನು ಸಂಬಂಧಿಸಿದ ಅಧಿಕಾರಿ ವರ್ಗದ ಎಲ್ಲರೂ ನಿಯಮದಂತೆ ಹಂಪ್ ನಿರ್ಮಿಸಿ, ಬಿಳಿ ಪಟ್ಟೆ ಹಾಕುವುದೂ ಸೇರಿದಂತೆ ಎಲ್ಲಾ ನಿಯಮಾವಳಿ ಪಾಲಿಸಲು ಮುಂದಾಗಬೇಕು.
>
> -ಪಿ.ರಾಜೇಂದ್ರ ಪ್ರಸಾದ್, ನಿವೃತ್ತ ಡಿಐಜಿ

ಹಲ್ಲರೆಯಲ್ಲಿ ಗುಂಪು ಘರ್ಷಣೆ ಪ್ರಕರಣ

ಎರಡೂ ಕಡೆಯ ಒಟ್ಟು 39 ಮಂದಿ ಬಂಧನ

▸ ಹಾಲಿ, ಮಾಜಿ ಶಾಸಕರು ಗ್ರಾಮಕ್ಕೆ ಭೇಟಿ; ಶಾಂತಿ ಕಾಪಾಡಿಕೊಳ್ಳಲು ಮನವಿ ▸ ಆಸ್ಪತ್ರೆಗೂ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಣೆ





ನಂಜನಗೂಡು ತಾಲೂಕಿನ ಹಲ್ಲರೆ ಗ್ರಾಮಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಹರ್ಷವರ್ಧನ್ ಪ್ರತ್ಯೇಕವಾಗಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ನಂಜನಗೂಡು/ಮಲ್ಕುಂಡಿ, ಜ.30– 'ಡಾ. ಬಿ.ಆರ್.ಅಂಬೇಡ್ಕರ್ ಮಾರ್ಗ' ನಾಮಫಲಕ ಅಳವಡಿಕೆ ವಿಚಾರವಾಗಿ ತಾಲೂಕಿನ ಹಲ್ಲರೆ ಗ್ರಾಮದಲ್ಲಿ ಸೋಮವಾರ ಸಂಜೆ ನಡೆದ ಗುಂಪು ಘರ್ಷಣೆಗೆ ಸಂಬಂಧಿಸಿದಂತೆ ಮೂರು ಪ್ರಕರಣಗಳು ದಾಖಲಾಗಿದ್ದು, ಪೊಲೀಸರು ಉಭಯ ಗುಂಪುಗಳಿಗೆ ಸೇರಿದ 39 ಮಂದಿಯನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿ ಎಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಈ ನಡುವೆ ಇಂದು ಶಾಸಕ ದರ್ಶನ್ ಧ್ರುವನಾರಾಯಣ್ ಮತ್ತು ಮಾಜಿ ಶಾಸಕ ಹರ್ಷವರ್ಧನ್ ಪ್ರತ್ಯೇಕವಾಗಿ ಹಲ್ಲರೆ ಗ್ರಾಮ ಮತ್ತು ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದ್ದಾರೆ. ನಿನ್ನೆ ನಡೆದ ಗುಂಪು ಘರ್ಷಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳಾದ ಜಗದೀಶ್, ಗೋಪಾಲಕೃಷ್ಣ, ಸಿಬ್ಬಂದಿಗಳಾದ ಕಿರಣ್‌ಕುಮಾರ್ ಮತ್ತು ನಾಗೇಶ್ ಗಾಯಗೊಂಡಿದ್ದು, ಈ ಸಂಬಂಧ ಸಬ್ ಇನ್ಸ್‌ಪೆಕ್ಟರ್ ಜಗದೀಶ್ ನೀಡಿದ ದೂರು ಮತ್ತು ಎರಡೂ ಗುಂಪಿನವರು ನೀಡಿದ ದೂರು ಹಾಗೂ ಪ್ರತಿ ದೂರನ್ನು ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಶಾಸಕ ದರ್ಶನ್ ಧ್ರುವನಾರಾಯಣ್ ಹಲ್ಲರೆ ಗ್ರಾಮಕ್ಕೆ ಭೇಟಿ ನೀಡಿ, ಎರಡೂ ಗುಂಪಿನವರು ಶಾಂತಿ–ಸೌಹಾರ್ದತೆಯಿಂದ ಜೀವನ ಸಾಗಿಸಬೇಕು. ಕಾನೂನು–ಸುವ್ಯವಸ್ಥೆ ಕಾಪಾಡಬೇಕೆಂದು ಮನವಿ ಮಾಡಿದರು. ಗುಂಪು ಘರ್ಷಣೆಯಲ್ಲಿ ಹಾನಿಗೊಳಗಾಗಿರುವ ಮನೆಗಳು ಹಾಗೂ ವಾಹನಗಳ ಮಾಲೀಕರಿಗೆ ಸೂಕ್ತ ಪರಿಹಾರ ಕೊಡಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ನಂತರ ಆಸ್ಪತ್ರೆಗೆ ಭೇಟಿ ನೀಡಿದ ಅವರು, ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು. ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮೈಸೂರಿನ ಮಾಜಿ ಮೇಯರ್ ಪುರುಷೋತ್ತಮ್, ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್ ರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಮಾಜಿ ಶಾಸಕ ಹರ್ಷವರ್ಧನ್ ಇಂದು ಸಂಜೆ ಗ್ರಾಮಕ್ಕೆ ಭೇಟಿ ನೀಡಿದ್ದು, ಉಭಯ ಗುಂಪಿನವರು ಶಾಂತಿ–ಸೌಹಾರ್ದತೆಯಿಂದ ಬಾಳಬೇಕೆಂದು ಅವರು ಮನವಿ ಮಾಡಿದರು. ಗ್ರಾಮದಲ್ಲಿ ಕಳೆದ ಒಂದು ವಾರದಿಂದಲೇ ವಿವಾದ ಸೃಷ್ಟಿಯಾಗಿದ್ದು, ಈ ಸಂಬಂಧ ತಾವು ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೂ ಮಾತನಾಡಿದ್ದಾಗಿಯೂ, ತಾಲೂಕು ಆಡಳಿತ ಮತ್ತು ಪೊಲೀಸರ ವೈಫಲ್ಯದಿಂದ ಈ ಘಟನೆ ನಡೆದಿದೆ ಎಂದು ಆರೋಪಿಸಿದರು.

ತಾಲೂಕು ಆಡಳಿತ ಶೀಘ್ರದಲ್ಲೇ ಶಾಂತಿ ಸಭೆ ನಡೆಸಿ ಗ್ರಾಮದಲ್ಲಿ ಶಾಂತಿ ನೆಲೆಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ನಂತರ ಅವರು ಆಸ್ಪತ್ರೆಗೆ ತೆರಳಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ ಇನ್ನಿತರರಿದ್ದರು.

ಲೋಕಸಭಾ ಚುನಾವಣೆಯಲ್ಲಿ

ಬಿ.ಸೋಮಶೇಖರ್‌ಗೆ ಚಾ.ನಗರ ಕ್ಷೇತ್ರದ 'ಕೈ' ಟಿಕೆಟ್ ನೀಡಿ

ದಲಿತ ಪ್ರಗತಿಪರ ಸಂಘಟನೆ ತಾಲೂಕು ಒಕ್ಕೂಟದ ಸಂಚಾಲಕ ಎಸ್.ಆರ್.ಶಶಿಕಾಂತ್ ಒತ್ತಾಯ



ತಿ.ನರಸೀಪುರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ದಲಿತ ಪ್ರಗತಿಪರ ಸಂಘಟನೆ ತಾಲೂಕು ಒಕ್ಕೂಟದ ಸಂಚಾಲಕ ಸೋಸಲೆ ಎಸ್.ಆರ್.ಶಶಿಕಾಂತ್ ಮಾತನಾಡಿದರು.

ತಿ.ನರಸೀಪುರ, ಜ.30– ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧಿಸಲು ಮಾಜಿ ಸಚಿವ ಬಿ.ಸೋಮಶೇಖರ್ ಅವರಿಗೆ ಕಾಂಗ್ರೆಸ್ ಪಕ್ಷ ಅವಕಾಶ ಮಾಡಿಕೊಡಬೇಕು ಎಂದು ದಲಿತ ಪ್ರಗತಿಪರ ಸಂಘಟನೆ ತಾಲೂಕು ಒಕ್ಕೂಟದ ಸಂಚಾಲಕ ಸೋಸಲೆ ಎಸ್.ಆರ್.ಶಶಿಕಾಂತ್ ಒತ್ತಾಯಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಸೋಲಿಸಲು ಕಾಂಗ್ರೆಸ್ ಹೈಕಮಾಂಡ್ ಉತ್ತಮ ಅಭ್ಯರ್ಥಿಗೆ ಟಿಕೆಟ್ ನೀಡಬೇಕು. ಈ ನಿಟ್ಟಿನಲ್ಲಿ ಜೆ.ಹೆಚ್.ಪಟೇಲ್, ಹೆಚ್.ಡಿ.ದೇವೇಗೌಡರ ಸರ್ಕಾರದಲ್ಲಿ ಸಚಿವರಾಗಿ ಹಲವಾರು ಅಭಿವೃದ್ಧಿ ಕಾರ್ಯ ಅನುಷ್ಠಾನಕ್ಕೆ ತಂದು ಸ್ವಾಭಿಮಾನಿ ಎಂದೇ ಹೆಸರಾದ ಮುತ್ಸದ್ಧಿ ರಾಜಕಾರಣಿ ಬಿ.ಸೋಮಶೇಖರ್‌ಗೆ ಅವಕಾಶ ನೀಡಬೇಕು ಎಂದರು.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಎಲ್ಲಾ ಧರ್ಮವನ್ನು ಸಮಾನವಾಗಿ ಕಾಣುವ, ಸಾಮಾಜಿಕ ನ್ಯಾಯ, ಅಧಿಕಾರ ನೀಡುವ ಸರ್ಕಾರ ಅಧಿಕಾರಕ್ಕೆ ಬರಬೇಕು. ಹೀಗಾಗಿ ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಜವಾಬ್ದಾರಿ ಪ್ರಜ್ಞಾವಂತ ನಾಗರಿಕರ ಮೇಲಿದೆ. ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಈಗಾಗಲೇ ಹಲವು ಮುಖಂಡರು ಲಾಬಿ ಆರಂಭಿಸಿದ್ದಾರೆ. ಆದರೆ ಕಳೆದ 10 ವರ್ಷಗಳ ಕಾಲ ಸಂಸದರಾಗಿದ್ದ ದಿ.ಧ್ರುವನಾರಾಯಣ್ ಅವರು ಹಲವು ಅಭಿವೃದ್ಧಿ ಕಾರ್ಯಗಳ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಹೀಗಾಗಿ ನಾವು ಪ್ರಸ್ತುತ ಅಂತಹ ಅರ್ಹತೆ ಇರುವ ನಾಯಕರನ್ನು ಆಯ್ಕೆ ಮಾಡಬೇಕಿದೆ. ಕಳೆದ ಚುನಾವಣೆಗಳಲ್ಲಿ ಬಿಜೆಪಿ ಸೋಲಿಸಬೇಕೆಂಬ ಕಾರಣಕ್ಕೆ ನಾವು ಕಾಂಗ್ರೆಸ್‌ನಿಂದ ಯಾರೇ ಅಭ್ಯರ್ಥಿಯಾದರೂ ಅವರಿಗೆ ಮತ ನೀಡುತ್ತಿದ್ದೇವು. ಆದರೆ ಇದೀಗ ಬದಲಾದ ಪರಿಸ್ಥಿತಿಯಲ್ಲಿ ಉತ್ತಮ ಅಭ್ಯರ್ಥಿ ಆಯ್ಕೆ ಅನಿವಾರ್ಯ. ಹೀಗಾಗಿ ಹಿರಿಯರು, ಅನುಭವಿ ರಾಜಕಾರಣಿ, ಮಾಜಿ ಸಚಿವ ಬಿ.ಸೋಮಶೇಖರ್ ಅವರಿಗೆ ಕಾಂಗ್ರೆಸ್ ಪಕ್ಷ ಚಾಮರಾಜನಗರ ಲೋಕಸಭಾ ಕ್ಷೇತ್ರದ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದರು.

ರಾಜಕೀಯ ಕಾರಣಕ್ಕೆ ಅಭ್ಯರ್ಥಿ ಆಯ್ಕೆ ಮಾಡಬೇಡಿ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜಕೀಯ ಕಾರಣಕ್ಕೆ ಅಭ್ಯರ್ಥಿ ಆಯ್ಕೆ ಮಾಡುವುದನ್ನು ಬಿಟ್ಟು ಅಭಿವೃದ್ಧಿ ಪರ, ಗೆಲ್ಲುವ ಅವಕಾಶ ಹಾಗೂ ಜನಾಭಿಪ್ರಾಯ ಇರುವವರಿಗೆ ಅವಕಾಶ ಮಾಡಿಕೊಡುವ ಮೂಲಕ ಕ್ಷೇತ್ರದಲ್ಲಿ ತಮ್ಮ ವರ್ಚಸ್ಸು ಮತ್ತಷ್ಟು ವೃದ್ಧಿಸಲು ಮುಂದಾಗಬೇಕು ಎಂದು ಮನವಿ ಮಾಡಿದರು. ಈ ವೇಳೆ ಮೂಗೂರು ಶೇಷಣ್ಣ ಪಿ.ನಿಂಗರಾಜು, ಎಸ್.ನಂಜುಂಡಯ್ಯ, ಕಿರಗಸೂರು ಗ್ರಾಪಂ ಸದಸ್ಯ ಮನ್ನೆಹುಂಡಿ ನಾಗರಾಜು, ಕೊಳತ್ತೂರು ಮಂಜುನಾಥ್, ಕಾಂತರಾಜು, ಜಯರಾಮ್, ರಾಜಪ್ಪ, ಕೆ.ಬಸವರಾಜು, ಧರ್ಮರತ್ನ ಕುಮಾರ್, ಸಿದ್ದಮಲ್ಲಯ್ಯ, ಗಂಗಾಧರ್, ಸಿದ್ದಪ್ಪ, ನವಿಲೂರು ರಮೇಶ್, ಪುಟ್ಟಸ್ವಾಮಿ, ನಾಗರಾಜು, ಮಹೇಶ್, ಸ್ವಾಮಿ, ಗಿರಿ, ಸಂತೋಷ್, ಮಹದೇವಸ್ವಾಮಿ, ಕೃಷ್ಣಾಪುರ ಗಂಗಾಧರ್, ಶಾಂತರಾಜು ಇದ್ದರು.

ಫೆ.24, ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ

ಬೆಟ್ಟದಪುರ, ಜ.30– ಫೆ.23ರಂದು ಗಿರಿಜಾ ಕಲ್ಯಾಣ ಹಾಗೂ 24 ರಂದು ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಲಿದ್ದು, ಬೆಟ್ಟದಪುರ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ರಥೋತ್ಸವ ಯಶಸ್ಸಿಗೆ ಸಹಕರಿಸಬೇಕು ಎಂದು ಹುಣಸೂರು ಉಪವಿಭಾಗಾಧಿಕಾರಿ ಮೊಹಮ್ಮದ್ ಹ್ಯಾರೀಸ್ ಸುಮೈರ್ ತಿಳಿಸಿದರು.

ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ದೇವಸ್ಥಾನದ ಆವರಣದಲ್ಲಿ ರಥೋತ್ಸವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಹಿಂದಿನಿಂದಲೂ ಸಂಪ್ರದಾಯದಂತೆ ನಡೆದು ಬಂದಿರುವ ರಥೋತ್ಸವವನ್ನು ಈ ಬಾರಿಯೂ ಅದ್ಧೂರಿಯಾಗಿ ಆಚರಿಸಬೇಕು. ಇದಕ್ಕೆ ಗ್ರಾಮಸ್ಥರ ಸಹಕಾರ ಅವಶ್ಯಕ. ಜನರು ಒಟ್ಟಾಗಿ ಸೇರಿ ರಥೋತ್ಸವದಲ್ಲಿ ಪಾಲ್ಗೊಳ್ಳಬೇಕು ಎಂದ ಅವರು, ರಥೋತ್ಸವದಲ್ಲಿ ನೈರ್ಮಲ್ಯತೆಯ ಬಗ್ಗೆ ಜಾಗೃತಿ ಮೂಡಿಸಬೇಕಾಗಿದ್ದು, ಸ್ವಚ್ಛತೆಯ ಬಗ್ಗೆ ಎಚ್ಚರ ವಹಿಸಿ ಎಂದರು.

ಹುಲಿ ದಾಳಿ: ರೈತನಿಗೆ ಗಾಯ

ಕ್ಷಿಪ್ರ ಕಾರ್ಯಾಚರಣೆಯಲ್ಲಿ ಹುಲಿ ಸೆರೆ



ನಂಜನಗೂಡು, ಜ.30– ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತನ ಮೇಲೆ ಹುಲಿ ದಾಳಿ ನಡೆಸಿ ಗಾಯಗೊಳಿಸಿರುವ ಘಟನೆ ತಾಲೂಕಿನ ನಾಗಣಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಸುರೇಶ್ (45) ಗಾಯಗೊಂಡಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಂಗಳವಾರ ಮಧ್ಯಾಹ್ನ ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಹುಲಿ ಸುರೇಶ್ ಮೇಲೆ ಏಕಾಏಕಿ ದಾಳಿ ನಡೆಸಿ ಗಾಯಗೊಳಿಸಿದ್ದು, ಈ ವೇಳೆ ಅಕ್ಕಪಕ್ಕದಲ್ಲಿದ್ದ ಕೆಲಸಗಾರರು ಕೂಗಿಕೊಂಡಿದ್ದರಿಂದ ಹುಲಿ ಸ್ಥಳದಿಂದ ಪರಾರಿಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಎಸಿಎಫ್ ಪರಮೇಶ್, ಆರ್‌ಎಫ್‌ಓ ನಾರಾಯಣ್ ಪರಿಶೀಲನೆ ನಡೆಸಿ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಲು ನೆರವಾದರು.

ಹುಲಿ ಸೆರೆ: ರೈತನನ್ನು ಗಾಯಗೊಳಿಸಿ ಪರಾರಿಯಾಗಿದ್ದ ಹುಲಿ ಸೆರೆಗಾಗಿ ಕಾರ್ಯಾಚರಣೆ ಕೈಗೊಂಡ ಎಸಿಎಫ್ ಪರಮೇಶ್, ಆರ್‌ಎಫ್‌ಓ ನಾರಾಯಣ್ ಹಾಗೂ ಸಿಬ್ಬಂದಿ ಬಳ್ಳೂರು ಹುಂಡಿ ಗ್ರಾಮದ ಬಳಿ ಹುಲಿಗೆ ಅರವಳಿಕೆ ಚುಚ್ಚು ಮದ್ದು ನೀಡಿ ಬಲೆಹಾಕಿ ಸೆರೆ ಹಿಡಿಯಲು ಯಶಸ್ವಿಯಾದರು. ಇದು ಗಾಯಗೊಂಡಿರುವ ಹೆಣ್ಣು ಹುಲಿಯಾಗಿದ್ದು, ಅದರ ಸ್ಥಿತಿ ಗಂಭೀರವಾಗಿದೆ. ಈ ಹಿನ್ನೆಲೆಯಲ್ಲಿ ಅದನ್ನು ಮೈಸೂರು ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ರವಾನಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಹುಲಿ ದಾಳಿ: ಹಸು ಬಲಿ



ಹುಲಿ ದಾಳಿಯಿಂದ ಹಸು ಬಲಿಯಾಗಿರುವುದು

ಹೆಚ್.ಡಿ.ಕೋಟೆ, ಜ.30– ಹುಲಿ ದಾಳಿಗೆ ಸಾವಿರಾರು ರೂ. ಬೆಲೆ ಬಾಳುವ ಹಸು ಬಲಿಯಾಗಿರುವ ಘಟನೆ ತಾಲೂಕಿನ ಮೊತ್ತ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಗ್ರಾಮದ ನಿವಾಸಿ ಬಸವರಾಜಪ್ಪ ಅವರ ಪುತ್ರ ಬಸವಣ್ಣ ಅವರಿಗೆ ಸೇರಿದ ಹಸು ಬಲಿಯಾಗಿದ್ದು, ಸುಮಾರು 50 ಸಾವಿರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಇಂದು ಮಧ್ಯಾಹ್ನ ಬಸವಣ್ಣನವರು ಜಮೀನಿನಲ್ಲಿ ಹಸು ಮೇಯಿಸುತ್ತಿದ್ದ ವೇಳೆ ಹುಲಿ ಏಕಾಏಕಿ ದಾಳಿ ನಡೆಸಿ ಎಳೆದೊಯ್ಯಲು ಪ್ರಯತ್ನಿಸಿದೆ. ಈ ವೇಳೆ ರೈತ ಬಸವಣ್ಣ ಕೂಗಿಕೊಂಡಿದ್ದಾರೆ. ಈ ವೇಳೆ ಹುಲಿ ಹಸು ಬಿಟ್ಟು ಪರಾರಿಯಾಗಿದೆ. ಅಷ್ಟರಲ್ಲಿ ಹಸು ಮೃತಪಟ್ಟಿದೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳಾದ ನಾರಾಯಣ, ಸುರೇಶ್, ಚನ್ನೇಗೌಡ ಪರಿಶೀಲನೆ ನಡೆಸಿದರು.

ರೈತ ಬಸವಣ್ಣ ಮಾತನಾಡಿ, ಈ ಭಾಗದಲ್ಲಿ ಹಲವು ಬಾರಿ ಹುಲಿ ಕಾಣಿಸಿಕೊಂಡಿದ್ದು, ಈ ಬಗ್ಗೆ ಅರಣ್ಯಾಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಭಾಗದ ರೈತರು ಜಮೀನಿಗೆ ತೆರಳಲು ಭಯಪಡುತ್ತಿದ್ದಾರೆ. ಹೀಗಾಗಿ ಅರಣ್ಯಾಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಂಡು ಹುಲಿ ಸೆರೆಗೆ ಮುಂದಾಗಬೇಕು ಎಂದರು. ಅಲ್ಲದೇ ಅರಣ್ಯ ಇಲಾಖೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಬ್ಲ್ಯೂ ಸ್ಟಾರ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗಸಮುದ್ರ (ಕ)	4 ಪ್ರದರ್ಶನಗಳು
ರಾಜಕಮಲ್	
ಫೈಟರ್ (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಟೇರ (ಕ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬ್ಯಾಚುಲರ್ ಪಾರ್ಟಿ (ಕ): ಬೆ.10.10ಕ್ಕೆ, ಮ.1ಕ್ಕೆ, ರಾ.7.10ಕ್ಕೆ, ಕಾಟೇರ (ಕ): ಮ.3.50ಕ್ಕೆ, ಮಲೈಕೊಟ್ಟೈ ವಾಲಿಬನ್ (ಮ): ರಾ.10.05ಕ್ಕೆ.
ಸ್ಕ್ರೀನ್ 2	ಅಲೆಕ್ಸಾ (ಕ): ಬೆ.10.15ಕ್ಕೆ, ಕೇಸ್ ಆಫ್ ಕೊಂಡಾಣ (ಕ): ಮ.1ಕ್ಕೆ, ಹನುಮಾನ್ (ಕ): ಮ.3.50ಕ್ಕೆ, ಫೈಟರ್ (3ಡಿ)(ಹಿಂ): ಸಂ.6.55ಕ್ಕೆ, ಫೈಟರ್ (ಹಿಂ): ರಾ.10.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ಕಾಟೇರ (ಕ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.10.25ಕ್ಕೆ, ಫೈಟರ್ (ಹಿಂ): ರಾ.7.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ.9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ, ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥಲ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸುಗಳು

10ನೇ ದಿನ, ಬುಧವಾರ 31-1-2024

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ವಿಜಯವಾಡ ಪ್ಲೇಟ್ ಡಿII—1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಹಿಯರ್ ಐ ಕಮ್ 2. ವೈಟ್‌ಲೈಸ್ 3. ಸೂಪರ್ ಸೆಕ್ಸಿ

II. ಗೇರುಸೊಪ್ಪ ಪ್ಲೇಟ್–1100 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಕಂಟ್ರೀಸ್ ಮೇಜರ್ 2. ಟಾಪ್ ರ್‍ಯಾಂಕ್ 3. ರೂಮರ್ ಲೇಡಿ

III. ವಿಜಯವಾಡ ಪ್ಲೇಟ್ ಡಿI—1400 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1 ಸ್ಕ್ವಾಂಟೋ 2. ಸ್ಟೆಪ್ ಆಫ್ ಗರ್ಲ್ 3 ಶಿವಲಿಕ್ ಸೌಂಡ್

IV. ಫಾರ್ಮಲ್ ಇನ್‌ವಿಟೇಷನ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ರೈಸಿಂಗ್ ಸನ್ 2. ಗಿನ್ ಟೋಕಿ 3. ಬ್ರೇಕ್ ಅವೇ

V. M. ಗೋವಿಂದಪ್ಪ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.4.00ಕ್ಕೆ
1. ಬ್ರೇವ್ ಟ್ರೂಪರ್ 2. ಟಾಮ್ ಕ್ರೂಸರ್ 3. ಸೀಬಾ

VI. ಕ್ರಿಸ್ಟಲ್ ಮ್ಯಾನ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಸರ್‌ಕಾಲ್‌ಕ್ಯೂಲಸ್ 2. ಎಕ್ಸ್‌ಬರೆನ್ಸ್ 3. ಔರೆಲಿ

VII. ಮೈಸೂರ್ ಬ್ಲೂ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಗ್ರೇಟ್ ಹೋಪ್ 2. ಉದುಕೈ 3. ಕೊಯಾಟೆ ಗರ್ಲ್

ದಿನದ ಅತ್ಯುತ್ತಮ	ರೈಸಿಂಗ್ ಸನ್
ಡಬ್ಬಲ್	ಹಿಯರ್ ಐ ಕಮ್, ಬ್ರೇವ್ ಟ್ರೂಪರ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಸತ್ಯನಾರಾಯಣ ನಿಧನ



ಸರಗೂರು, ಜ.30– ಪಟ್ಟಣದ ಖ್ಯಾತ ಜ್ಯೋತಿಷಿ ಲೇ.ಜಿ.ಕೆ. ಸುಬ್ಬಣ್ಣನವರ ಸಹೋದರ ಸತ್ಯನಾರಾಯಣ ಉರುಫ್ ಸತ್ಯಪ್ಪ (70) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಸರಗೂರು ತಾಲೂಕು ಬ್ರಾಹ್ಮಣ ಸಂಘ ಸಂತಾಪ ಸೂಚಿಸಿದೆ.


ಜಿ.ಡಿ
ಹರೀಶ್‌ಗೌಡ
ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
iwin
8123313133
ಶುಭಕೋರುವವರು
ದುರ್ಗಾ
ಗ್ರೂಪ್ಸ್